ಶುಕ್ರವಾರ, ಅಕ್ಟೋಬರ್ 21, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನೈಜ ಘಟನೆ ಆಧಾರಿತ 'ಹೆಡ್‌ಬುಷ್' ಸಿನಿಮಾ ಮೂಲಕ ನಟಿ ಶ್ರುತಿ ಹರಿಹರನ್ 'ರತ್ನಪ್ರಭಾ'ಳಾಗಿ ಮತ್ತೆ ತೆರೆಗೆ ಮರಳುತ್ತಿದ್ದಾರೆ...



ಶುಕ್ರವಾರ, ಅಕ್ಟೋಬರ್ 21, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ದೀಪಾವಳಿ ಅಂಗವಾಗಿ ಮುಂಬೈನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ರಕುಲ್ ಪ್ರೀತ್‌ಸಿಂಗ್ ಪಾಲ್ಗೊಂಡಿದ್ದರು



ಶುಕ್ರವಾರ, ಅಕ್ಟೋಬರ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 291 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾರತೀಯ ಸ್ಪರ್ಧಾ ಆಯೋಗದ ಕ್ರಮ
ಗೂಗಲ್‌ಗೆ ದಂಡ 12

ಮೀಸಲಾತಿ ಹೆಚ್ಚಳಕ್ಕೆ ಸುಗ್ರೀವಾಜ್ಞೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,203 ▲	17,564 ▲	₹51,600 (ಬೆಂಗಳೂರು) ▼	₹57,400 (ಬೆಂಗಳೂರು) ▼	82.79 ▲

ಪೋಷಕರ ಹೆಗಲಿಗೆ ಖರ್ಚುವೆಚ್ಚಗಳ ನಿರ್ವಹಣೆಯ ಹೊಣೆ

ಸರ್ಕಾರಿ ಶಾಲೆ: ತಿಂಗಳಿಗೆ ₹100 ದೇಣಿಗೆ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ವರ್ಗಾವಣೆ ಪ್ರಮಾಣ ಪತ್ರ ಪಡೆಯುವಾಗ, ವಿಶೇಷ ಸಂದರ್ಭಗಳಲ್ಲಿ ಒಂದಷ್ಟು ವಂತಿಗೆ ಪಡೆಯುತ್ತಿದ್ದ ಸರ್ಕಾರಿ ಶಾಲೆಗಳು ಇನ್ನು ಮುಂದೆ ನಿತ್ಯದ ವೆಚ್ಚಗಳಿಗೂ ಮಕ್ಕಳ ಪೋಷಕರಿಂದ ಹಣ ಸಂಗ್ರಹಿಸಲು ಸರ್ಕಾರವೇ ಅಧಿಕೃತ ಸಮ್ಮತಿ ನೀಡಿದೆ.

ರಾಜ್ಯದ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಅಗತ್ಯವಿರುವ ಖರ್ಚುವೆಚ್ಚಗಳಿಗಾಗಿ ಮಕ್ಕಳ ಪೋಷಕರಿಂದ ದೇಣಿಗೆ ರೂಪದಲ್ಲಿ ಪ್ರತಿ ತಿಂಗಳು ₹ 100 ಸಂಗ್ರಹಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ (ಎಸ್‌ಡಿಎಂಸಿ) ಅನುಮತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಸರ್ಕಾರದ ಈ ನಡೆ ಶಿಕ್ಷಣದ ಮೂಲಭೂತ ಹಕ್ಕಿನ ಉಲ್ಲಂಘನೆ, ಕಡ್ಡಾಯ ಶಿಕ್ಷಣ ಹಕ್ಕು ಮೊಟಕುಗೊಳಿಸುವ ಹುನ್ನಾರ ಎಂದು ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಶಾಲಾ ನಿರ್ವಹಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಸರ್ಕಾರದ ಮಂಜೂರಾತಿ ಇಲ್ಲವಾದಾಗ, ಅನುದಾನದ ಕೊರತೆ ಎದುರಾದಾಗ ಸ್ಥಳೀಯವಾಗಿ ಸುಗಮ ನಿರ್ವಹಣೆ ಸಾಧ್ಯವಾಗಿಸಲು ಸರ್ಕಾರ 'ನಮ್ಮ ಶಾಲೆ-ನನ್ನ ಕೊಡುಗೆ' ಯೋಜನೆ ರೂಪಿಸಿದೆ. ಈ ಯೋಜನೆ ಅನ್ವಯ ಸಾರ್ವಜನಿಕರಿಂದ ಆರ್ಥಿಕ ಸಹಾಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆದರೂ, ಪೋಷಕರಲ್ಲಿ ಶಾಲಾ ಚಟುಚಟಿಕೆ, ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಕೊಡುವಂತೆ ಮಾಡಲು ಮಕ್ಕಳ ಪೋಷಕರು, ತಂದೆ, ತಾಯಿಯರ ಮನವೊಲಿಸಿ ಪ್ರತಿ ತಿಂಗಳು ಹಣವನ್ನು ಪಡೆಯಬೇಕು. ಹಣಕ್ಕಾಗಿ ಬಲವಂತ ಮಾಡಬಾರದು. ಸಂಗ್ರಹಿಸಿದ ಹಣವನ್ನು ಎಸ್‌ಡಿಎಂಸಿ ಖಾತೆಗೆ ಜಮೆ ಮಾಡಬೇಕು' ಎಂದು ಸೂಚಿಸಲಾಗಿದೆ.

ಸಂಗ್ರಹಿಸಿದ ಅನುದಾನ ಯಾವಯಾವ ಕಾರ್ಯಕ್ಕೆ ಬಳಕೆ ಮಾಡಿಕೊಳ್ಳಬೇಕು ಎನ್ನುವ ಕುರಿತು ಆದ್ಯತಾ ಪಟ್ಟಿಯನ್ನೂ ಬಿಡುಗಡೆ ಮಾಡಲಾಗಿದೆ. ರಸೀದಿ ನೀಡುವ, ಪ್ರತ್ಯೇಕ ಲೆಕ್ಕಪತ್ರ ಇಡುವ, ಹಣಕಾಸಿನ ನಿರ್ವಹಣೆಯ ಹೊಣೆಗಾರಿಕೆಯನ್ನು ಎಸ್‌ಡಿಎಂಸಿ ಸದಸ್ಯ ಕಾರ್ಯದರ್ಶಿಗೆ ನೀಡಲಾಗಿದೆ.

'ಸಂವಿಧಾನದ 21 ಎ ವಿಧಿಯ ಪ್ರಕಾರ ಮಕ್ಕಳಿಗೆ ಶಿಕ್ಷಣ ನೀಡುವುದು ಆಯಾ ಸರ್ಕಾರಗಳ ಹೊಣೆ. ಆರ್‌ಟಿಇ ಸೆಕ್ಷನ್ 3ರ ಪ್ರಕಾರ 8ನೇ ತರಗತಿಯವರೆಗೆ ಯಾವುದೇ ಅಡ್ಡಿ ಆತಂಕ ಇಲ್ಲದೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕು. ಸರ್ಕಾರ ಒಳ್ಳೆಯ ಉದ್ದೇಶ ಇಟ್ಟುಕೊಂಡು ಸುತ್ತೋಲೆ ಹೊರಡಿಸಿರುವುದಾಗಿ ಸಮರ್ಥಿಸಿಕೊಂಡರೂ, ಬಲವಂತ ಇಲ್ಲದೇ ನೈತಿಕ ಜವಾಬ್ದಾರಿಯ ಆಧಾರದಲ್ಲಿ ಹಣ ನೀಡುವ ಅನಿವಾರ್ಯಕ್ಕೆ ಮಕ್ಕಳ ಪೋಷಕರು ಒಳಗಾಗಲಿದ್ದಾರೆ' ಎಂದು ಸರ್ಕಾರದ ಸುತ್ತೋಲೆಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ ಅಭಿವೃದ್ಧಿ ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ.

'ಬಹುತೇಕ ಸರ್ಕಾರಿ ಶಾಲೆಗಳು ಈಗಾಗಲೇ ಮಕ್ಕಳಿಲ್ಲದೆ ಮುಚ್ಚುವ ಹಂತ ತಲುಪಿವೆ. ಪರಿಶಿಷ್ಟರು, ಕೂಲಿ ಕಾರ್ಮಿಕರು, ಬಡವರ ಮಕ್ಕಳಷ್ಟೆ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಮಕ್ಕಳ ಅನುಪಾತ ಆಧರಿಸಿ ಸರ್ಕಾರವೇ ಅಂತಹ ವೆಚ್ಚಗಳ ಭರ್ತಿಗೆ ಅನುದಾನ ಒದಗಿಸಬೇಕು. ಸ್ವಇಚ್ಛೆಯ ಹೆಸರಲ್ಲಿ ಪೋಷಕರನ್ನು ಕಾನೂನಾತ್ಮಕವಾಗಿ ಅಥವಾ ನೈತಿಕವಾಗಿ ಹೊಣೆಗಾರರನ್ನಾಗಿ ಮಾಡಬಾರದು' ಎನ್ನುತ್ತಾರೆ ಎಸ್‌ಡಿಎಂಸಿ ಮಾಜಿ ಅಧ್ಯಕ್ಷೆ ಪೂರ್ಣಿಮಾ ಚಂದ್ರಶೇಖರ್.

ಮೂರು ತಿಂಗಳಿಗೊಮ್ಮೆ ಪೋಷಕರ ಸಭೆ

'ಪ್ರತಿ ಮೂರು ತಿಂಗಳಿಗೆ ಒಮ್ಮೆ ಪೋಷಕರು, ತಂದೆ, ತಾಯಂದಿರ ಸಭೆ ಕರೆಯಬೇಕು. ಅನುದಾನದ ಅಗತ್ಯ ಮತ್ತು ಪ್ರಗತಿಯ ಬಗ್ಗೆ ಮಾಹಿತಿ ನೀಡಬೇಕು. ಇತರೆ ಆದ್ಯತೆಗಳ ಬಗ್ಗೆ ಸಭೆಯಲ್ಲೇ ಚರ್ಚಿಸಿ ನಡಾವಳಿಗಳನ್ನು ದಾಖಲಿಸಬೇಕು. ನಂತರದ ಸಭೆಯಲ್ಲಿ ಅನುಪಾಲನಾ ವರದಿ ಮಂಡಿಸಬೇಕು' ಎಂದೂ ಆಯುಕ್ತರು ಸೂಚಿಸಿದ್ದಾರೆ.

> **ವರ್ಷಕ್ಕೆ ಒಂದೋ, ಎರಡೋ ಸಭೆ ಕರೆದಾಗ ದೇಣಿಗೆ ಕೇಳಬಹುದು ಎಂದು ಬಹಳಷ್ಟು ಪೋಷಕರು ಗೈರಾಗುತ್ತಾರೆ. ಸರ್ಕಾರದ ಈ ನಿರ್ಧಾರ ಪೋಷಕರು ಶಾಲೆಗಳತ್ತ ಮುಖ ಮಾಡದಂತೆ ಮಾಡುತ್ತದೆ**
>
> **ಗಣಪತಿ ಪಡವಗೋಡು**, ಮಕ್ಕಳ ಪೋಷಕ, ಸಾಗರ

ಪ್ರಕ್ರಿಯೆ ಬಗ್ಗೆ ಅನುಮಾನ • ತನಿಖೆಗೆ ಶಿಫಾರಸು

ಸೌರಶಕ್ತಿ ಟೆಂಡರ್: 'ಲೋಕಾ' ತನಿಖೆ?

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದ ಸೌರಶಕ್ತಿ ಘಟಕಗಳ ಟೆಂಡರ್ ಪ್ರಕ್ರಿಯೆ ಹಲವು ಅನುಮಾನಗಳಿಗೆ ಕಾರಣವಾಗಿದೆ. ಈ ಕುರಿತು ಬಾಹ್ಯ ತಜ್ಞರನ್ನು ಒಳಗೊಂಡ ತನಿಖಾ ಸಮಿತಿ ರಚಿಸಲು ಆದೇಶಿಸಬಹುದು' ಎಂದು ಇಂಧನ ಇಲಾಖೆ ಅಧಿಕಾರಿಗಳು ನೀಡಿದ ಸಲಹೆಯನ್ನು ಆಧರಿಸಿ, ಪ್ರಕರಣದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಲು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ.

'ಸಿದ್ದರಾಮಯ್ಯ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಪಾವಗಡ ಸೋಲಾರ್ ಪಾರ್ಕ್ ಸೇರಿದಂತೆ ಒಟ್ಟು ₹ 2,100 ಕೋಟಿ ಮೊತ್ತದ ಸೌರಶಕ್ತಿ ಘಟಕಗಳ ಸ್ಥಾಪನೆ, ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಭಾರಿ ಅಕ್ರಮ ನಡೆದಿದೆ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಇತ್ತೀಚೆಗೆ ಆರೋಪಿಸಿದ್ದರು. ಯಾವೆಲ್ಲ ವಿಚಾರಗಳ ಬಗ್ಗೆ ತನಿಖೆ ನಡೆಸಬಹುದೆಂದು ಅಧಿಕಾರಿಗಳು ಸಿದ್ಧಪಡಿಸಿದ್ದರು. 50 ಪುಟಗಳ ಟಿಪ್ಪಣಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

6ನೇ | ಪುಟ ನೋಡಿ

'ಪೂರ್ವಯೋಜಿತ ಅವ್ಯವಹಾರ ಶಂಕೆ'

'ಆಯ್ಕೆಯಾದ ಅರ್ಜಿಗಳಲ್ಲಿ ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್ ಸಹೋದರ, ಹರ್ಷ ಶುಗರ್ಸ್ ಪ್ರೈ. ಲಿ. ನಿರ್ದೇಶಕ, ಈಗ ಎಂಎಲ್‌ಸಿ ಆಗಿರುವ ಚನ್ನರಾಜ ಹಟ್ಟಿಹೊಳಿ, ಲಕ್ಷ್ಮಿ ಅವರ ತಾಯಿ ಗಿರಿಜಾ ಹಟ್ಟಿಹೊಳಿ ಅವರ ಅರ್ಜಿಗಳೂ ಇದ್ದವು. ಚನ್ನರಾಜ ಅವರು 2014ರ ಆಗಸ್ಟ್‌ನಲ್ಲಿ ಮತ್ತು ಗಿರಿಜಾ ಅವರು ಆನ್‌ಲೈನ್ ಅರ್ಜಿ ಪ್ರಕ್ರಿಯೆಗಿಂತ ಕೇವಲ 1ತಿಂಗಳು ಮೊದಲು ಕೃಷಿ ಭೂಮಿ ಖರೀದಿಸಿದ್ದರು. ಈ ಎರಡೂ ಅರ್ಜಿಗಳನ್ನು ಆನ್‌ಲೈನ್ ಪ್ರಕ್ರಿಯೆ ಆರಂಭವಾದ 52 ಸೆಕೆಂಡುಗಳಲ್ಲಿ ಭರ್ತಿ ಮಾಡಲಾಗಿದೆ. ಇದು ಪೂರ್ವಯೋಜಿತ ಅವ್ಯವಹಾರದ ಅನುಮಾನ ಹುಟ್ಟಿಸುತ್ತದೆ' ಎಂಬುದೂ ಟಿಪ್ಪಣಿಯಲ್ಲಿದೆ.

> **ನನ್ನ ಅವಧಿಯಲ್ಲಿ ಸೋಲಾರ್ ಘಟಕಗಳ ಹಂಚಿಕೆಯಲ್ಲಿ ನಡೆದಿದೆ ಎನ್ನಲಾಗಿರುವ ಅಕ್ರಮಗಳ ಮಾಹಿತಿ, ಸಾಕ್ಷ್ಯಗಳನ್ನು ಸಿಬಿಐಗೆ ನೀಡಲಿ**
>
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ರಾಜೀನಾಮೆ



ಲಂಡನ್ (ಪಿಟಿಐ): ದೇಶದ ಆರ್ಥಿಕ ಬಿಕ್ಕಟ್ಟು ನಿಭಾಯಿಸಲು ವಿಫಲವಾದ ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ಕೇವಲ 45 ದಿನಗಳಲ್ಲಿ ತಮ್ಮ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ.


ಆರ್ಥಿಕ ಪರಿಸ್ಥಿತಿ ಸುಧಾರಿಸಲು ದಿಟ್ಟ ಕ್ರಮ ತೆಗೆದುಕೊಳ್ಳದ ಲಿಜ್ ಟ್ರಸ್ ಅವರ ನಾಯಕತ್ವದ ವಿರುದ್ಧ ಕನ್ಸರ್ವೇಟಿವ್ ಸಂಸದರೇ ಬಂಡೆದ್ದು, ರಾಜೀನಾಮೆಗೆ ಒತ್ತಾಯಿಸಿದ್ದರು. ಲಿಜ್ ಅವರ ಆಡಳಿತ ವೈಖರಿಗೆ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿ ಇಬ್ಬರು ಸಚಿವರು ರಾಜೀನಾಮೆ ನೀಡಿದ್ದರು. ಇದರ ಬೆನ್ನಲ್ಲೇ ಲಿಜ್ ಪ್ರಧಾನಿ ಹುದ್ದೆ ತೊರೆದಿದ್ದಾರೆ.

'ನನಗೆ ಅಧಿಕಾರ ನೀಡಿದ ಉದ್ದೇಶವನ್ನು ಈಡೇರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಕನ್ಸರ್ವೇಟಿವ್ ನಾಯಕತ್ವ ತೊರೆಯುತ್ತಿರುವುದನ್ನು ದೊರೆ 3ನೇ ಚಾರ್ಲ್ಸ್ ಅವರಿಗೂ ತಿಳಿಸಿರುವೆ' ಎಂದು ಲಿಸ್ ಟ್ರಸ್ ಹೇಳಿದ್ದಾರೆ. 11

ಜಮೀನು ಅಕ್ರಮ: ಶಾಸಕ ನಂಜೇಗೌಡ ವಿರುದ್ಧ ಎಫ್‌ಐಆರ್‌ಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಂದಾಯ ಇಲಾಖೆಗೆ ಸೇರಿದ ಅಂದಾಜು ₹ 150 ಕೋಟಿಗೂ ಹೆಚ್ಚಿನ ಮಾರುಕಟ್ಟೆ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಲೂರಿನ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ವಿರುದ್ಧ ಎಫ್‌ಐಆರ್ ದಾಖಲಿಸಲು ಬೆಂಗಳೂರು ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.



ಕೋಲಾರದ ಸಾಮಾಜಿಕ ಕಾರ್ಯಕರ್ತ ಕೆ.ಸಿ.ರಾಜಣ್ಣ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶೆ ಜೆ.ಪ್ರೀತ್, 'ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಕಲಂ 156ರ (3) ಅನ್ವಯ ಈ ಪ್ರಕರಣ ತನಿಖೆಗೆ ಲಾಯಕ್ಕಾಗಿದೆ. ಆದ್ದರಿಂದ, ತನಿಖೆ ಕೈಗೊಂಡು ಡಿಸೆಂಬರ್ 7ಕ್ಕೆ ವರದಿ ಸಲ್ಲಿಸಿ' ಎಂದು ಮಾಲೂರು ಪೊಲೀಸ್ ಠಾಣಾಧಿಕಾರಿಗೆ ನಿರ್ದೇಶಿಸಿದ್ದಾರೆ.

'ಮಾಲೂರು ಕ್ಷೇತ್ರ ವ್ಯಾಪ್ತಿಯ 80 ಎಕರೆಗೂ ಹೆಚ್ಚು ಜಮೀನಿಗೆ ಖೋಟಾ ದಾಖಲೆಗಳನ್ನು ತಯಾರಿಸಿ ಅನರ್ಹರು, ಕಾಲ್ಪನಿಕ (ಮೃತರು) 38 ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಅನುಸಾರ ಸ್ಥಾಪಿತವಾದ ಭೂ ಮಂಜೂರಾತಿ ಸಮಿತಿಗೆ ಶಾಸಕ ಕೆ.ವೈ.ನಂಜೇಗೌಡ ಮಂಜೂರಾತಿಗೆ ಅನುಮೋದನೆ ನೀಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಹಂಚಿಕೆ ಕಾನೂನು ಬಾಹಿರವಾಗಿದೆ' ಎಂಬ ಆರೋಪದ ಹಿನ್ನೆಲೆಯಲ್ಲಿ ಅಂದಿನ ಪ್ರಾದೇಶಿಕ ಆಯುಕ್ತ ಹರ್ಷಗುಪ್ತ ಮಂಜೂರಾತಿ ರದ್ದುಗೊಳಿಸಿದ್ದರು.

ಕೋಲಾರ ತಹಶೀಲ್ದಾರ್ ವಿರುದ್ಧವೂ ಕ್ರಮ?

'ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಮತ್ತು ವಾಸ್ತವ ಸಂಗತಿಗಳನ್ನು ಮರೆಮಾಚುವ ಮೂಲಕ ಅಂದಿನ ಮಾಲೂರು ತಹಶೀಲ್ದಾರ್ ನಾಗರಾಜ್ (ಪ್ರಸ್ತುತ ಕೋಲಾರ ತಹಶೀಲ್ದಾರ್), ಸದಸ್ಯರಾದ ಡಿ.ಎಂ. ನಾಗರಾಜ್, ಎಸ್.ನಾಗಪ್ಪ ಮತ್ತು ಎನ್.ಲಕ್ಷ್ಮಮ್ಮ ಅವರನ್ನೂ ಆರೋಪಿಗಳನ್ನಾಗಿ ಮಾಡಬೇಕು' ಎಂಬ ಫಿರ್ಯಾದುದಾರ ಕೋರಿಕೆಯನ್ನು ನ್ಯಾಯಾಧೀಶರು ಮಾನ್ಯ ಮಾಡಿದ್ದಾರೆ.

ತೆರವಾಗದ ರಾಜಕಾಲುವೆ ಒತ್ತುವರಿ: ತೀರದ ಬವಣೆ

ಬೆಂಗಳೂರು: ನಗರದಾದ್ಯಂತ ಬುಧವಾರ ರಾತ್ರಿ ಧಾರಾಕಾರ ಮಳೆ ಸುರಿದು, ರಸ್ತೆ, ಬಡಾವಣೆಗಳಿಗೆ ನೀರು ನುಗ್ಗಿದೆ. ಸೆಪ್ಟೆಂಬರ್‌ನಲ್ಲಿ ಅತಿ ಹೆಚ್ಚು ಸಮಸ್ಯೆಗೆ ಒಳಗಾಗಿದ್ದ ನಗರದ ಪೂರ್ವ ವಲಯದಲ್ಲಿ ಮತ್ತೆ ಸಂಕಷ್ಟ ಎದುರಾಗಿದ್ದು, ರಾಜಕಾಲುವೆ ಒತ್ತುವರಿ ತೆರವು ಕಾಟಾಚಾರಕ್ಕೆ ನಡೆದಿರುವುದು ಬಹಿರಂಗವಾಗಿದೆ. 3C

ದೇವಲ ಗಾಣಗಾಪುರ: ಮಾನಸಿಕ ಅಸ್ವಸ್ಥರ ಆಶ್ರಯ ತಾಣ

52 ಮಂದಿ ನಿರಾಶ್ರಿತರ ಸಾವು

• ಮನೋಜಕುಮಾರ್ ಗುದ್ದಿ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಯಾತ್ರಾ ಸ್ಥಳ ದೇವಲ ಗಾಣಗಾಪುರದ ದತ್ತಾತ್ರೇಯ ದೇವಸ್ಥಾನದ ಸಮೀಪ ಭಕ್ತರು ಮಾನಸಿಕ ಅಸ್ವಸ್ಥರಾದ ವೃದ್ಧ ತಂದೆ, ತಾಯಿ, ಸಂಬಂಧಿಕರನ್ನು ಬಿಟ್ಟು ಹೋಗುವುದು ಮುಂದುವರಿದಿದೆ. ಅವರನ್ನು ನೋಡಿಕೊಳ್ಳುವವರು ಇರದ ಕಾರಣ ಒಂದೂವರೆ ವರ್ಷದಲ್ಲಿ 52 ನಿರಾಶ್ರಿತರು ಬೀದಿ ಹೆಣವಾಗಿದ್ದಾರೆ.

ಕಳೆದ ಶನಿವಾರ ರಾತ್ರಿ ದೇವಸ್ಥಾನದ ಸಮೀಪ ತಿರುಗಾಡುತ್ತಿದ್ದ 68 ವರ್ಷದ ವೃದ್ಧ ಭಕ್ತೆ ಬೀದಿಯಲ್ಲಿ ಸಾವಿಗೀಡಾದ ಬಳಿಕ ಆಕೆಯ ಶವವನ್ನು ಬೀದಿನಾಯಿಗಳು ಎಳೆದು ತಿಂದಿದ್ದವು. ಇದರಿಂದ ಎಚ್ಚೆತ್ತ ಜಿಲ್ಲಾಡಳಿತವು ದಿಕ್ಕಿಲ್ಲದವರಿಗೆ ಕಲಬುರಗಿಯ ನಿರಾಶ್ರಿತರ ಪುನರ್ವಸತಿ ಕೇಂದ್ರಕ್ಕೆ ಇರಲು ವ್ಯವಸ್ಥೆ ಮಾಡಿದೆ. ಬುಧವಾರ ಮತ್ತೊಬ್ಬ ನಿರಾಶ್ರಿತ ಇಲ್ಲಿ ಮೃತಪಟ್ಟಿದ್ದಾರೆ.

'ಮಾಟ, ಮಂತ್ರಕ್ಕೆ ಒಳಗಾದವರನ್ನು ಪ್ರತಿ ಹುಣ್ಣಿಮೆಗೆ ಇಲ್ಲಿ ತಂದು ಬಿಟ್ಟರೆ ಅವರಿಗೆ ಕಾಡುವ ಮಾನಸಿಕ ಸಮಸ್ಯೆ ನಿವಾರಣೆಯಾಗುತ್ತದೆ' ಎಂಬ ನಂಬಿಕೆ ಇರುವ ಕಾರಣ ಆ ದಿನದಂದು ಸಾವಿರಾರು ಭಕ್ತರು ಗಾಣಗಾಪುರಕ್ಕೆ ಬರುತ್ತಾರೆ. ಮಾನಸಿಕ ಅಸ್ವಸ್ಥರನ್ನು ಅಲ್ಲಿಯೇ ಬಿಟ್ಟು ಹೋಗುತ್ತಾರೆ.

ದತ್ತ ಮಂದಿರಕ್ಕೆ ಮಹಾರಾಷ್ಟ್ರದವರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಆಂಧ್ರಪ್ರದೇಶ, ತೆಲಂಗಾಣದಿಂದಲೂ ಬರುತ್ತಾರೆ. ಮಾನಸಿಕ ಅಸ್ವಸ್ಥರು ಅಲ್ಲಲ್ಲಿ ತಿರುಗಾಡುತ್ತಾ ಭಕ್ತರು, ಗ್ರಾಮಸ್ಥರು ನೀಡುವುದನ್ನು ತಿನ್ನುತ್ತ ಕಾಲ ಕಳೆಯುವರು. ಕೆಲವರು ಒಂದು ವಾರದಿಂದ, ಕೆಲವರು 40 ವರ್ಷದಿಂದ ಇದ್ದಾರೆ.

'ಗಾಯ ಮತ್ತು ಕಾಲುಗಳಿಗೆ ಹುಳು ಬೀಳುವುದರಿಂದ ಕೆಲ ನಿರಾಶ್ರಿತರು ಯಾತನೆಯಿಂದ ರಸ್ತೆ, ನದಿ ಬಳಿ ಸಾಯುತ್ತಾರೆ. ಅಂಥವರ ಅಂತ್ಯಕ್ರಿಯೆ ದೇವಸ್ಥಾನ ಟ್ರಸ್ಟ್ ಕಮಿಟಿ ನೆರವೇರಿಸುತ್ತದೆ' ಎಂದು ಕಮಿಟಿ ಸಿಬ್ಬಂದಿ ತಿಳಿಸಿದರು.


'ದೇವಲ ಗಾಣಗಾಪುರ ಕಾಶಿಯ ವಿಶ್ವನಾಥನ ಸನ್ನಿಧಿಯಾಗಿದೆ. ಕೆಲ ವಯಸ್ಸಾದವರು ಜೀವ ಬಿಡಲೆಂದೇ ಇಲ್ಲಿ ಬರುತ್ತಾರೆ' ಎನ್ನುತ್ತಾರೆ ಗ್ರಾಮಸ್ಥ ದಿಗಂಬರ ದೇವರಮನಿ.

ರಿಜಿಸ್ಟ್ರಾರ್ ಜನರಲ್‌ಗೆ ಪತ್ರ

'ವೃದ್ಧೆಯ ಮೃತದೇಹವನ್ನು ನಾಯಿಗಳು ತಿಂದ ಪ್ರಕರಣದ ಕುರಿತು ಕರ್ನಾಟಕ ಹೈಕೋರ್ಟ್ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು' ಎಂದು ಕೋರಿ ತುಮಕೂರು ಜಿಲ್ಲೆ ತುರುವೇಕೆರೆಯ ಜಾಗತಿಕ ಮಾನವ ಹಕ್ಕುಗಳ ಸೇವಾ ಕೇಂದ್ರದ ಅಧ್ಯಕ್ಷ ಸಿದ್ದಲಿಂಗೇಗೌಡ ಅವರು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಪತ್ರ ಬರೆದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಮೆಟ್ರೊ: 2024ರ ವೇಳೆಗೆ 90 ಕಿ.ಮೀಗೆ ಮೆಟ್ರೊ ಜಾಲ ವಿಸ್ತರಿಸುವ ಗುರಿ

ಆದಾಯ ಮೂಲವಾಗದ ಖಾಲಿ ಜಾಗ

ಪ್ರಜಾವಾಣಿ ವಾರ್ತೆ



ಸಾಂದರ್ಭಿಕ ಚಿತ್ರ

ಮುಖ್ಯಾಂಶಗಳು

- ಮೆಟ್ರೊ ಸುಪರ್ದಿಯಲ್ಲಿ ಸದ್ಯ **30** ಎಕರೆಗೂ ಅಧಿಕ ಖಾಲಿ ಜಾಗ
- ವರಮಾನ ವೃದ್ಧಿಗೆ ಪ್ರತ್ಯೇಕ ವಿಭಾಗವಿದ್ದರೂ ಕ್ರಮವಿಲ್ಲ
- ಪ್ರಸ್ತುತ ಮೆಟ್ರೊದ ವಾಣಿಜ್ಯ ಕಾರ್ಯಾಚರಣೆ ವ್ಯಾಪ್ತಿ **56** ಕಿ.ಮೀ

ಬೆಂಗಳೂರು: ನಮ್ಮ ಮೆಟ್ರೊ ರೈಲಿಗೆ ಈಗ 11 ವರ್ಷದ ಸಂಭ್ರಮ. 56 ಕಿಲೋ ಮೀಟರ್ ಮಾರ್ಗದಲ್ಲಿ ಕಾರ್ಯಾಚರಣೆ ಆರಂಭವಾಗಿದ್ದು, ಹೊಸ ಮಾರ್ಗಗಳ ಕಾಮಗಾರಿ ವೇಗವಾಗಿ ನಡೆಯುತ್ತಿದೆ. ಆದರೆ, ತನ್ನ ಸುಪರ್ದಿಯಲ್ಲಿರುವ 30 ಎಕರೆಗೂ ಅಧಿಕ ಜಾಗವನ್ನು ಆದಾಯದ ಮೂಲವಾಗಿ ಪರಿವರ್ತಿಸಿಕೊಳ್ಳುವಲ್ಲಿ ಬಿಎಂಆರ್‌ಸಿಎಲ್ ಹಿಂದೆ ಬಿದ್ದಿದೆ.

ಮಹಾತ್ಮ ಗಾಂಧಿ ರಸ್ತೆ– ಬೈಯಪ್ಪನಹಳ್ಳಿ ತನಕ 6.7 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗದಲ್ಲಿ 2011 ಅ.20ರಂದು 'ನಮ್ಮ ಮೆಟ್ರೊ' ವಾಣಿಜ್ಯ ಸಂಚಾರ ಆರಂಭವಾಗಿತ್ತು. ಆರು ನಿಲ್ದಾಣಗಳನ್ನು ಈ ಮಾರ್ಗವು ಹೊಂದಿತ್ತು. ಅದಾದ ಬಳಿಕ ಒಟ್ಟು ಆರು ವಿಸ್ತರಿತ ಮಾರ್ಗಗಳು ಲೋಕಾರ್ಪಣೆಗೊಂಡಿವೆ. ಈಗ ಮೆಟ್ರೊ ಜಾಲದ ವಾಣಿಜ್ಯ ಕಾರ್ಯಾಚರಣೆ ಈವರೆಗೆ 56 ಕಿಲೋ ಮೀಟರ್‌ಗೆ ವಿಸ್ತರಣೆಗೊಂಡಿದೆ.

ಪ್ರತಿನಿತ್ಯ ಸರಾಸರಿ 5.4 ಲಕ್ಷ ಜನ ಮೆಟ್ರೊ ರೈಲಿನಲ್ಲಿ ಸಂಚರಿಸುತ್ತಿದ್ದು, ₹1.5 ಕೋಟಿ ವರಮಾನ ಸಂಗ್ರಹವಾಗುತ್ತಿದೆ. ಒಟ್ಟಾರೆ ₹11 ಸಾವಿರ ಕೋಟಿಯಷ್ಟು ದೀರ್ಘಾವಧಿ ಸಾಲವನ್ನು ನಿಗಮ ಹೊಂದಿದೆ. 2024ರ ಡಿಸೆಂಬರ್ ವೇಳೆಗೆ ಮೆಟ್ರೊ ರೈಲು ಜಾಲವನ್ನು 90 ಕಿಲೋ ಮೀಟರ್‌ಗೆ ವಿಸ್ತರಿಸಿ ಪ್ರಯಾಣಿಕರ ಸಂಖ್ಯೆಯನ್ನು 10 ಲಕ್ಷಕ್ಕೆ ಹೆಚ್ಚಿಸುವ ಗುರಿ ಇಟ್ಟುಕೊಂಡಿದೆ.

ಚಾಲ್ತಿಯಲ್ಲಿರುವ ನಿಲ್ದಾಣಗಳು, ಡಿಪೊಗಳ ವ್ಯಾಪ್ತಿಯಲ್ಲಿ 30 ಎಕರೆಗೂ ಅಧಿಕ ಜಾಗ ಬಿಎಂಆರ್‌ಸಿಎಲ್ ಸುಪರ್ದಿಯಲ್ಲಿದೆ. ಇದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿ ಆದಾಯ ಬರುವಂತೆ ಮಾಡಿಕೊಳ್ಳುವ ಎಲ್ಲಾ ಅವಕಾಶಗಳಿದ್ದರೂ ಪಾಳುಬಿದ್ದ ಸ್ಥಿತಿಯಲ್ಲೇ ಉಳಿದುಕೊಂಡಿವೆ. ಈ ಆಸ್ತಿಯಿಂದ ವರಮಾನ ವೃದ್ಧಿಸಿಕೊಳ್ಳಲು ಪ್ರತ್ಯೇಕ ವಿಭಾಗವಿದ್ದರೂ, ಖಾಲಿಯಾಗಿಯೇ ಉಳಿದುಕೊಂಡಿವೆ.

ಮೆಜೆಸ್ಟಿಕ್, ಎಂ.ಜಿ. ರಸ್ತೆಯಂತಹ ಪ್ರಮುಖ ವಾಣಿಜ್ಯ ಪ್ರದೇಶದಲ್ಲೂ ಮೆಟ್ರೊ ನಿಲ್ದಾಣದ ಆವರಣ ಖಾಲಿಯಾಗಿಯೇ ಉಳಿದುಕೊಂಡಿವೆ. ಮಳಿಗೆ ನಿರ್ಮಾಣದ ತಯಾರಿ ವರ್ಷಗಳಿಂದ ಹಾಗೇ ಉಳಿದುಕೊಂಡಿದೆ. ಯಶವಂತಪುರ, ಮೈಸೂರು ರಸ್ತೆ, ಬನಶಂಕರಿ ನಿಲ್ದಾಣಗಳಲ್ಲಿ ಸಾಕಷ್ಟು ಜಾಗ ಇದೆ. ವಾಹನ ನಿಲುಗಡೆ ತಾಣ, ಬಹುಮಹಡಿ ಕಟ್ಟಡ, ಖಾಸಗಿ ಸಹಭಾಗಿತ್ವದಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸಿದರೆ ನಿಗಮಕ್ಕೆ ವರಮಾನ ಹೆಚ್ಚಾಗಲಿದೆ. ಈ ಆಸ್ತಿ ಸದ್ಬಳಕೆ ಮಾಡಿಕೊಂಡರೆ ನಿಗಮದ ಸಾಲ ತೀರಿಸಲು ಅನುಕೂಲ ಆಗಲಿದೆ ಎಂಬುದು ತಜ್ಞರ ಅಭಿಪ್ರಾಯ.

ವಿದ್ಯುತ್ ವ್ಯತ್ಯಯ

ಬೆಂಗಳೂರು: ತುರ್ತು ನಿರ್ವಹಣೆ ಕಾರಣ ಬೆಸ್ಕಾಂ ಪೂರ್ವ ವೃತ್ತದಲ್ಲಿ ವಿವಿಧೆಡೆ ಅ.21ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಆ ಪ್ರದೇಶಗಳು–

ಹೆಣ್ಣೂರು ಬಂಡೆ, ಕೆ. ನಾರಾಯಣ ಪುರ, ನಗರಗಿರಿ ಟೌನ್‌ಶಿಪ್, ಬೈರತಿ ಗ್ರಾಮ, ಹೊರಮಾವು, ಅನುಗ್ರಹ ಬಡಾವಣೆ, ಮಂಜುನಾಥ ನಗರ, ಎಕೆಆರ್ ಶಾಲೆ ಸುತ್ತಲಿನ ಪ್ರದೇಶಗಳು.

ಮೆಟ್ರೊ ಗೋಡೆ ಕುಸಿತ: ತನಿಖೆ

ಬೆಂಗಳೂರು: ಶೇಷಾದ್ರಿಪುರದಲ್ಲಿನ ಜೆಡಿಎಸ್ ಕಚೇರಿ ಬಳಿ ಮೆಟ್ರೊ ರೈಲು ಮಾರ್ಗದ ಒಂದು ಬದಿಯ ಗೋಡೆ ಮತ್ತು ಜಾಲರಿ ಕುಸಿದು ಬಿದ್ದಿರುವ ಘಟನೆ ಬಗ್ಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಗುರುವಾರ ಸ್ಥಳಕ್ಕೆ ಭೇಟಿ ನೀಡಿದ ಬಿಎಂಆರ್‌ಸಿಎಲ್ ಅಧಿಕಾರಿಗಳು, ಪರಿಸ್ಥಿತಿ ಅವಲೋಕಿಸಿದರು.

ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ ಶಿಥಿಲಗೊಂಡಿದ್ದ ಕಾಂಪೌಂಡ್‌ನ ಒಂದು ಭಾಗವನ್ನು ತೆರವುಗೊಳಿಸಲಾಗಿದೆ. ಮೆಟ್ರೊ ರೈಲು ಕಾಮಗಾರಿ ಆರಂಭವಾದಾಗ 12 ವರ್ಷಗಳ ಹಿಂದೆ ನಿರ್ಮಿಸಿದ್ದ ಗೋಡೆ ಕುಸಿದಿದೆ. 'ಮುಖ್ಯವಾದ ತಡೆಗೋಡೆ ಹಾಗೆಯೇ ಉಳಿದಿದೆ. ಮೆಟ್ರೊ ರೈಲುಗಳ ಮೇಲೆ ಕಲ್ಲು ತೂರುವ ಘಟನೆಗಳು ಸಂಭವಿಸಿದ ಬಳಿಕ ಕಾಂಪೌಂಡ್‌ಗೆ ಜಾಲರಿ ಅಳವಡಿಸಲಾಗಿತ್ತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕಳಪೆ ಕಾಮಗಾರಿಯಿಂದ ಗೋಡೆ ಕುಸಿದಿದೆಯೇ ಎಂಬುದರ ಬಗ್ಗೆ ಪರಿಶೀಲಿಸಲಾಗುವುದು ಎಂದರು. ರಸ್ತೆ ಬದಿ ನಿಂತಿದ್ದ ವಾಹನಗಳ ಮೇಲೆ ಕಾಂಪೌಂಡ್ ಮತ್ತು ಜಾಲರಿ ಬುಧವಾರ ಕುಸಿದು ಬಿದ್ದಿತ್ತು.



farnaz

ಸಣ್ಣ, ಪುಟ್ಟ ಕೆಲಸ ಮಾಡಲು ಅಡ್ಡಿಯಿಲ್ಲ: ಇನ್ಫೊಸಿಸ್

ನವದೆಹಲಿ (ಪಿಟಿಐ): ನೌಕರರು ತಮ್ಮ ಮ್ಯಾನೇಜರ್‌ಗಳ ಅನುಮತಿ ಪಡೆದು ಕಂಪನಿಯ ಕೆಲಸದ ಜೊತೆಯಲ್ಲೇ ಸಣ್ಣ–ಪುಟ್ಟ ಇತರ ಕೆಲಸಗಳನ್ನು ಕೈಗೆತ್ತಿಕೊಳ್ಳಬಹುದು ಎಂದು ಇನ್ಫೊಸಿಸ್ ಹೇಳಿದೆ. ಆದರೆ ಈ ರೀತಿಯ ಕೆಲಸಗಳು ಕಂಪನಿಯ ಕೆಲಸದ ಜೊತೆ ಸ್ಪರ್ಧೆಗೆ ಇಳಿಯುವಂತಿರಬಾರದು, ಹಿತಾಸಕ್ತಿಯ ಸಂಘರ್ಷಕ್ಕೆ ದಾರಿ ಮಾಡಿಕೊಡಬಾರದು ಎಂದು ಸ್ಪಷ್ಟಪಡಿಸಿದೆ.

ನೌಕರರು ಕೆಲಸ ತೊರೆಯುವುದನ್ನು ಕಡಿಮೆ ಮಾಡಲು ಈ ನಡೆಯು ಕಂಪನಿಗೆ ಒಂದಿಷ್ಟು ನೆರವಾಗಬಹುದು ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ. ಈ ವಿಚಾರವಾಗಿ ಇನ್ಫೊಸಿಸ್ ತನ್ನ ನೌಕರರಿಗೆ ರವಾನಿಸಿರುವ ಇಮೇಲ್‌ನಲ್ಲಿ 'ಮೂನ್‌ಲೈಟಿಂಗ್' ಪದ ಉಲ್ಲೇಖವಾಗಿಲ್ಲ. ಒಂದೇ ಬಾರಿಗೆ ಎರಡು ಕಡೆಗಳಲ್ಲಿ ನೌಕರಿ ಹೊಂದುವುದನ್ನು ಮೂನ್‌ಲೈಟಿಂಗ್ ಎಂದು ವ್ಯಾಖ್ಯಾನಿಸಲಾಗಿದೆ.

ಮೂನ್‌ಲೈಟಿಂಗ್‌ಗೆ ಅವಕಾಶ ಇಲ್ಲ ಎಂದು ಇನ್ಫೊಸಿಸ್ ಈಚೆಗೆ ಸ್ಪಷ್ಟಪಡಿಸಿತ್ತು. ಮೂನ್‌ಲೈಟಿಂಗ್‌ನಲ್ಲಿ ತೊಡಗಿದ್ದ ಕಾರಣ 300 ಜನರನ್ನು ಕೆಲಸದಿಂದ ತೆಗೆಯಲಾಗಿದೆ ಎಂದು ವಿಪ್ರೊ ಈಚೆಗೆ ತಿಳಿಸಿದೆ.

ಕಂಪನಿ ಒಳಗೆ ಕೂಡ ಇತರ ಕೆಲಸ ಕೈಗೆತ್ತಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಇನ್ಫೊಸಿಸ್ ಹೇಳಿದೆ. ಮೂನ್‌ಲೈಟಿಂಗ್ ಪ್ರಕರಣಗಳನ್ನು ಅನುಕಂಪದಿಂದ ನಿರ್ವಹಿಸುವುದಾಗಿ ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಹೇಳಿದೆ.

ಜೋಯಾಲುಕ್ಕಾಸ್: ಹಬ್ಬದ ಕೊಡುಗೆ

ಬೆಂಗಳೂರು: ಚಿನ್ನಾಭರಣ ಕಂಪನಿ ಜೋಯಾಲುಕ್ಕಾಸ್ ತನ್ನ ಗ್ರಾಹಕರಿಗೆ ದೀಪಾವಳಿ ಹಬ್ಬದ ಪ್ರಯುಕ್ತ ಕ್ಯಾಷ್ ಬ್ಯಾಕ್ ಕೊಡುಗೆಗಳನ್ನು ನೀಡುತ್ತಿದೆ. ಇದೇ ತಿಂಗಳ 24ರವರೆಗೆ ಈ ಕೊಡುಗೆಗಳ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಕಂಪನಿ ತಿಳಿಸಿದೆ.

₹ 50 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ವಜ್ರ, ಅನ್‌ಕಟ್ ವಜ್ರ ಮತ್ತು ಬೆಲೆಬಾಳುವ ಆಭರಣಗಳ ಖರೀದಿ ಮೇಲೆ ₹ 2 ಸಾವಿರ ಮೌಲ್ಯದ ಕ್ಯಾಷ್‌ಬ್ಯಾಕ್ ವೋಚರ್ ಸಿಗಲಿದೆ. ₹50 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಚಿನ್ನಾಭರಣ ಖರೀದಿ ಮೇಲೆ ₹ 1 ಸಾವಿರ ಮೌಲ್ಯದ ಕ್ಯಾಷ್‌ಬ್ಯಾಕ್ ಗಿಫ್ಟ್ ವೋಚರ್ ಹಾಗೂ ₹10 ಸಾವಿರ ಮೌಲ್ಯದ ಬೆಳ್ಳಿ ಆಭರಣಗಳ ಖರೀದಿ ಮೇಲೆ ₹500 ಮೌಲ್ಯದ ಕ್ಯಾಷ್‌ಬ್ಯಾಕ್ ಗಿಫ್ಟ್ ವೋಚರ್ ಸಿಗಲಿದೆ. ಎಸ್‌ಬಿಐ ಕಾರ್ಡ್‌ಗಳ ಮೇಲೆ ಶೇ 5ರಷ್ಟು ಹೆಚ್ಚುವರಿ ಕ್ಯಾಷ್‌ಬ್ಯಾಕ್ ಸಹ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



'ಉಗ್ರರ ವಿರುದ್ಧ ಹೋರಾಟ; ದೃಢ ನಿಶ್ಚಯ ಅಗತ್ಯ'

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ನೆಲೆಯಿರುವ 'ಲಷ್ಕರ್ ಎ ತೊಯಬಾ' ಸಂಘಟನೆಯ ಉಗ್ರರ ಎರಡು ಕಾರ್ಯಾಚರಣೆ ಘಟಕಗಳಿಗೆ ವಿಶ್ವಸಂಸ್ಥೆಯ ನಿರ್ಬಂಧಕ್ಕೆ ಚೀನಾ ತಡೆಯೊಡ್ಡುತ್ತಿದೆ ಎಂದು ಭಾರತ ಹೇಳಿದೆ.

ಭಯೋತ್ಪಾದನೆಯ ಪಿಡುಗು ಹತ್ತಿಕ್ಕಲು ಅಂತರರಾಷ್ಟ್ರೀಯ ಸಮುದಾಯ ದೃಢ ನಿಶ್ಚಯದಿಂದ ಕಾರ್ಯತತ್ಪರವಾಗಬೇಕಿದೆ ಎಂದೂ ಅಭಿಪ್ರಾಯಪಟ್ಟಿದೆ.

ಭಯೋತ್ಪಾದನೆ ನಿಗ್ರಹ ಕುರಿತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯು ಮುಂಬೈ ಮತ್ತು ನವದೆಹಲಿಯಲ್ಲಿ ಕ್ರಮವಾಗಿ ಅಕ್ಟೋಬರ್ 28 ಮತ್ತು 29ರಂದು ನಡೆಯಲಿದ್ದು, ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಆತಿಥ್ಯ ವಹಿಸಲಿದೆ.

ಪಾಕ್‌ನಲ್ಲಿ ನೆಲೆಯುಳ್ಳ ಭಯೋತ್ಪಾದಕ ಸಂಘಟನೆಗಳಿಗೆ ವಿಶ್ವಸಂಸ್ಥೆ ನಿರ್ಬಂಧ ಹೇರದಂತೆ ತಡೆಒಡ್ಡುತ್ತಿರುವ ಚೀನಾ ವಿರುದ್ಧ ವ್ಯವಸ್ಥಿತವಾಗಿ ಟೀಕಿಸಲು ಭಾರತ ಈ ಅವಕಾಶ ಬಳಸಿಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ.

'ಕಾಂಗ್ರೆಸ್ ಸುಳ್ಳಿಗೆ ತಕ್ಕ ಪ್ರತ್ಯುತ್ತರ'

ಬೆಂಗಳೂರು: ಕಾಂಗ್ರೆಸ್ ಹತ್ತು ಬಾರಿ ಸುಳ್ಳನ್ನು ಹೇಳಿ ಅದನ್ನೇ ಸತ್ಯವೆಂದು ಬಿಂಬಿಸಲು ಮುಂದಾಗಿದೆ. ಅದಕ್ಕೆ ಬಿಜೆಪಿ ಕಾರ್ಯಕರ್ತರು ತಕ್ಕ ಉತ್ತರ ನೀಡಬೇಕು ಎಂದು ಸಚಿವ ವಿ.ಸುನಿಲ್ ಕುಮಾರ್ ಗುರುವಾರ ಹೇಳಿದರು.

ಪಕ್ಷದ ವಿವಿಧ ಮೋರ್ಚಾಗಳ ಮಾಧ್ಯಮ ಸಂಚಾಲಕರಿಗೆ ಏರ್ಪಡಿಸಿದ್ದ 'ಮಾಧ್ಯಮ ಮಂಥನ' ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಪಪ್ರಚಾರ ತಪ್ಪಿಸಲು ಕಾರ್ಯಕರ್ತರು ಜಾಗ್ರತೆ ವಹಿಸಬೇಕು. ವಿಷಯಗಳನ್ನು ಸಮರ್ಥ, ಸಕಾಲಿಕವಾಗಿ ಜನರಿಗೆ ಮುಟ್ಟಿಸಬೇಕು. ಕೇಂದ್ರ, ರಾಜ್ಯ ಸರ್ಕಾರಗಳ ಜನಪರ ಕೆಲಸಗಳ ಮಾಹಿತಿ ನೀಡಬೇಕು ಎಂದರು.

ಜಾರಕಬಂಡೆ ಕಾವಲು ಪ್ರದೇಶದ 353 ಎಕರೆ ಪ್ರದೇಶದ ಪರಿವರ್ತನೆ • ಪರಿಸರವಾದಿಗಳ ಅಸಮಾಧಾನ

ಯೋಜನೆ ರೂಪಿಸದೆಯೇ ಉದ್ಯಾನ ನಿರ್ಮಾಣ

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ಜಾರಕಬಂಡೆ ಕಾವಲು ಪ್ರದೇಶದಲ್ಲಿ 'ಅಭಿವೃದ್ಧಿಯ ಯೋಜನೆ' ರೂಪಿಸದೆಯೇ ತೋಟಗಾರಿಕೆ ಇಲಾಖೆ ಉದ್ಯಾನ ನಿರ್ಮಿಸಲು ಮುಂದಾಗಿದೆ.

ಇಲಾಖೆಯ ಈ ಕ್ರಮಕ್ಕೆ ಪರಿಸರವಾದಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಪ್ರದೇಶದಲ್ಲಿನ 353 ಎಕರೆ ಅರಣ್ಯ ಭೂಮಿಯನ್ನು ಉದ್ಯಾನವನ್ನಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ.

'ಜಾರಕಬಂಡೆ ಕಾವಲ್ ಪ್ರದೇಶದಲ್ಲಿ ಉದ್ದೇಶಿತ ಅಟಲ್ ಬಿಹಾರಿ ವಾಜಪೇಯಿ ಉದ್ಯಾನ ನಿರ್ಮಿಸಲು ಇದುವರೆಗೆ ಯಾವುದೇ ರೀತಿಯ ಅಭಿವೃದ್ಧಿ ಯೋಜನೆ ರೂಪಿಸಿಲ್ಲ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಳಿದ ವಿವರಗಳಿಗೆ ಜಂಟಿ ನಿರ್ದೇಶಕರು ಈ ಮಾಹಿತಿ ನೀಡಿದ್ದಾರೆ.

> ಇದು ಅಡ್ಡಾದಿಡ್ಡಿ ಯೋಜನೆ. ಯೋಜನೆ ರಚನಾತ್ಮಕವಾಗಿ ಇರಬೇಕಾದರೆ ಸಾರ್ವಜನಿಕರ ಅಭಿಪ್ರಾಯ ಪಡೆಯಬೇಕಾಗಿತ್ತು. ವಿಸ್ತೃತ ಯೋಜನೆ ರೂಪಿಸದೆಯೇ ಉದ್ಯಾನ ನಿರ್ಮಾಣವೇಕೆ?
>
> **ವಿಜಯ್ ನಿಶಾಂತ್**
> ವೃಕ್ಷ ಫೌಂಡೇಷನ್ ಅಧ್ಯಕ್ಷ



ಬೆಂಗಳೂರಿನ ಹೊರವಲಯದಲ್ಲಿರುವ ಜೆ.ಬಿ ಕಾವಲ್ ವೃಕ್ಷವನದ ಒಂದು ನೋಟ –ಪ್ರಜಾವಾಣಿ ಚಿತ್ರ

ಜಾರಕಬಂಡೆ ಕಾವಲ್‌ನ ಮೀಸಲು ಅರಣ್ಯದಲ್ಲಿ ತೋಟಗಾರಿಕಾ ಇಲಾಖೆಯು ಮರಗಳ ಉದ್ಯಾನ ನಿರ್ಮಿಸಲು ಮುಂದಾಗಿದೆ. ಈ ಮೀಸಲು ಅರಣ್ಯದ ಒಂದು ಭಾಗದಲ್ಲಿ ಈಗಾಗಲೇ 'ಟ್ರೀ ಪಾರ್ಕ್' ನಿರ್ಮಾಣವಾಗಿದೆ. ಆದರೆ, ಸರ್ಕಾರ ಮೊದಲು ಅರಣ್ಯದಲ್ಲಿ ಜೀವ ವೈವಿಧ್ಯದ ಬಗ್ಗೆ ಅಧ್ಯಯನ ಮಾಡಿ ಸಮಗ್ರವಾದ ಯೋಜನೆ ರೂಪಿಸಬೇಕು ಎಂದು ಪರಿಸರವಾದಿಗಳು ಒತ್ತಾಯಿಸಿದ್ದಾರೆ.

'ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಿಕೊಡುವ ಯೋಜನೆ ಇದಾಗಿದೆ ಎಂದು ಅನಿಸುತ್ತಿದೆ. ಅರಣ್ಯ ಪ್ರದೇಶದಲ್ಲಿ ಉದ್ಯಾನ ನಿರ್ಮಾಣವನ್ನು ಯಾವ ಉದ್ದೇಶಕ್ಕೆ ಮಾಡಲಾಗುತ್ತಿದೆ. ಅರಣ್ಯವು ಅರಣ್ಯ ಪ್ರದೇಶವಾಗಿಯೇ ಉಳಿಯಬೇಕಲ್ಲವೇ? ಯಾವುದೇ ಪ್ರಯೋಜನ ಇಲ್ಲದ ಯೋಜನೆ ನಮಗೆ ಏಕೆ ಬೇಕು. ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡಿ ಚರ್ಚೆ ನಡೆಸಲಿ. ಯೋಜನೆ ಉಪಯುಕ್ತವಾಗಿದ್ದರೆ ಮುಂದುವರಿಯಲಿ' ಎಂದು ಪರಿಸರ ಕಾರ್ಯಕರ್ತರೊಬ್ಬರು ತಿಳಿಸಿದ್ದಾರೆ.

'ಈ ಪ್ರದೇಶದಲ್ಲಿ ನೀಲಗಿರಿ ಗಿಡಗಳು ಇರುವ ಬಗ್ಗೆಯೂ ವಿವರ ನೀಡಲಿ. ಬೆಂಗಳೂರು ಸುತ್ತಮುತ್ತ ಅರಣ್ಯ ಪ್ರದೇಶ ಈಗಾಗಲೇ ಕಡಿಮೆಯಾಗಿದೆ. ಈಗ ಮತ್ತೆ ಜೀವವೈವಿಧ್ಯ ನಾಶಪಡಿಸುವ ಪ್ರಯತ್ನಗಳನ್ನು ಸರ್ಕಾರ ಮಾಡಬಾರದು. ಉದ್ಯಾನ ನಿರ್ಮಾಣದಿಂದ ಈ ಪ್ರದೇಶದ ಜೀವ ವೈವಿಧ್ಯಕ್ಕೆ ಮತ್ತು ಅರಣ್ಯಕ್ಕೆ ಯಾವ ರೀತಿಯಲ್ಲೂ ಧಕ್ಕೆಯಾಗುವುದಿಲ್ಲ ಎನ್ನುವ ಮಾಹಿತಿಯನ್ನು ಬಹಿರಂಗಪಡಿಸಲಿ. ಆದರೆ, ಇಲಾಖೆ ಯಾವುದೇ ರೀತಿ ಯೋಜನೆ ರೂಪಿಸಿಲ್ಲ ಎಂದು ಉತ್ತರ ನೀಡಲಾಗಿದೆ. ಯೋಜನೆ ರೂಪಿಸದೆಯೇ ಉದ್ಯಾನ ನಿರ್ಮಿಸಲು ಮುಂದಾಗಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ನ.3ಕ್ಕೆ ವನ್ಯಜೀವಿ ಮಂಡಳಿ ಸಭೆ

ರಾಜ್ಯ ವನ್ಯಜೀವಿ ಮಂಡಳಿಯ 16ನೇ ಸಭೆ ನ.3ರಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆಯಲಿದೆ.
ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸುವ ಕುರಿತು ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿದೆ.

ಈ ವಿಷಯದ ಬಗ್ಗೆ ಪರಿಸರ ಕಾರ್ಯಕರ್ತರು ಸಲ್ಲಿಸಿದ್ದ ಮನವಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಕಳುಹಿಸಿದ್ದಾರೆ.

₹ 25 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಹಾರ್ಲೆ ಓಕ್ಕೊಕ್ವು (36) ಎಂಬುವವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ₹ 25 ಲಕ್ಷ ಮೌಲ್ಯದ ಎಂಡಿಎಂಎ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದಾರೆ.

'ನೈಜೀರಿಯಾದ ಆರೋಪಿ ಹಾರ್ಲೆ, ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ. ಕೆ.ಆರ್.ಪುರ ಬಳಿ ವಾಸವಿದ್ದ ಈತ, ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ಗ್ರಾಹಕರಿಗೆ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಎರಡು ಮೊಬೈಲ್ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ವರ್ತೂರು ಠಾಣಾ ವ್ಯಾಪ್ತಿಯಲ್ಲಿ ಘಟನೆ • ಪತಿ ನಿಹಾರ್ ರಂಜನ್ ರಾವತ್ ಬಂಧನ

ಮಕ್ಕಳಾಗದಿದ್ದಕ್ಕೆ ಗಲಾಟೆ: ಗೃಹಿಣಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಉಪಾಸನಾ ರಾವತ್



ನಿಹಾರ್ ರಾವತ್

ಅಪರಾಧ ಸುದ್ದಿ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯದ 9ನೇ ಮಹಡಿಯಿಂದ ಜಿಗಿದು ಉಪಾಸನಾ ರಾವತ್ (30) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಪತಿ ನಿಹಾರ್ ರಂಜನ್ ರಾವತ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಉಪಾಸನಾ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪಣತ್ತೂರು ಮುಖ್ಯರಸ್ತೆಯ ದಿಶಾ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ದಂಪತಿ ವಾಸವಿದ್ದರು. ನಿಹಾರ್ ಸಹ ಖಾಸಗಿ ಕಂಪನಿ ಉದ್ಯೋಗಿ' ಎಂದು ಪೊಲೀಸರು ಹೇಳಿದರು.

'ಉಪಾಸನಾ ಹಾಗೂ ನಿಹಾರ್, ಕೆಲ ವರ್ಷಗಳ ಹಿಂದೆ ಮದುವೆಯಾಗಿದ್ದರು. ಆದರೆ, ಅವರಿಗೆ ಮಗು ಆಗಿರಲಿಲ್ಲ. ಇದೇ ವಿಚಾರವಾಗಿ ದಂಪತಿ ನಡುವೆ ಜಗಳ ಶುರುವಾಗಿತ್ತು. ವಿಚ್ಛೇದನ ಪಡೆಯುವ ಹಂತಕ್ಕೂ ತಲುಪಿತ್ತು' ಎಂದು ಅವರು ಹೇಳಿದರು.

'ಸೋಮವಾರ (ಅ. 17) ರಾತ್ರಿ ದಂಪತಿ ಮಧ್ಯೆ ಪುನಃ ಜಗಳವಾಗಿತ್ತು. ಇದರಿಂದ ಬೇಸತ್ತ ಉಪಾಸನಾ, 9ನೇ ಮಹಡಿಗೆ ಹೋಗಿ ಅಲ್ಲಿಂದ ಜಿಗಿದಿದ್ದರು. ತೀವ್ರ ಗಾಯಗೊಂಡು ಅವರು ಮೃತಪಟ್ಟರು' ಎಂದು ತಿಳಿಸಿದರು.

'ಪತಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದಾನೆ. ಖಾಸಗಿ ಕ್ಷಣಗಳ ವಿಡಿಯೊ ಚಿತ್ರೀಕರಿಸಿ ಪೀಡಿಸಿದ್ದಾನೆ. ಈತನಿಗೆ ಶಿಕ್ಷೆಯಾಗಬೇಕು' ಎಂದು ಉಪಾಸನಾ ಬರೆದಿದ್ದಾರೆ ಎನ್ನಲಾದ ಮರಣಪತ್ರ ಸಿಕ್ಕಿದೆ. ಕೈ ಬರಹ ಪರೀಕ್ಷೆಗೆಂದು ಪತ್ರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಸಂಬಂಧಿಕರು ನೀಡಿರುವ ದೂರು ಆಧರಿಸಿ ನಿಹಾರ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಸಾಗಣೆ: ರೈಲ್ವೆ ಗುತ್ತಿಗೆ ನೌಕರರು ಬಂಧನ

ಬೆಂಗಳೂರು: ರೈಲುಗಳ ಮೂಲಕ ಡ್ರಗ್ಸ್ ಸಾಗಿಸುತ್ತಿದ್ದ ಆರೋಪದಡಿ ರೈಲ್ವೆ ಇಲಾಖೆಯ ಮೂವರು ಗುತ್ತಿಗೆ ನೌಕರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಅಸ್ಸಾಂನ ರಾಜೇಶ್ ಪಾಲ್, ಬಪ್ಪಾ ಕರ್ಡೆ ಹಾಗೂ ಪಿಂಟು ದಾಸ್ ಬಂಧಿತರು. ರೈಲ್ವೆ ಇಲಾಖೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಮೂವರು, ವ್ಯವಸ್ಥಿತವಾಗಿ ಡ್ರಗ್ಸ್ ಸಾಗಿಸುತ್ತಿದ್ದರು. ಇತ್ತೀಚೆಗೆ ಸೆರೆ ಹಿಡಿಯಲಾಗಿದ್ದ ಪೆಡ್ಲರ್ ನೀಡಿದ್ದ ಮಾಹಿತಿ ಆಧರಿಸಿ ಮೂವರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಆರೋಪಿಗಳಿಗೆ ರೈಲುಗಳಲ್ಲಿ ಲಾಕರ್‌ಗಳನ್ನು ನೀಡಲಾಗಿತ್ತು. ಅದೇ ಲಾಕರ್‌ಗಳಲ್ಲಿ ಅಸ್ಸಾಂನಿಂದ ಗಾಂಜಾ ಬಚ್ಚಿಟ್ಟುಕೊಂಡು ತರುತ್ತಿದ್ದ ಆರೋಪಿಗಳು, ಬೆಂಗಳೂರಿನಲ್ಲಿ ಪೆಡ್ಲರ್‌ಗಳಿಗೆ ತಲುಪಿಸುತ್ತಿದ್ದರು. ಸದ್ಯ ಆರೋಪಿಗಳಿಂದ ₹ 80 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿವೆ.

ಇ–ಸೀಲ್: ಪ್ರಕರಣ ರದ್ದುಗೊಳಿಸಲು ನಕಾರ

ಬೆಂಗಳೂರು: ಹಡಗುಗಳ ಮೂಲಕ ಸರಕು ರಫ್ತು ಮಾಡುವಾಗ ಬಳಸಲಾಗುವ ರೇಡಿಯೊ ಫ್ರೀಕ್ವೆನ್ಸಿ ಗುರುತಿಸುವ ತಂತ್ರಜ್ಞಾನ ಆಧಾರಿತ ಟ್ಯಾಂಪರ್ ಪ್ರೂಫ್ (ನಕಲು ಮಾಡಲಾಗದ) ಇ-ಸೀಲ್‌ಗಳನ್ನು ಪೂರೈಕೆ ಮಾಡುತ್ತಿದ್ದ ಕಂಪನಿಯ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ನಗರದ ಐಬಿ-ಟ್ರ್ಯಾಕ್ ಸಲ್ಯೂಷನ್ಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಕಂಪನಿ ಇ-ಸೀಲ್‌ನಲ್ಲಿ ತನ್ನ ವಾಣಿಜ್ಯ ಹಿತಾಸಕ್ತಿ ರಕ್ಷಿಸಿಕೊಳ್ಳುವ ಸಲುವಾಗಿ ಟ್ಯಾಂಪರ್ ಮಾಡುವ ಅಲರ್ಟ್‌ಗಳನ್ನು ಗೋಪ್ಯವಾಗಿ ಇರಿಸಿದೆ. ಈ ಲೋಪ ರಾಷ್ಟ್ರೀಯ ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪತ್ರಕರ್ತನ ಮೇಲ್ಮನವಿ ವಜಾ

ನವದೆಹಲಿ: ನಿವೃತ್ತ ಐಎಎಸ್ ಅಧಿಕಾರಿ ಹರೀಶ್ ಗೌಡ ಅವರ ಬಗ್ಗೆ ಅವಹೇಳನಕಾರಿಯಾಗಿ ವರದಿ ಪ್ರಕಟಿಸಿದ್ದಕ್ಕಾಗಿ ಆರು ತಿಂಗಳು ಜೈಲು ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ 'ಪಾರಿವಾಳ' ಪತ್ರಿಕೆಯ ಸಂಪಾದಕ ಅತ್ತಿಗುಪ್ಪೆ ರವಿಕುಮಾರ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ಪಿ.ಎಸ್.ನರಸಿಂಹ ಅವರಿದ್ದ ಪೀಠವು, ರವಿಕುಮಾರ್ ಅವರ ಮನವಿಯನ್ನು ತಿರಸ್ಕರಿಸಿತು.

ಪಿಯು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಹರೀಶ್ ಗೌಡ ಅವರ ಬಗ್ಗೆ 2000ರಲ್ಲಿ ವರದಿ ಪ್ರಕಟವಾಗಿತ್ತು. ಅದನ್ನು ಪ್ರಶ್ನಿಸಿ ಹರೀಶ್‌ಗೌಡರು ನ್ಯಾಯಾಲಯಕ್ಕೆ ಖಾಸಗಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯ 2002ರಲ್ಲಿ ರವಿಕುಮಾರ್ ಅವರಿಗೆ 1 ವರ್ಷ 2 ತಿಂಗಳು ಜೈಲು ಶಿಕ್ಷೆ ವಿಧಿಸಿತ್ತು.

ತೀರ್ಪು ಮರುಪರಿಶೀಲಿಸಲು ಕೋರಿ ರವಿಕುಮಾರ್, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಸಿಎಂಎಂ ನ್ಯಾಯಾಲಯದಲ್ಲೇ ಮೇಲ್ಮನವಿ ಸಲ್ಲಿಸಲು ಸೂಚಿಸಿತ್ತು. ನಂತರ ರವಿಕುಮಾರ್, 5ನೇ ಎಸಿಎಂಎಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಕೋರ್ಟ್ 9 ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು. ಇದನ್ನು ಹೈಕೋರ್ಟ್ 6 ತಿಂಗಳಿಗೆ ಕಡಿತಗೊಳಿಸಿತ್ತು. ಪೊಲೀಸರು ರವಿಕುಮಾರ್ ಅವರನ್ನು ಇತ್ತೀಚೆಗೆ ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಇದನ್ನು ಪ್ರಶ್ನಿಸಿ ಆರೋಪಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ಭ್ರೂಣ ಲಿಂಗ ಪತ್ತೆ: ಕೇಂದ್ರಗಳ ವಿರುದ್ಧ ಶಿಸ್ತುಕ್ರಮ'

ಪ್ರಜಾವಾಣಿ ವಾರ್ತೆ



ಡಿ. ರಂದೀಪ್

ಬೆಂಗಳೂರು: 'ಭ್ರೂಣ ಲಿಂಗಪತ್ತೆ ಶಿಕ್ಷಾರ್ಹ ಅಪರಾಧ. ಭ್ರೂಣ ಲಿಂಗ ಪತ್ತೆ ಮಾಡುವ ಸ್ಕ್ಯಾನಿಂಗ್ ಸೆಂಟರ್‌ಗಳ ವಿರುದ್ಧ ಶಿಸ್ತುಕ್ರಮ ಜರುಗಿಸಿ, ಬೀಗಮುದ್ರೆ ಹಾಕಲಾಗುವುದು' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನವು 'ಗರ್ಭಪೂರ್ವ ಮತ್ತು ಪ್ರಸವಪೂರ್ವ ಲಿಂಗ ಆಯ್ಕೆ ನಿಷೇಧ ಕಾಯ್ದೆ 1994'ರ ಕುರಿತು ಹಮ್ಮಿಕೊಂಡ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

'ಭ್ರೂಣ ಲಿಂಗ ಪತ್ತೆ ಕಾನೂನುಬಾಹಿರ ಎಂಬುದರ ಬಗ್ಗೆ ವೈದ್ಯರು ಜಾಗೃತಿ ಮೂಡಿಸಬೇಕು. ಭ್ರೂಣ ಲಿಂಗ ಪತ್ತೆಗೆ ಸಂಬಂಧಿಸಿದಂತೆ ವೈದ್ಯರಿಗೆ ಮೊದಲ ಪ್ರಕರಣದಲ್ಲಿ 3 ವರ್ಷ ಜೈಲು ಮತ್ತು ದಂಡ ವಿಧಿಸಲಾಗುತ್ತದೆ. ಪುನರಾವರ್ತನೆಯಾದಲ್ಲಿ 5 ವರ್ಷ ಜೈಲು ಶಿಕ್ಷೆಯ ಜತೆಗೆ ವೈದ್ಯ ವೃತ್ತಿ ನಡೆಸದಂತೆ ನಿರ್ಬಂಧ ವಿಧಿಸಲಾಗುವುದು. ಸ್ಕ್ಯಾನಿಂಗ್ ಸೆಂಟರ್‌ನ ಪರವಾನಗಿ ರದ್ದುಪಡಿಸಿ, ಕಠಿಣ ಕ್ರಮಕೈಗೊಳ್ಳಲಾಗುವುದು. ದೇಶದಲ್ಲಿ 2001ರ ವೇಳೆಗೆ ಸಾವಿರಕ್ಕೆ 933 ಇದ್ದ ಲಿಂಗಾನುಪಾತ, 2011ರ ವೇಳೆ 940ಕ್ಕೆ ಏರಿಕೆಯಾಗಿದೆ. ಆದರೂ ಪರಿಸ್ಥಿತಿ ಇನ್ನಷ್ಟು ಸುಧಾರಿಸಬೇಕಿದೆ. ವೈದ್ಯರ ಮೇಲೆ ಹೆಚ್ಚು ಜವಾಬ್ದಾರಿಯಿದೆ' ಎಂದು ಹೇಳಿದರು.

'ಹೆಣ್ಣು ಭ್ರೂಣ ಹತ್ಯೆ ನಿಷೇಧ ಸಂಬಂಧ 1994ರಲ್ಲಿ ಕಾಯ್ದೆ ರೂಪಿಸಲಾಯಿತು. 2011ರಲ್ಲಿ ಸಮಗ್ರ ತಿದ್ದುಪಡಿ ತಂದು, ಕಾನೂನು ಜಾರಿಗೊಳಿಸಲಾಗಿದೆ. ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ವೈದ್ಯರು ಆಮಿಷಕ್ಕೆ ಒಳಗಾಗಿ, ಇಲ್ಲವೇ ಒತ್ತಾಯಕ್ಕೆ ಭ್ರೂಣ ಲಿಂಗ ಪತ್ತೆ ಮಾಡಿದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

'ಭ್ರೂಣ ಲಿಂಗ ಪತ್ತೆ ತಡೆಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ಇದೆ. ಕಾನೂನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಈ ಸಮಿತಿಗೆ ಇದೆ' ಎಂದು ಹೇಳಿದರು.

ಇಲಾಖೆಯ ಯೋಜನಾ ನಿರ್ದೇಶಕ ಡಾ.ಶ್ರೀನಿವಾಸನ್, ನಿರ್ದೇಶಕಿ ಡಾ. ಇಂದುಮತಿ, ಕಾರ್ಯಾಗಾರ ನಿರ್ದೇಶಕ ಅನುಜ್ ಗುಲಾಟಿ ಇದ್ದರು.



ಎಂ.ಚಂದ್ರಪ್ಪ ಅವರ ಸಮ್ಮುಖದಲ್ಲಿ ಎಸ್‌ಬಿಐ ಉಪ ಪ್ರಧಾನ ವ್ಯವಸ್ಥಾಪಕ ಪಂಕಜ್ ತಪ್ಲಿಯಾಲ್ ಮತ್ತು ವಿ.ಅನ್ಬುಕುಮಾರ್ ಒಪ್ಪಂದ ಪತ್ರಗಳನ್ನು ಹಸ್ತಾಂತರ ಮಾಡಿಕೊಂಡರು. ಕೆಎಸ್‌ಆರ್‌ಟಿಸಿ ನಿರ್ದೇಶಕ (ಸಿಬ್ಬಂದಿ ಮತ್ತು ಜಾಗೃತ) ವೈ. ನವೀನ್ ಭಟ್ ಇದ್ದರು

'ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ₹50 ಲಕ್ಷ ಅಪಘಾತ ವಿಮೆ'

ಬೆಂಗಳೂರು: ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ₹50 ಲಕ್ಷದ ತನಕ ಅಪಘಾತ ವಿಮಾ ಸೌಲಭ್ಯ ದೊರಕಿಸುವ ಯೋಜನೆಯನ್ನು ನಿಗಮ ಜಾರಿಗೆ ತಂದಿದೆ.

ಈ ಸಂಬಂಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ) ಜತೆ ಒಡಂಬಡಿಕೆಯನ್ನು ಕೆಎಸ್‌ಆರ್‌ಟಿಸಿ ಬುಧವಾರ ಮಾಡಿಕೊಂಡಿದೆ. ನಿಗಮದ ಅಧ್ಯಕ್ಷ ಚಂದ್ರಪ್ಪ ಸಮ್ಮುಖದಲ್ಲಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಮತ್ತು ಎಸ್‌ಬಿಐ ಉಪ ಪ್ರಧಾನ ವ್ಯವಸ್ಥಾಪಕ ಪಂಕಜ್ ತಪ್ಲಿಯಾಲ್ ಒಪ್ಪಂದಕ್ಕೆ ಸಹಿ ಹಾಕಿದರು.

ಅಪಘಾತದಲ್ಲಿ ಸಿಬ್ಬಂದಿ ಮೃತಪಟ್ಟರೆ ಅವಲಂಬಿತರಿಗೆ ಈವರೆಗೆ ಪರಿಹಾರ ಸಿಗುತ್ತಿರಲಿಲ್ಲ. ಹೊಸ ಯೋಜನೆಯಿಂದ ಎಸ್‌ಬಿಐ ಬ್ಯಾಂಕ್‌ನಲ್ಲಿ ವೇತನ ಖಾತೆ ಹೊಂದಿರುವ ನೌಕರರಿಗೆ 'ಪ್ರೀಮಿಯಂ ರಹಿತ' ವೈಯಕ್ತಿಕ ಅಪಘಾತ ವಿಮೆ ಲಭ್ಯವಾಗಲಿದೆ. ನಿಗಮದ ಶೇ 55ಕ್ಕೂ ಹೆಚ್ಚು ಸಿಬ್ಬಂದಿ ಎಸ್‌ಬಿಐನಲ್ಲಿ ವೇತನ ಖಾತೆ ಹೊಂದಿದ್ದಾರೆ ಎಂದು ನಿಗಮ ತಿಳಿಸಿದೆ.

ಈ ವೈಯಕ್ತಿಕ ವಿಮಾ ಯೋಜನೆ ಪಾಲಿಸಿದಾರರು ಅಪಘಾತದಲ್ಲಿ ಮೃತಪಟ್ಟರೆ ಅವರ ಅವಲಂಬಿತರಿಗೆ ₹50 ಲಕ್ಷ ಪರಿಹಾರ ದೊರೆಯಲಿದೆ. ಶಾಶ್ವತ ಅಂಗವಿಕಲರಾದರೆ ₹20 ಲಕ್ಷ ಹಾಗೂ ಭಾಗಶಃ ಅಂಗವಿಕಲರಾದರೆ ₹10 ಲಕ್ಷ ವಿಮಾ ಪರಿಹಾರ ದೊರೆಯಲಿದೆ. ಕರ್ತವ್ಯದಲ್ಲಿ ಇಲ್ಲದ ಅವಧಿಯಲ್ಲಿ ಅಪಘಾತ ಸಂಭವಿಸಿದರೂ ಪಾಲಿಸಿದಾರರಿಗೆ ವಿಮಾ ಸೌಲಭ್ಯ ಲಭ್ಯವಾಗಲಿದೆ.

ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಗೆ ಗರಿಷ್ಠ ₹10 ಲಕ್ಷ, ಔಷಧಗಳ ಆಮದಿಗೆ ಗರಿಷ್ಠ ₹5 ಲಕ್ಷ, ಕೋಮಾದಲ್ಲಿ ಮೃತಪಟ್ಟರೆ ಹೆಚ್ಚುವರಿ ₹2 ಲಕ್ಷ(₹50 ಲಕ್ಷ ಮತ್ತು ₹2 ಲಕ್ಷ), ವಿಮಾನ ಆಂಬುಲೆನ್ಸ್ ಸೇವೆಗೆ ₹10 ಲಕ್ಷ ಪರಿಹಾರ ದೊರಕಲಿದೆ. ಸಿಬ್ಬಂದಿ ಅಪಘಾತದಲ್ಲಿ ಮೃತಪಟ್ಟರೆ ಅವರ ಮಕ್ಕಳ ಪದವಿ ಶಿಕ್ಷಣಕ್ಕೆ ಗರಿಷ್ಠ ₹5 ಲಕ್ಷ ಹಾಗೂ ಹೆಣ್ಣುಮಗಳ ವಿವಾಹಕ್ಕೆ ಗರಿಷ್ಠ ₹5 ಲಕ್ಷದ ತನಕ ಆರ್ಥಿಕ ಸಹಾಯವನ್ನೂ ಈ ವಿಮೆ ಒಳಗೊಂಡಿದೆ ಎಂದು ನಿಗಮ ವಿವರಿಸಿದೆ.

'ನಿಗಮದ ಸಿಬ್ಬಂದಿ ಮತ್ತು ಅವರ ಕುಟುಂಬದ ಹಿತದೃಷ್ಟಿಯಿಂದ ಈ ವಿಮಾ ಯೋಜನೆ ಜಾರಿಗೊಳಿಸಲಾಗಿದೆ. ಸಾರಿಗೆ ನಿಗಮಗಳಲ್ಲೇ ಅತ್ಯಧಿಕ ಮೊತ್ತದ ಅಪಘಾತ ವಿಮಾ ಯೋಜನೆ ಇದಾಗಿದೆ. ಕರ್ತವ್ಯದಲ್ಲಿ ಇಲ್ಲದ ಸಂದರ್ಭದಲ್ಲಿ ಅಪಘಾತ ಸಂಭವಿಸಿದರೂ ವಿಮೆ ಲಭ್ಯವಾಗುವುದು ಈ ಯೋಜನೆಯ ಮತ್ತೊಂದು ವಿಶೇಷ' ಎಂದು ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ ಸಂತಸ ವ್ಯಕ್ತಪಡಿಸಿದರು.

ಕಾರ್ಡ್ ರಸ್ತೆ ಮೇಲ್ಸೇತುವೆ: 1 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವೆಸ್ಟ್ ಆಫ್ ಕಾರ್ಡ್ ರಸ್ತೆ ಮೇಲ್ಸೇತುವೆ ಕಾಮಗಾರಿಯನ್ನು ನವೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಬೇಕು ಎಂದು ವಸತಿ ಸಚಿವ ವಿ. ಸೋಮಣ್ಣ ಅವರು ಎಂಜಿನಿಯರ್‌ಗಳಿಗೆ ಸೂಚಿಸಿದರು.

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಸೋಮಣ್ಣ, ಇನ್ನಾವುದೇ ರೀತಿಯ ವಿಳಂಬ ಸಹಿಸುವುದಿಲ್ಲ ಎಂದರು.

ಶಿವನಗರ ನಂತರದ ಜಂಕ್ಷನ್‌ಗಳಾದ ಬಸವೇಶ್ವರ ನಗರ ಜಂಕ್ಷನ್ ಮತ್ತು 72ನೇ ಅಡ್ಡ ರಸ್ತೆಯ ಜಂಕ್ಷನ್ ಬಳಿ ಮೇಲ್ಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ. ಬಸವೇಶ್ವರ ಜಂಕ್ಷನ್ ಬಳಿ ಹೆಚ್ಚುವರಿ ಏಕಮುಖ ಸಂಚಾರದ ಮೇಲ್ಸೇತುವೆ ₹54.63 ಕೋಟಿ ವೆಚ್ಚದಲ್ಲಿ ಒಟ್ಟು 735 ಮೀಟರ್ ಉದ್ದದ ಕಾಮಗಾರಿ ಅಂತಿಮ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು.



ಮಾರುತಿ ಮಂದಿರ ವಾರ್ಡ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಕೇಂದ್ರಕ್ಕೆ ವಿ.ಸೋಮಣ್ಣ ಹಾಗೂ ತುಷಾರ್ ಗಿರಿನಾಥ್ ಚಾಲನೆ ನೀಡಿದರು

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸಿಗ್ನಲ್‌ಮುಕ್ತ ಕಾರಿಡಾರ್ ನಿರ್ಮಿಸಲು ಮಂಜುನಾಥನಗರದ ಬಳಿ ಮೇಲ್ಸೇತುವೆ, ಶಿವನಗರ 1 ಮತ್ತು 8ನೇ ಮುಖ್ಯರಸ್ತೆಯ ಕೂಡು ಸ್ಥಳದಲ್ಲಿ ಕೆಳಸೇತುವೆ ಹಾಗೂ ಬಸವೇಶ್ವರ ನಗರ ವೃತ್ತದ ಏಕಮುಖ ಸಂಚಾರದ ಬಳಿ ಮೇಲ್ಸೇತುವೆಯ ಗ್ರೇಡ್ ಸೆಪರೇಟರ್ ಯೋಜನೆ ಅನುಷ್ಠಾನವಾಯಿತು. ಮಂಜುನಾಥನಗರ ಬಳಿ ₹18.18 ಕೋಟಿ ವೆಚ್ಚದಲ್ಲಿ 270.62 ಮೀ ಉದ್ದದ ಮೇಲ್ಸೇತುವೆ 2018ರ ಆ.27ರಂದು ಮುಕ್ತವಾಗಿತ್ತು. ಶಿವನಗರ 1 ಮತ್ತು 8ನೇ ಮುಖ್ಯರಸ್ತೆಯ ಕೂಡು ಸ್ಥಳದಲ್ಲಿ ಕೆಳಸೇತುವೆಯ ಬದಲಾಗಿ ₹71.98 ಕೋಟಿ ವೆಚ್ಚದಲ್ಲಿ 655 ಮೀಟರ್ ಉದ್ದದ ಮೇಲ್ಸೇತುವೆ 2021ರ ಅ.4ರಂದು ಮುಕ್ತವಾಗಿತ್ತು.

ಡಿಸಿಪಿ ನಿಶಾ ಜೇಮ್ಸ್ ವರ್ಗಾವಣೆ

ಬೆಂಗಳೂರು: 'ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿಯ ಡಿಸಿಪಿ (ಡಿಸಿಪಿ) ನಿಶಾ ಜೇಮ್ಸ್ ಅವರು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಸಿಬ್ಬಂದಿ ದೂರು ನೀಡಿದ್ದ ಬೆನ್ನಲ್ಲೇ ನಿಶಾ ಅವರನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾವಣೆ ಮಾಡಲಾಗಿದೆ.

ನಿಶಾ ಅವರ ಜಾಗಕ್ಕೆ ಬಿ.ಎಂ. ಲಕ್ಷ್ಮಿಪ್ರಸಾದ್ ಅವರನ್ನು ವರ್ಗಾಯಿಸಿ ಎಡಿಜಿಪಿ (ಪೊಲೀಸ್ ಆಡಳಿತ) ಎಂ.ಎ. ಸಲೀಂ ಆದೇಶ ಹೊರಡಿಸಿದ್ದಾರೆ.

'ವಾರ್ಷಿಕ ವೇತನ ಬಡ್ತಿ ತಡೆ ಹಿಡಿದಿರುವ ನಿಶಾ ಜೇಮ್ಸ್, ಭವಿಷ್ಯದ ಜತೆಗೆ ಚೆಲ್ಲಾಟ ಆಡುತ್ತಿದ್ದಾರೆ. ತಮ್ಮ ತಪ್ಪನ್ನು ಸಿಬ್ಬಂದಿ ಮೇಲೆ ಹೊರಿಸಿ ವಿನಾಕಾರಣ ಕಿರುಕುಳ ನೀಡುತ್ತಿದ್ದಾರೆ. ಸಣ್ಣಸಮಸ್ಯೆಗಳನ್ನೇ ದೊಡ್ಡದಾಗಿ ಬಿಂಬಿಸಿ ಕೆಲಸವನ್ನು ವರ್ಷಗಟ್ಟಲೇ ಎಳೆಯುತ್ತಿದ್ದಾರೆ. ಕಡತಗಳ ವಿಲೇವಾರಿ ಸಹ ವಿಳಂಬವಾಗುತ್ತಿದೆ' ಎಂದು ಆರೋಪಿಸಿದ್ದ ಸಿಬ್ಬಂದಿ, ಎಡಿಜಿಪಿ ಎಂ.ಎ. ಸಲೀಂ ಅವರಿಗೆ 13 ಪುಟಗಳ ಪತ್ರ ಬರೆದಿದ್ದರು.

ಪಾಕಿಸ್ತಾನ ಕ್ರಿಕೆಟ್ ವೀಕ್ಷಕ ವಿವರಣೆಗಾರನ ಪುತ್ರಿಗೆ ಅಸ್ಥಿಮಜ್ಜೆ ಕಸಿ

ಬೆಂಗಳೂರು: ಪಾಕಿಸ್ತಾನ ಕ್ರಿಕೆಟ್‌ನ ವೀಕ್ಷಕ ವಿವರಣೆಗಾರ ಸಿಕಂದರ್ ಬಖ್ತ್ ಅವರ ಎರಡು ವರ್ಷದ ಪುತ್ರಿಗೆ ಇಲ್ಲಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ಅಸ್ಥಿಮಜ್ಜೆ ಕಸಿ ನಡೆಸಲಾಗಿದೆ.

ಇದರೊಂದಿಗೆ 2 ಸಾವಿರ ಅಸ್ಥಿಮಜ್ಜೆ ಕಸಿ ನಡೆಸಿದ ಸಾಧನೆಯನ್ನು ನಾರಾಯಣ ಹೆಲ್ತ್ ಸಿಟಿ ಮಾಡಿದೆ. ಪಾಕಿಸ್ತಾನದ ಕರಾಚಿಯ ಮೈರಾ ಸಿಕಂದರ್ ಖಾನ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದ ಬಾಲಕಿಯಾಗಿದ್ದಾಳೆ. ಮೈರಾ, 'ಮ್ಯೂಕೋಪೊಲಿಸ್ಯಾಕರೈಡೋಸಿಸ್' (ಎಂಪಿಎಸ್ 1) ಎಂಬ ಆನುವಂಶಿಕ ಕಾಯಿಲೆಯಿಂದ ಬಳಲುತ್ತಿದ್ದಳು.

ಎಂಪಿಎಸ್ 1 ಅಪರೂಪದ ಕಾಯಿಲೆಯಾಗಿದ್ದು, ಕಣ್ಣುಗಳು, ಮಿದುಳು ಸೇರಿ ವಿವಿಧ ಅಂಗಗಳ ಕಾರ್ಯನಿರ್ವಹಣೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಈ ರೋಗವನ್ನು ಗುರುತಿಸಿದ ವೈದ್ಯರು, ತಂದೆಯ ಅಸ್ಥಿಮಜ್ಜೆಯನ್ನು ಬಳಸಿ ಕಸಿ ಮಾಡಿದ್ದಾರೆ.

ಬುಧವಾರ ಆಸ್ಪತ್ರೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನಾರಾಯಣ ಹೆಲ್ತ್ ಸಿಟಿ ಅಧ್ಯಕ್ಷ ಡಾ.ದೇವಿ ಶೆಟ್ಟಿ ಅಸ್ಥಿಮಜ್ಜೆ ಕಸಿ ಕುರಿತು ಮಾಹಿತಿ ನೀಡಿದರು.



ಮೈರಾ ಸಿಕಂದರ್ ಖಾನ್ ಹಾಗೂ ತಾಯಿ ಸದಾಫ್ ಖಾನ್

ನಗರದಲ್ಲಿ ಬುಧವಾರ ರಾತ್ರಿಯಿಡೀ ಸುರಿದ ಮಳೆ; ಗುರುವಾರವೂ ಸಂಚಾರ ಅಸ್ತವ್ಯಸ್ತ

ತೆರವಾಗದ ರಾಜಕಾಲುವೆ ಒತ್ತುವರಿ: ತೀರದ ಬವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಬುಧವಾರ ರಾತ್ರಿ ಧಾರಾಕಾರ ಮಳೆ ಸುರಿದು, ರಸ್ತೆ, ಬಡಾವಣೆಗಳಿಗೆ ನೀರು ನುಗ್ಗಿದೆ. ಸೆಪ್ಟೆಂಬರ್‌ನಲ್ಲಿ ಅತಿ ಹೆಚ್ಚು ಸಮಸ್ಯೆಗೆ ಒಳಗಾಗಿದ್ದ ನಗರದ ಪೂರ್ವ ವಲಯದಲ್ಲಿ ಮತ್ತೆ ಸಂಕಷ್ಟ ಎದುರಾಗಿದ್ದು, ರಾಜಕಾಲುವೆ ಒತ್ತುವರಿ ತೆರವು ಕಾಟಾಚಾರಕ್ಕೆ ನಡೆದಿರುವುದು ಬಹಿರಂಗವಾಗಿದೆ.

ನಗರದ ಹಲವು ಬಡಾವಣೆಗಳಲ್ಲಿ ನೂರಾರು ಮನೆಗಳಿಗೆ ನೀರು ನುಗ್ಗಿದ್ದು, ಜನರು ಮಳೆ ನೀರನ್ನು ಹೊರಹಾಕಲು ರಾತ್ರಿಯಿಡೀ ಪ್ರಯಾಸಪಟ್ಟರು. ಪಶ್ಚಿಮ ಹಾಗೂ ದಕ್ಷಿಣ ವಲಯದಲ್ಲಿ ಭಾರಿ ಮಳೆಯಿಂದ ರಸ್ತೆಗಳು ಜಲಾವೃತಗೊಂಡಿದ್ದವು. ಬುಧವಾರ ಮಧ್ಯರಾತ್ರಿವರೆಗೂ ರಸ್ತೆಗುಂಡಿಗಳ ಜೊತೆಗೆ ಮಳೆ ನೀರೂ ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು. ಗುರುವಾರ ಮಧ್ಯಾಹ್ನದವರೆಗೆ ಶಿವಾನಂದ ವೃತ್ತ, ಆನಂದರಾವ್ ವೃತ್ತ ಸೇರಿದಂತೆ ಹಲವು ರಸ್ತೆಗಳಲ್ಲಿ, ಮೇಲ್ಸೇತುವೆಗಳ ಕೆಳಭಾಗದಲ್ಲಿ ನೀರು ನಿಂತು ಸಂಚಾರಕ್ಕೆ ಅಡ್ಡಿಯಾಗಿತ್ತು.

ದಕ್ಷಿಣ ವಲಯದ ವಿಜಯನಗರದ ಎ.ಸಿ.ಟಿ. ಕಾಲೊನಿ, ಸ್ಯಾಟಲೈಟ್ ಬಸ್‌ಸ್ಟಾಪ್, ಬಿಟಿಎಂ ಬಡಾವಣೆಯ ಕೆಎಎಸ್ ಕಾಲೊನಿ, ಡಾಲರ್ಸ್ ಕಾಲೊನಿ 5ನೇ ಸೆಕ್ಟರ್, ಪದ್ಮನಾಭನಗರದ ಜೆ.ಎಸ್.ಎಸ್ ವೃತ್ತ, ದೋಬಿಘಾಟ್ ಪ್ರದೇಶಗಳು ಜಲಾವೃತಗೊಂಡಿದ್ದವು. ಸುಮಾರು 10 ಮನೆಗಳಿಗೆ ನೀರು ನುಗ್ಗಿತ್ತು. ಸೌತ್ ಎಂಡ್, ಬಾಪೂಜಿ ಬಡಾವಣೆ, ಬಿಟಿಎಂ ಬಡಾವಣೆ, ಕೋರಮಂಗಲದಲ್ಲಿ ಮರಗಳು ಧರೆಗುರುಳಿದವು.

ಖಾಸಗಿ ಬಸ್ ನಿಲುಗಡೆ: ಬುಧವಾರ ರಾತ್ರಿ ಮಳೆ ಹಾಗೂ ಗುಂಡಿಗಳ ಕಾರಣ ಮೈಸೂರು ರಸ್ತೆಯಲ್ಲಿ ಮಧ್ಯರಾತ್ರಿಯವರೆಗೆ ಸಂಚಾರ ದಟ್ಟಣೆ ಉಂಟಾಗಿತ್ತು. 'ಸ್ಯಾಟಲೈಟ್ ಬಸ್ ನಿಲ್ದಾಣದ ಮುಂಭಾಗ ಖಾಸಗಿ ಬಸ್‌ಗಳು ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ನಿಂತಿದ್ದರಿಂದ ದಟ್ಟಣೆ ಮತ್ತಷ್ಟು ಹೆಚ್ಚಾಗಿತ್ತು. ಪ್ರತಿ ದಿನವೂ ಇಲ್ಲಿ ಖಾಸಗಿ ಬಸ್‌ಗಳಿಂದಲೇ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಸಂಚಾರ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ವಾಹನ ಸವಾರರು ದೂರಿದರು.

ಪೂರ್ವ ವಲಯದ ಮಹದೇವಪುರ ಹಾಗೂ ಕೆ.ಆರ್.ಪುರದಲ್ಲಿ ಮಳೆ ನೀರು ಬಡಾವಣೆಗಳಿಗೆ ನುಗ್ಗಿ ಸಂಕಷ್ಟ ಎದುರಾಗಿತ್ತು. ಸೆಪ್ಟೆಂಬರ್ ಮೊದಲ ಹಾಗೂ ಎರಡನೇ ವಾರದಲ್ಲಿ ಭಾರಿ ಮಳೆಯಿಂದ ತೊಂದರೆ ಅನುಭವಿಸಿದ್ದ ಈ ಭಾಗದ ಜನರು ಮತ್ತೆ ಅದೇ ರೀತಿ ಕಷ್ಟಕ್ಕೆ ಒಳಗಾದರು. ರಾಜಕಾಲುವೆ ಎಲ್ಲ ಒತ್ತುವರಿಯನ್ನು ತೆರವು ಮಾಡಲಾಗುತ್ತದೆ ಎಂದು ಎಲ್ಲರೂ ಹೇಳಿದ್ದರು. ಆದರೆ, ಈ ತೆರವು ಕಾರ್ಯ ಮೇಲ್ನೋಟಕ್ಕೆ ಮಾತ್ರ ಆಗಿರುವುದು ಮತ್ತೆ ಅದೇ ಪ್ರದೇಶಗಳಲ್ಲಿ ನೀರು ಹರಿದಿರುವುದು ಸಾಬೀತುಪಡಿಸಿದೆ.

ತಡೆಯಾಜ್ಞೆ; ನುಗ್ಗಿದ ನೀರು: ಕಳೆದ ಬಾರಿ ಭಾರಿ ಮಳೆಯಿಂದ ಪೂರ್ಣ ಜಲಾವೃತಗೊಂಡಿದ್ದ ಸರ್ಜಾಪುರ ರಸ್ತೆಯಲ್ಲಿರುವ ರೈನ್‌ಬೊ ಡ್ರೈವ್ ಬಡಾವಣೆಯ ಐಷಾರಾಮಿ ವಿಲ್ಲಾಗಳಿಗೆ ಮಳೆ ನೀರು ನುಗ್ಗಿತ್ತು. ರಾಜಕಾಲುವೆ ಒತ್ತುವರಿ ತೆರವು ಮಾಡದಂತೆ ನಿವಾಸಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ಯಾವುದೇ ರೀತಿಯ ತೆರವು ಆಗಿರಲಿಲ್ಲ. ಹೀಗಾಗಿ ಬುಧವಾರದ ಭಾರಿ ಮಳೆ ನೀರು ಮತ್ತೆ ಈ ಬಡಾವಣೆಗಳಿಗೆ ನುಗ್ಗಿದೆ.


ಎಜಿಆರ್ ಗಾರ್ಡನ್ಸ್, ಬೆಳ್ಳಂದೂರು ರಸ್ತೆ ಮುಳಗಡೆ ಆಗಿದ್ದು, ವ್ಯಕ್ತಿಯೊಬ್ಬರು ದ್ವಿಚಕ್ರ ವಾಹನದಲ್ಲಿ ಸಾಗಿದ್ದು ಹೀಗೆ –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ರಾಜಕಾಲುವೆ ಅಭಿವೃದ್ಧಿ ಕ್ರಿಯಾ ಯೋಜನೆಗೆ ಒಪ್ಪಿಗೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ₹1,500 ಕೋಟಿ ವೆಚ್ಚದಲ್ಲಿ ಬೃಹತ್ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸಚಿವ ಸಂಪುಟ ಸಭೆ ಘಟನೋತ್ತರ ಅನುಮೋದನೆ ನೀಡಿದೆ. ಈ ಕ್ರಿಯಾಯೋಜನೆಗೆ ಮೇ 30ರಂದೇ ಆದೇಶ ಹೊರಡಿಸಲಾಗಿತ್ತು. ಕೆಲವೆಡೆ ಕಾಮಗಾರಿಗಳನ್ನು ಆರಂಭಿಸಲಾಗಿದೆ.


ಎರಡನೇ ಹಂತದಲ್ಲಿ ರಾಜಕಾಲುವೆಗಳ ಹೂಳು ತೆಗೆಯಲಾಗುವುದು. 800 ಕಿ.ಮೀ. ಉದ್ದದಷ್ಟು ರಾಜಕಾಲುವೆ ಅಭಿವೃದ್ಧಿಪಡಿಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಗುತ್ತಿಗೆ ಅವಧಿ ನವೀಕರಣ: ಜೆ.ಪಿ.ನಗರ 2ನೇ ಹಂತದಲ್ಲಿ ತಿರುಮಲ ಲಕ್ಷ್ಮಿ ವೆಂಕಟೇಶ್ವರ ದೇವಾಲಯ ಸಂಸ್ಥೆಗೆ ನೀಡಿರುವ 31,215 ಚದರ ಅಡಿಯ ಜಾಗದ ಗುತ್ತಿಗೆಯನ್ನು 30 ವರ್ಷಗಳಿಗೆ ನವೀಕರಿಸಲು ಒಪ್ಪಿಗೆ ನೀಡಲಾಗಿದೆ. 2001ರ ಏಪ್ರಿಲ್ 1ರಿಂದ ಅನ್ವಯ ಆಗುವಂತೆ ನವೀಕರಿಸಲಾಗುವುದು ಎಂದರು.

ಅತಿಹೆಚ್ಚು ಮಳೆ ಎಲ್ಲೆಲ್ಲಿ?

(ಸೆಂ.ಮೀ ಗಳಲ್ಲಿ)

ಹಂಪಿನಗರ	8.5	ಚಾಮರಾಜಪೇಟೆ	5.7
ಗಾಳಿ ಆಂಜನೇಯಸ್ವಾಮಿ	7.2	ಬಾಣಸವಾಡಿ	5.7
ಕೋನೇನ ಅಗ್ರಹಾರ	7	ಎಚ್‌ಬಿಆರ್ ಬಡಾವಣೆ	5.7
ಬಸವನಗುಡಿ	7	ವಿಶ್ವೇಶ್ವರಪುರ	5.7
ವಿದ್ಯಾಪೀಠ	7	ಎಚ್‌ಎಸ್‌ಆರ್ ಬಡಾವಣೆ	5.6
ಎಚ್‌ಎಎಲ್ ವಿಮಾನನಿಲ್ದಾಣ	7	ಬೊಮ್ಮನಹಳ್ಳಿ	5.5
ದೊಡ್ಡನೆಕ್ಕುಂದಿ	6.9	ವನ್ನಾರ್‌ಪೇಟೆ	5.5
ದೊರೆಸಾನಿಪಾಳ್ಯ	6.7	ಬಿಟಿಎಂ ಲೇಔಟ್	5.4
ಕೋಣನಕುಂಟೆ	6.7	ಮಾರತಹಳ್ಳಿ	5.4
ರಾಜಮಹಲ್ ಗುಟ್ಟಹಳ್ಳಿ	6.6	ಕೋರಮಂಗಲ	5.4
ರಾಜರಾಜೇಶ್ವರಿನಗರ	6.5	ದಯಾನಂದನಗರ	5.4
ಜ್ಞಾನಭಾರತಿ	6.5	ಸಿಂಗಸಂದ್ರ	5.3
ಪುಲಕೇಶಿನಗರ	6	ಕೆಂಗೇರಿ	5.2
ಸಂಪಂಗಿರಾಮನಗರ	5.8	ಮಹದೇವಪುರ	5.1
ನಾಯಂಡಹಳ್ಳಿ	5.7		


ಎಚ್‌ಎಸ್‌ಆರ್ ಬಡಾವಣೆಯಲ್ಲಿನ ಉದ್ಯಾನದಲ್ಲಿ ತುಂಬಿರುವ ಮಳೆ ನೀರು – ಪ್ರಜಾವಾಣಿ ಚಿತ್ರ: ಎಸ್‌ಕೆ. ದಿನೇಶ್

ಪ್ರತಿ ಬಾರಿಯೂ ಸಮಸ್ಯೆಯೇ...

ಬೊಮ್ಮನಹಳ್ಳಿ ವಲಯದ ಅನುಗ್ರಹ ಬಡಾವಣೆ, ಎಚ್‌ಎಸ್‌ಆರ್ ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿ ಜನರು ಸಾಕಷ್ಟು ತೊಂದರೆ ಅನುಭವಿಸಿದರು. ಬುಧವಾರ ರಾತ್ರಿಯೇ ಮನೆಗೆ ನೀರು ನುಗ್ಗಿದ್ದರಿಂದ ಗುರುವಾರ ಮಧ್ಯಾಹ್ನದವರೆಗೂ ನಿವಾಸಿಗಳು ಪರದಾಡಿದರು.

'ಬುಧವಾರ ರಾತ್ರಿ 9.30ಕ್ಕೆ ಮಳೆ ನೀರು ಮನೆಗೆ ನುಗ್ಗಿತು. ಮನೆಯ ಫ್ರಿಡ್ಜ್, ವಾಷಿಂಗ್ ಮಷಿನ್ ಹಾಳಾಗಿವೆ. ಪೀಠೋಪಕರಣ, ವಾರ್ಡ್‌ರೋಬ್‌ಗೆ ನೀರು ನುಗ್ಗಿದೆ. ಮೂರು ತಿಂಗಳಲ್ಲಿ ಏಳನೇ ಬಾರಿಗೆ ಮನೆಗೆ ಈ ರೀತಿ ಮಳೆ ನೀರು ನುಗ್ಗಿದೆ' ಎಂದು ಅನುಗ್ರಹ ಬಡಾವಣೆಯ ಸೇತು ಮಾಧವ್ ಹೇಳಿದರು..

'ಬಿಳೇಕಹಳ್ಳಿ ಬಳಿಯ ಅನುಗ್ರಹ ಬಡಾವಣೆ ಮಡಿವಾಳ ಕೆರೆಗಿಂತ ಎರಡು ಅಡಿ ತಳಭಾಗದಲ್ಲಿದೆ. ಸ್ವಲ್ಪ ಮಳೆಯಾದರೂ ಈ ಬಡಾವಣೆಗೆ ನೀರು ನುಗ್ಗುತ್ತದೆ. ನಾವು ಎರಡು ಹಂತದಲ್ಲಿ ನೀರನ್ನು ಮಳೆ ಬಂದಾಗಲೆಲ್ಲ ಪಂಪ್ ಮಾಡುತ್ತಲೇ ಇರುತ್ತೇವೆ. 45 ಎಚ್.ಪಿ ಹಾಗೂ 30 ಎಚ್.ಪಿ ಪಂಪ್‌ನಲ್ಲಿ ನೀರನ್ನು ಪಂಪ್ ಮಾಡಲಾಗುತ್ತದೆ. ಪ್ರತಿ ಬಾರಿ ಮಳೆ ಬಂದಾಗಲೆಲ್ಲ ಈ ಸಮಸ್ಯೆ ಉಂಟಾಗುತ್ತಲೇ ಇರುತ್ತದೆ' ಎಂದು ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಶಶಿಕುಮಾರ್ ತಿಳಿಸಿದರು.

'ಎರಡು ವರ್ಷದಿಂದ ಸಣ್ಣ ಮಳೆ ಬಂದಾಗಲೆಲ್ಲ ನೀರನ್ನು ಪಂಪ್ ಮಾಡಲಾಗುತ್ತಿದೆ. ಒಂದೇ ಬಾರಿ ಅತಿಹೆಚ್ಚು ಮಳೆಯಾದಾಗ ರಾಜಕಾಲುವೆ ತುಂಬಿ ಹರಿಯುತ್ತದೆ. ಆ ಸಮಯದಲ್ಲಿ ಬಡಾವಣೆಯ ಸುಮಾರು 15 ಮನೆಗಳಿಗೆ ನೀರು ನುಗ್ಗುತ್ತದೆ. ಬುಧವಾರ ರಾತ್ರಿಯೂ ಇದೇ ರೀತಿ ಆಗಿದೆ. ಗುರುವಾರ ಮಧ್ಯಾಹ್ನದ ವೇಳೆಗೆ ನೀರನ್ನು ಪೂರ್ಣ ಪಂಪ್ ಮಾಡಲಾಯಿತು. ಶಾಶ್ವತ ಪರಿಹಾರವಾಗಬೇಕೆಂದರೆ, ಇನ್ನೂ ಹೆಚ್ಚಿನ ಸಾಮರ್ಥ್ಯದ ಅಂದರೆ ಸುಮಾರು 100 ಎಚ್.ಪಿ ಸಾಮರ್ಥ್ಯದ ಪಂಪ್ ಅಳವಡಿಸಬೇಕು ಅಥವಾ ಮಳೆ ನೀರಿನ ಮಟ್ಟ ನೋಡಿಕೊಂಡು ರಸ್ತೆ ಹಾಗೂ ಚರಂಡಿಯನ್ನು ಎತ್ತರಿಸಿ ನಿರ್ಮಿಸಬೇಕು. ಇದಕ್ಕೆ ಸ್ಥಳೀಯರ ವಿರೋಧ ಇದೆ. ಹೀಗೆ ಮಾಡಿದರೆ ಮನೆ ತಗ್ಗಾಗುತ್ತದೆ, ನಾವು ಇಳಿದುಕೊಂಡು ಹೋಗಬೇಕು ಎನ್ನುತ್ತಾರೆ. ಇದು ಸುಮಾರು 10 ಮನೆಯ ಸಮಸ್ಯೆ. ಇದರಿಂದ ಬಡಾವಣೆಗೆಲ್ಲ ಸಮಸ್ಯೆಯಾಗಿದೆ' ಎಂದು ವಿವರ ನೀಡಿದರು.

ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 6 ಮತ್ತು 7 ಕೂಡ ತಳಭಾಗದಲ್ಲಿದ್ದು ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಇರುವ ರಾಜಕಾಲುವೆಗೆ ಮಳೆನೀರು ಹರಿಯಬೇಕು. ಮೇಲ್ಭಾಗದಿಂದ ನೀರು ರಭಸವಾಗಿ ಹರಿಯುವುದರಿಂದ ಈ ಭಾಗದ ನೀರು ಹೋಗದೆ ನಿಲ್ಲುತ್ತದೆ. ಹೀಗಾಗಿ ಬಡಾವಣೆಯಲ್ಲಿ ನೀರು ನಿಂತಿತ್ತು. ಬೇಸ್‌ಮೆಂಟ್ ಇರುವ 10–15 ಮನೆಗಳಿಗೆ ನೀರು ಹೋಗಿದೆ. ಈ ಮಡಿವಾಳ ಕೆರೆಯ ಅಚ್ಚುಕಟ್ಟು ಪ್ರದೇಶ ಇದಾಗಿದ್ದು, ಭತ್ತ ಬೆಳೆಯುವ ಪ್ರದೇಶ ಇದಾಗಿತ್ತು. ಹೀಗಾಗಿ ಕೆರೆಯ ತಳಭಾಗದಲ್ಲಿದೆ ಎಂದರು.


ಹಾಲಿನ ಕ್ಯಾನ್ ಹಿಡಿದು ಗ್ರಾಮಸ್ಥರು ಹಳ್ಳ ದಾಟಿದರು

ರಸ್ತೆ ಸಂಪರ್ಕವೇ ಕಡಿತ

ದಾಬಸ್ ಪೇಟೆ: ಧಾರಾಕಾರ ಮಳೆಯಿಂದಾಗಿ ನೆಲಮಂಗಲ ತಾಲ್ಲೂಕಿನ, ಸೋಂಪುರ ಹೋಬಳಿಯ ಗಡಿ ಗ್ರಾಮ ಬರಗೂರು ಕಾಲೊನಿ ಸಂಪರ್ಕ ಕಡಿತಗೊಂಡಿದೆ. ಸರ್ಕಾರ ಇಲ್ಲಿ ಸುಮಾರು 60 ವರ್ಷಗಳ ಹಿಂದೆ ಕಾಲೊನಿ ನಿರ್ಮಿಸಿ ಬಡವರಿಗೆ ನಿವೇಶನ ನೀಡಿತ್ತು. ಅಲ್ಲಿ ನಿರಾಶ್ರಿತರು ಜೀವನ ನಡೆಸುತ್ತಿದ್ದಾರೆ.

ಕಾಲೊನಿ ಜತೆಗೆ ಸುತ್ತ ಮುತ್ತ ಮುತ್ತರಾಯಪ್ಪನ ಪಾಳ್ಯ, ಗೋವಿಂದನ ಪಾಳ್ಯ ಮತ್ತು ಚಲ್ಲಳ ಸಹ ಇವೆ. ನಾಲ್ಕು ಕಾಲೊನಿಗಳಿಂದ 70ಕ್ಕೂ ಹೆಚ್ಚು ಕುಟುಂಬಗಳಿವೆ. ಈ ಕುಟುಂಬಗಳು ಬರಗೂರು ಗ್ರಾಮದೊಂದಿಗೆ ನಿಕಟ ಸಂಪರ್ಕ ಹೊಂದಿವೆ.

ಶಾಲೆ, ದಿನಸಿ ಪದಾರ್ಥ ಖರೀದಿ, ಹಾಲಿನ ಡೇರಿ, ಪಶು ಆಸ್ಪತ್ರೆ ಹೀಗೆ ದಿನ ನಿತ್ಯದ ಕಾರ್ಯಗಳಿಗೆ ಬರಗೂರು ಗ್ರಾಮಕ್ಕೆ ಬರಬೇಕು. ಮಳೆಯಿಂದ ಇವರೆಲ್ಲಾ ಕೆಲ ದಿನಗಳಿಂದ ಐದಾರು ಅಡಿ ನೀರಿನಲ್ಲಿ ಭಯದಲ್ಲಿ ಬರಗೂರು ಗ್ರಾಮಕ್ಕೆ ಬರುತ್ತಿದ್ದಾರೆ. ಯಾವುದೇ ವಾಹನ ಸಂಚಾರಕ್ಕೆ ಅವಕಾಶ ಇಲ್ಲದಂತಾಗಿದೆ.

ಕಾಲೊನಿಯಲ್ಲಿ 40ಕ್ಕೂ ಹೆಚ್ಚು ಹಾಲು ಉತ್ಪಾದಕರಿದ್ದು, ನಿತ್ಯ ಎರಡು ಬಾರಿ ಡೇರಿಗೆ ಹಾಲು ಹಾಕಬೇಕು. ಜೀವದ ಹಂಗು ತೊರೆದು ಹಾಲಿನ ಕ್ಯಾನ್ ಜೊತೆ ಕಾಲುವೆ ದಾಟಿ ಡೇರಿಗೆ ಹಾಲು ಹಾಕಿ ಬರುತ್ತಿದ್ದಾರೆ. 'ಹತ್ತಾರು ಲೀಟರ್ ಹಾಲು ಇಟ್ಟುಕೊಂಡು ಏನು ಮಾಡುವುದು? ಹಳ್ಳದಲ್ಲಿಯೇ ದಾಟುವುದು ಅನಿವಾರ್ಯ' ಎನ್ನುತ್ತಾರೆ ಹಾಲು ಉತ್ಪಾದಕರು.


ಬೆಂಗಳೂರಿನಲ್ಲಿ ಬುಧವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಎಜಿಆರ್ ಗಾರ್ಡನ್ಸ್, ಬೆಳ್ಳಂದೂರು ರಸ್ತೆ ಜಲಾವೃತವಾಗಿತ್ತು.

'ದಿನಬಳಕೆ ವಸ್ತುಗಳು ನೀರುಪಾಲು'

ಕೆ.ಆರ್.ಪುರ: ಮಾರತಹಳ್ಳಿ ದೀಪಾ ನರ್ಸಿಂಗ್ ಹೋಂ ಬಳಿ ರಾಜಕಾಲುವೆಗೆ ಹೊಂದಿಕೊಂಡಿರುವ ಮನೆಗಳಿಗೆ ನೀರು ನುಗ್ಗಿ ಜನ ಜೀವನ ಅಸ್ತವ್ಯಸ್ತಗೊಂಡಿತ್ತು. 5ನೇ ಅಡ್ಡರಸ್ತೆಯಲ್ಲಿ ಕೆಲ ಮನೆಗಳಲ್ಲಿ ನಿತ್ಯ ಬಳಕೆಯ ವಸ್ತುಗಳು, ದಿನಸಿ ಪದಾರ್ಥಗಳು ಹಾಳಾದವು.

'ಸುಮಾರು 12 ವರ್ಷದಿಂದ ಈ ಪ್ರದೇಶದಲ್ಲಿ ಸಮಸ್ಯೆಯಿದೆ. ಸ್ವಲ್ಪ ಪ್ರಮಾಣದ ಮಳೆ ಬಿದ್ದರು ನೀರು ಬರುತ್ತಿದೆ. ಹಾವು, ಚೇಳುಗಳಿಂದ ಜೀವಾಪಾಯವಿದೆ. ಇದರ ಬಗ್ಗೆ ಅಧಿಕಾರಿಗಳು ಸೂಕ್ತ ಕ್ರಮ ಕೈಕೊಳ್ಳಬೇಕು' ಎಂದು ಸ್ಥಳೀಯ ನಿವಾಸಿ ರಮೇಶ್ ಆರೋಪಿಸಿದರು.

ಚಿಕ್ಕಬನಹಳ್ಳಿ ಕೆರೆ ಕೋಡಿ ಬಿದ್ದಿದ್ದರಿಂದಾಗಿ ರಸ್ತೆ ಜಲಾವೃತವಾಗಿದ್ದು, ಸವಾರರು ಪರದಾಡಿದರು. ಪಂಚಾಯಿತಿ ಅಧಿಕಾರಿಗಳು, ಕಂದಾಯ ಅಧಿಕಾರಿಗಳು ಹಾಗೂ ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರ ಸಮ್ಮುಖದಲ್ಲಿ ಸರ್ವೆ ಮಾಡಿ ರಾಜಕಾಲುವೆ ಗುರುತಿಸಿ ಒತ್ತುವರಿ ತೆರವು ಮಾಡಲು ಮುಂದಾದರು.


ಚಿಕ್ಕಬನಹಳ್ಳಿ ಕೆರೆ ತುಂಬಿ ಕೋಡಿ ಬಿದ್ದುದರಿಂದ ರಸ್ತೆಯ ಮೇಲೆ ಮಳೆ ನೀರು ಹರಿದು ವಾಹನ ಸವಾರರು ಪರದಾಡಿದರು

ರಾಮಮೂರ್ತಿನಗರ ಮುಖ್ಯರಸ್ತೆಯ ಚರ್ಚ್ ಬಳಿ ರಸ್ತೆಯಲ್ಲೂ ಸಮಸ್ಯೆ ಕಾಡಿತು. ಕೆಲಕಾಲ ಸಂಚಾರ ಸ್ಥಗಿತಗೊಂಡಿತ್ತು. ಲಕ್ಷ್ಮಣಮೂರ್ತಿನಗರ ಕೆರೆಯಿಂದ ಕೌದೇನಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯು ಪೂರ್ಣ ಪ್ರಮಾಣದಲ್ಲಿ ಒತ್ತುವರಿ ಆಗಿರುವುದು ಈ ಸಮಸ್ಯೆಗೆ ಮುಖ್ಯವಾದ ಕಾರಣವಾಗಿದೆ.

ರಾಮಮೂರ್ತಿನಗರ ಮುಖ್ಯರಸ್ತೆ ಹಾಗೂ ಐಟಿಐಗೆ ಹೋಗುವ ರಸ್ತೆಯಲ್ಲಿ 'ಚರ್ಚ್ ಹಾಗೂ ಅಂಗಡಿಗಳನ್ನು ರಾಜಕಾಲುವೆ ಮೇಲೇ ಕಟ್ಟಿ ನೀರು ಹೋಗದಂತೆ ಮಾಡಲಾಗಿದೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಜಪಾನ್ ತಂತ್ರಜ್ಞಾನ ಅಳವಡಿಕೆ: ತುಷಾರ್

'ನಗರದಲ್ಲಿ ತಗ್ಗುಪ್ರದೇಶದಲ್ಲಿರುವ ಬಡಾವಣೆಗಳಿಗೆ ಮಳೆ ನೀರು ನುಗ್ಗದಂತೆ ಮಾಡಲು ಇರುವುದು ಎರಡೇ ಪರಿಹಾರಗಳು. ಹೆಚ್ಚುವರಿ ನೀರನ್ನು ತುಂಬಿಕೊಳ್ಳುವ ದೊಡ್ಡ ಸಂಪ್‌ಗಳನ್ನು ಕಟ್ಟಬೇಕು. ಮತ್ತೊಂದು, ಸುರಂಗ ಮಾರ್ಗದಲ್ಲಿ ಪೈಪ್‌ಗಳನ್ನು ಅಳವಡಿಸಿ, ನೀರನ್ನು ಹೊರಭಾಗಕ್ಕೆ ಕಳುಹಿಸುವುದು. ಈ ಎಲ್ಲ ಪ್ರಸ್ತಾವಗಳನ್ನು ನಾವು ವಿಶ್ವಬ್ಯಾಂಕ್ ಪ್ರತಿನಿಧಿಗಳಿಗೆ ಸಲ್ಲಿಸಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು. ಸುರಂಗ ಮಾರ್ಗದಲ್ಲಿ ಪೈಪುಗಳನ್ನು ಅಳವಡಿಸಲು ರಸ್ತೆಗಳನ್ನು ಸಾಕಷ್ಟು ಅಗೆಯಬೇಕಾಗುತ್ತದೆ. ಇದು ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗಬಹುದು. ಹೀಗಾಗಿ ದೊಡ್ಡ ಸಂಪ್‌ಗಳನ್ನು ಕಟ್ಟುವುದು ಉತ್ತಮ. ಜಪಾನ್, ದಕ್ಷಿಣ ಕೊರಿಯಾ ಹಾಗೂ ಫಿಲಿಪ್ಪೀನ್ಸ್‌ನಲ್ಲಿ ಮಳೆ ನೀರನ್ನು ಇಂಗಿಸಲು 'ಮಂಕೀಸ್ ಚೀಕ್'ಗಳನ್ನು ನಿರ್ಮಿಸಲಾಗುತ್ತದೆ. ಇದರಂತೆ ಸಂಪ್‌ಗಳನ್ನು ಉದ್ಯಾನಗಳಲ್ಲಿ ನಿರ್ಮಿಸಿ, ಅದರ ಮೇಲ್ಭಾಗವನ್ನು ಮುಚ್ಚಲಾಗುತ್ತದೆ. ಎಚ್‌ಎಸ್‌ಆರ್ ಬಡಾವಣೆಯಲ್ಲಿ ಈ ಯೋಜನೆಯನ್ನು ನಾವು ಅನುಷ್ಠಾನಗೊಳಿಸಲಿದ್ದೇವೆ' ಎಂದರು.


ಎಚ್‌ಎಸ್‌ಆರ್ ಬಡಾವಣೆಯ 6ನೇ ಸೆಕ್ಟರ್‌ನಲ್ಲಿ ಬೇಸ್‌ಮೆಂಟ್‌ನಲ್ಲಿ ಮಳೆ ನೀರು ತುಂಬಿತ್ತು —ಪ್ರಜಾವಾಣಿ ಚಿತ್ರ: ಎಸ್‌. ಕೆ. ದಿನೇಶ್

ಸಾಮರ್ಥ್ಯ ವೃದ್ಧಿಸಿಕೊಂಡ ಅಗ್ನಿಶಾಮಕ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿ ದುರಂತಗಳನ್ನು ಸಮರ್ಥವಾಗಿ ಎದುರಿಸಲು, ಜನರ ಪ್ರಾಣ ರಕ್ಷಣೆ ಮಾಡಲು ಅಗ್ನಿಶಾಮಕ ಸೇವೆಯ ಪಡೆ ಇನ್ನಷ್ಟು ಆಧುನೀಕರಣಗೊಂಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಗುರುವಾರ ಆಯೋಜಿಸಿದ್ದ 90 ಮೀಟರ್ ಏಣಿ ಒಳಗೊಂಡ ಪ್ಲಾಟ್‌ಫಾರಂ ವಾಹನ ಹಸ್ತಾಂತರಿಸಿ, ಹಸಿರು ದೀಪಾವಳಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತದಲ್ಲಿ ಮುಂಬೈ ಹೊರತು ಪಡಿಸಿದರೆ ಬೆಂಗಳೂರಿನಲ್ಲಿ ಮಾತ್ರ ಇಷ್ಟು ದೊಡ್ಡ ಏಣಿ ಇರುವ ವಾಹನಗಳನ್ನು ಪರಿಚಯಿಸಲಾಗಿದೆ. ಜನರ ರಕ್ಷಣೆ ಹಾಗೂ ಇನ್ನಷ್ಟು ಎತ್ತರದ ಕಟ್ಟಡಗಳ ನಿರ್ಮಾಣ ಕಾರ್ಯ ಸಾಧ್ಯವಾಗಲಿದೆ. ಅಗ್ನಿ ದುರಂತಗಳನ್ನು ನಿಯಂತ್ರಿಸಲು ಉಪಯುಕ್ತವಾಗಿದೆ ಎಂದು ಹೇಳಿದರು.

ಎಸ್‌ಡಿಆರ್‌ಎಫ್ ಬಲವರ್ಧನೆ: ಪ್ರವಾಹ ಪರಿಸ್ಥಿತಿ, ಪ್ರಕೃತಿ ವಿಕೋಪ ನಿಭಾಯಿಸಲು ಎಸ್‌ಡಿಆರ್‌ಎಫ್ ಬಲಗೊಳಿಸಲಾಗುತ್ತಿದೆ. ತಂಡದಲ್ಲಿ ನೂರಕ್ಕಿಂತ ಹೆಚ್ಚು ಯೋಧರು ಇದ್ದಾರೆ. ನೂತನ ಸಲಕರಣೆಗಳಿಗೆ ಈಗಾಗಲೇ ₹ 40 ಕೋಟಿ ನೀಡಲಾಗಿದೆ. ರಕ್ಷಣಾ ಕಾರ್ಯಕ್ಕಾಗಿ ಮತ್ತೆ ಎರಡು ಕಂಪನಿಗಳನ್ನು ರಚಿಸಲಾಗಿದೆ. ಅಲ್ಲೂ ನಿವೃತ್ತ ಯೋಧರಿಗೆ ಸ್ಥಾನ ನೀಡಲಾಗಿದೆ ಎಂದು ವಿವರ ನೀಡಿದರು.

ಪರಿಸರಸ್ನೇಹಿ ದೀಪಾವಳಿ: ಪರಿಸರ ಸ್ನೇಹಿ ದೀಪಾವಳಿ ಆಚರಿಸಲು ಕೋರಲಾಗಿದೆ. ಶಬ್ದ ಹಾಗೂ ವಾಯುಮಾಲಿನ್ಯ ತಡೆಯಬೇಕಿದೆ. 125 ಡೆಸಿಬಲ್‌ಗಿಂತ ಕಡಿಮೆ ಇರುವ ಪಟಾಕಿಗಳನ್ನು ಬಳಸಬೇಕು ಎಂದರು.


ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 90 ಮೀಟರ್ ಏಣಿ ಒಳಗೊಂಡ ಪ್ಲಾಟ್‌ಫಾರಂ ವಾಹನ ಏರಿ ಜನರತ್ತ ಕೈಬೀಸಿದರು. ಗೃಹ ಸಚಿವ ಆರಗ ಜ್ಞಾನೇಂದ್ರ ಇದ್ದಾರೆ.

ಗುಂಡಿ ಮುಚ್ಚಲು ಸಮರೋಪಾದಿ ಕಾರ್ಯ

ನಗರದ ರಸ್ತೆಗಳಲ್ಲಿನ ಗುಂಡಿ ಮುಚ್ಚಲು ಸಮರೋಪದಿ ಕಾರ್ಯ ನಡೆಸಲು ಸೂಚಿಸಲಾಗಿದೆ. ಈಗಾಗಲೇ ಒಮ್ಮೆ ಗುಂಡಿಗಳನ್ನು ಮುಚ್ಚಲಾಗಿದೆ. ನಿರಂತರ ಮಳೆಯಿಂದ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಮಳೆ ಕಡಿಮೆಯಾದರೆ ಗುಣಮಟ್ಟದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಯೋಜನಾ ಬದ್ಧವಾಗಿ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು.

'ಗಂಧದಗುಡಿ'ಗೆ ತೆರಿಗೆ ವಿನಾಯಿತಿ ನೀಡಿ'

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಡಾಕ್ಯೂಫಿಲಂ 'ಗಂಧದಗುಡಿ'ಗೆ ತೆರಿಗೆ ವಿನಾಯಿತಿ ನೀಡಬೇಕು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ ನಿರ್ಮಾಣವಾಗಿರುವ ಈ ಚಿತ್ರವನ್ನು 'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ನಿರ್ದೇಶಿಸಿದ್ದಾರೆ. ಚಿತ್ರವು ಅ.28ರಂದು ತೆರೆಕಾಣುತ್ತಿದೆ.

'ಎಚ್‌ಎಎಲ್‌ನಿಂದ 70 ವಿಮಾನ ಖರೀದಿಸಲಿರುವ ವಾಯುಪಡೆ'

ನವದೆಹಲಿ: ಭಾರತೀಯ ವಾಯು ಪಡೆಯು ಬೆಂಗಳೂರಿನ ಎಚ್‌ಎಎಲ್ ಸಂಸ್ಥೆಯಿಂದ ₹ 6800 ಕೋಟಿ ಮೌಲ್ಯದ 70 ಎಚ್‌ಟಿಟಿ–40 ತರಬೇತಿ ವಿಮಾನಗಳನ್ನು ಖರೀದಿಸಲಿದೆ ಎಂದು ರಕ್ಷಣಾ ಸಚಿವಾಲಯ ಗುರುವಾರ ಪ್ರಕಟಿಸಿದೆ.

ಇಲ್ಲಿ ನಡೆಯುತ್ತಿರುವ 3 ದಿನಗಳ ರಕ್ಷಣಾ ಕ್ಷೇತ್ರದ ಪ್ರದರ್ಶನದ ಸಮಾರೋಪ ದಿನದಂದು ಈ ಪ್ರಕಟಣೆ ಹೊರಬಿದ್ದಿದೆ. ಸಚಿವಾಲಯ ಈ ಕುರಿತ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

ವಿ. ಸೋಮಣ್ಣ ಅಭಿನಂದನಾ ಗ್ರಂಥ 'ವಿಜಯ ಪಥ' ಲೋಕಾರ್ಪಣೆ

'ಸಹನೆಯೇ ರಾಜಕಾರಣಿಯ ಗೆಲುವಿನ ಮೆಟ್ಟಿಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಜೀವನದಲ್ಲಿ ಅವಮಾನಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಗುರಿ ತಲುಪಲು ಸಾಧ್ಯ. ರಾಜಕಾರಣ ಎನ್ನುವುದು 'ಕಾಯುವ ಆಟ'. ಇಲ್ಲಿ ನೀವು ಎಷ್ಟು ಬಲಾಢ್ಯರಾಗಿದ್ದೀರಿ ಎನ್ನುವುದು ಮುಖ್ಯವಲ್ಲ. ತಾಳ್ಮೆ ಮತ್ತು ಸಂಯಮ ಮುಖ್ಯವಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿ. ಸೋಮಣ್ಣ ಅಭಿನಂದನಾ ಸಮಿತಿ ಗುರುವಾರ ನಗರದಲ್ಲಿ ಹಮ್ಮಿಕೊಂಡಿದ್ದ ವಸತಿ ಸಚಿವ ವಿ. ಸೋಮಣ್ಣ ಅವರ ಅಭಿನಂದನಾ ಗ್ರಂಥ 'ವಿಜಯ ಪಥ' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತಾಳ್ಮೆ ಗುಣದಿಂದಲೇ ಸೋಮಣ್ಣ ಉನ್ನತ ಸ್ಥಾನಗಳನ್ನು ಪಡೆದಿದ್ದಾರೆ ಎಂದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಸೋಮಣ್ಣ ಅವರು ತಮಗೆ ವಹಿಸಿದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ ' ಎಂದರು.

'ಹಿಂದೆ ಪ್ರಕಟಿಸಿರುವ ಅಭಿನಂದನಾ ಗ್ರಂಥಕ್ಕಿಂತ ಇದು ವಿಭಿನ್ನವಾಗಿದೆ' ಎಂದು ವಿಮರ್ಶಕ ಬೈರಮಂಗಲ ರಾಮೇಗೌಡ ವಿವರಿಸಿದರು.


ನಗರದ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು 'ವಿಜಯ ಪಥ' ಕೃತಿ ಲೋಕಾರ್ಪಣೆ ಮಾಡಿದರು. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಿ.ಸೋಮಶೇಖರ, ವಿ. ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷೆ ಶೈಲಜಾ ಸೋಮಣ್ಣ, ಸಚಿವ ವಿ. ಸೋಮಣ್ಣ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು —ಪ್ರಜಾವಾಣಿ ಚಿತ್ರ

'ಅಧಿಕಾರಕ್ಕಾಗಿ ಅಶೋಕ ಜತೆ ಕಿತ್ತಾಡಿಲ್ಲ'

ಸಚಿವ ವಿ.ಸೋಮಣ್ಣ ಮಾತನಾಡಿ, 'ಹೊಟ್ಟೆ ಪಾಡಿಗೆ ನಾನು ಬೆಂಗಳೂರಿಗೆ ಬಂದವನು. ಜಾತಿ, ಕುಲ ನೋಡದೆ ಜನರು ನನಗೆ ಬೆಂಬಲ ನೀಡಿದ್ದಾರೆ. ಚಿಕ್ಕ ಕೊಠಡಿಯಲ್ಲಿ 13 ವರ್ಷ ವಾಸವಿದ್ದೆ. ನನ್ನ ತಾಯಿ ₹25 ಕೊಟ್ಟು ಬೆಂಗಳೂರಿಗೆ ಕಳುಹಿಸಿದ್ದರು. ಬಿ.ಎಲ್. ಶಂಕರ್ ಅವರೂ ಸಹಾಯ ಮಾಡಿದ್ದರು' ಎಂದು ನೆನಪಿಸಿಕೊಂಡರು.

'ಅನುದಾನದ ವಿಚಾರದಲ್ಲಿ ಸಚಿವ ಅಶೋಕ ಜಗಳವಾಡುತ್ತೇನೆ ಹೊರತು ಅಧಿಕಾರಕ್ಕೆ ಅಲ್ಲ' ಎಂದರು.

ಸಚಿವ ಆರ್.ಅಶೋಕ ಮಾತನಾಡಿ, 'ಜನನಾಯಕರಾಗಿರುವ ಸೋಮಣ್ಣ ಅವರು ವಸತಿ ಇಲಾಖೆ ಸಚಿವರಾಗಿ ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ನಾನು ಮೊದಲ ಚುನಾವಣೆಗೆ ನಿಂತಾಗ ನನ್ನ ಪರ ಕೆಲಸ ಮಾಡಿದ್ದಾರೆ. ನಾವೇನು ಅಧಿಕಾರಕ್ಕಾಗಿ ಕಿತ್ತಾಡುತ್ತಿಲ್ಲ. ಕೆಲಸಕ್ಕಾಗಿ ಕಿತ್ತಾಡುತ್ತಿದ್ದೇವೆ' ಎಂದು ಸಮರ್ಥಿಸಿಕೊಂಡರು.

ಹೈಕೋರ್ಟ್‌ಗೆ ಮಾಹಿತಿ ನೀಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವೃಷಭಾವತಿ ಜಲಾನಯನ 14 ಕಡೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಆರ್ ನಗರ ಹಾಗೂ ದಾಸರಹಳ್ಳಿ ವಲಯದ ವೃಷಭಾವತಿ ನದಿ ಜಲಾನಯನ ಪ್ರದೇಶದಲ್ಲಿ ಒಟ್ಟು 14 ಕಡೆ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

'ವೃಷಭಾವತಿ ನದಿ ಸಂರಕ್ಷಣೆಗೆ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ಬಿಬಿಎಂಪಿಯ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಛಾಯಾಚಿತ್ರಗಳ ಸಮೇತ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ವರದಿ ದಾಖಲಿಸಿಕೊಂಡ ಪೀಠ, ವಿಚಾರಣೆಯನ್ನು 3 ವಾರಕಾಲ ಮುಂದೂಡಿದೆ.

ವರದಿಯಲ್ಲೇನಿದೆ?: 'ಹೈಕೋರ್ಟ್ ನಿರ್ದೇಶನದಂತೆ ವೃಷಭಾವತಿ ನದಿ ಜಲಾಯನ ಪ್ರದೇಶದ ಸರ್ವೆ ನಡೆಸಲಾಗಿದೆ. 2022ರ ಸೆ. 3 ಹಾಗೂ 15ರಂದು ಪೊಲೀಸ್ ಭದ್ರತೆಯೊಂದಿಗೆ 14 ಒತ್ತುವರಿ ತೆರವುಗೊಳಿಸಲಾಗಿದೆ' ಎಂದು ಅನುಪಾಲನಾ ವರದಿಯಲ್ಲಿ ತಿಳಿಸಲಾಗಿದೆ.

'ಬಾಕಿ ಒತ್ತುವರಿಗಳ ತೆರವಿಗೆ ಭೂದಾಖಲೆಗಳ ಉಪನಿರ್ದೇಶಕರಿಗೆ (ಡಿಡಿಎಲ್‌ಆರ್) ಸೆಪ್ಟೆಂಬರ್ 13ರಂದು ಬಿಬಿಎಂಪಿ ಪತ್ರ ಬರೆದಿದ್ದು, ಒತ್ತುವರಿ ತೋರಿಸುವ ನಕ್ಷೆ ಒದಗಿಸುವಂತೆ ಕೋರಲಾಗಿದೆ. ಈ ಕೋರಿಕೆಯ ಅನುಸಾರ 2022ರ ಸೆ. 21ರಂದು ಉತ್ತರ, ದಕ್ಷಿಣ ತಾಲ್ಲೂಕುಗಳ ತಹಶೀಲ್ದಾರ್‌ಗೆ ಜಿಲ್ಲಾಧಿಕಾರಿ ಪತ್ರ ಬರೆದಿದ್ದಾರೆ. ಒತ್ತುವರಿ ತೆರವಿಗೆ ಅಗತ್ಯವಿರುವ ಸರ್ವೆ ಅಧಿಕಾರಿಗಳನ್ನು ನಿಯೋಜಿಸುವಂತೆ ಸೂಚಿಸಿದ್ದಾರೆ' ಎಂದು ವಿವರಿಸಲಾಗಿದೆ.

'ಸರ್ವೆ ಇಲಾಖೆ ಸಮೀಕ್ಷೆಯ ಪ್ರಕಾರ ವೃಷಭಾವತಿ ಉಪ ನದಿಗಳ ನಾಲೆಯ ಒಟ್ಟು 17 ಎಕರೆ 25 ಗುಂಟೆ ಹಾಗೂ ನದಿ ಜಲಾಯನ ಪ್ರದೇಶದಲ್ಲಿ 10 ಎಕರೆ 25 ಗುಂಟೆ ಜಾಗವನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿದ್ದಾರೆ. ಬಿಬಿಎಂಪಿ ಎಂಜಿನಿಯರ್‌ಗಳು ಸೆ. 30ರೊಳಗೆ ಈ ಒತ್ತುವರಿಯನ್ನು ತೆರವುಗೊಳಿಸಿ, ಅ.11ರೊಳಗೆ ಅನುಪಾಲನಾ ವರದಿ ಸಲ್ಲಿಸಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿತ್ತು.

ಒತ್ತುವರಿ ತೆರವಿಗೆ ಹೈಕೋರ್ಟ್ ತಾಕೀತು

'ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆಗಳ ಒತ್ತುವರಿ ತೆರವಿಗೆ ಸಂಬಂಧಿಸಿದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ರಾಜಕಾಲುವೆ, ಮಳೆ ನೀರು ಕಾಲುವೆಗೆ ಯಾವುದೇ ರೀತಿಯ ತಾಜ್ಯ ಸುರಿಯುವಿಕೆಯನ್ನು ತಡೆಗಟ್ಟಬೇಕು' ಎಂದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ತಾಕೀತು ಮಾಡಿದೆ.

'ಬೆಂಗಳೂರಿನ ಕೆರೆಗಳ ಸಂರಕ್ಷಣೆ ಹಾಗೂ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಒತ್ತುವರಿ ತೆರವಿಗೆ ಸಂಬಂಧಿಸಿದಂತೆ 2022ರ ಸೆಪ್ಟೆಂಬರ್ 12ರಂದು ಹೈಕೋರ್ಟ್ ಹೊರಡಿಸಿರುವ ಆದೇಶವನ್ನು ಎಲ್ಲ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪರಿಗಣಿಸಬೇಕು. ತಕ್ಷಣವೇ ಕ್ರಮ ಕೈಗೊಂಡು ವಸ್ತುಸ್ಥಿತಿ ವರದಿ ಸಲ್ಲಿಸಬೇಕು' ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಕಲಬುರ್ಗಿ ಹತ್ಯೆ ಪ್ರಕರಣ ವಿಚಾರಣೆ ನವೆಂಬರ್ 22ಕ್ಕೆ

ಧಾರವಾಡ: ಸಾಹಿತಿ ಡಾ. ಎಂ.ಎಂ. ಕಲಬುರ್ಗಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಎದುರು 6 ಆರೋಪಿಗಳನ್ನು ಗುರುವಾರ ಹಾಜರುಪಡಿಸಲಾಯಿತು.

ಆರೋಪಿಗಳಾದ ಅಮೋಲ್ ಕಾಳೆ, ಗಣೇಶ ಮಿಸ್ಕಿನ್, ಪ್ರವೀಣ ಚತುರ್, ವಾಸುದೇವ ಸೂರ್ಯವಂಶಿ, ಶರದ್ ಕಳಾಸ್ಕರ್, ಅಮಿತ್ ಬದ್ದಿ ಅವರನ್ನು ನ್ಯಾಯಾಧೀಶೆ ಶೋಭಾ ರಾಣಿ ಎದುರು ಹಾಜರುಪಡಿಸಿದರು. ಇಬ್ಬರು ಸಾಕ್ಷಿಗಳು ಆರೋಪಿಗಳನ್ನು ಗುರುತಿಸಿ ಸಾಕ್ಷ್ಯ ನುಡಿದರು. ಹೆಚ್ಚಿನ ವಿಚಾರಣೆ ಅಗತ್ಯ ಎಂದ ನ್ಯಾಯಾಲಯವು ವಿಚಾರಣೆಯನ್ನು ನ. 22ಕ್ಕೆ ಮುಂದೂಡಿತು.



ಮಠಕ್ಕೆ ಭೇಟಿ... ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠಕ್ಕೆ ಗುರುವಾರ ಭೇಟಿ ನೀಡಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು, ಎಐಸಿಸಿ ಕಾರ್ಯದರ್ಶಿ ಎನ್.ಎಸ್.ಬೋಸರಾಜ, ಕಾಂಗ್ರೆಸ್‌ನ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ಬಿ.ವಿ. ನಾಯಕ ಇದ್ದಾರೆ

ಬಂಧಿತ ಸಹ ಶಿಕ್ಷಕರು ಸಿಐಡಿ ಕಸ್ಟಡಿಗೆ

ಬೆಂಗಳೂರು: 2012–13 ಹಾಗೂ 2014–15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ 38 ಸಹ ಶಿಕ್ಷಕರನ್ನು ಹೆಚ್ಚಿನ ವಿಚಾರಣೆಗಾಗಿ ಸಿಐಡಿ ಕಸ್ಟಡಿಗೆ ಒಪ್ಪಿಸಲಾಗಿದೆ.

'ಸರ್ಕಾರಿ ಪ್ರೌಢಶಾಲೆಗಳ ಗ್ರೇಡ್–2 ಸಹ ಶಿಕ್ಷಕರ ಹುದ್ದೆಗಳಿಗಾಗಿ ನೇಮಕಾತಿ ನಡೆದಿತ್ತು. ₹ 5 ಲಕ್ಷದಿಂದ ₹ 10 ಲಕ್ಷದವರೆಗೆ ಹಣ ನೀಡಿದ್ದ ಆರೋಪಿಗಳು, ಅಕ್ರಮದಿಂದ ನೇಮಕಾತಿ ಆದೇಶ ಪತ್ರ ಪಡೆದು ಜಿಲ್ಲಾವಾರು ಶಾಲೆಗಳಲ್ಲಿ ಕೆಲಸ ಶುರು ಮಾಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಸಹ ಶಿಕ್ಷಕರ ಅಕ್ರಮ ನೇಮಕಾತಿ ಪತ್ತೆ ಮಾಡಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಪ್ರೌಢ) ವಿಧಾನಸೌಧ ಠಾಣೆಗೆ ಮೂರು ಪ್ರತ್ಯೇಕ ದೂರು ನೀಡಿದ್ದರು. ಮೂರು ಎಫ್‌ಐಆರ್‌ಗಳ ತನಿಖೆಯನ್ನು ಸಿಐಡಿ ಕೈಗೆತ್ತಿಕೊಂಡಿದೆ' ಎಂದು ಮೂಲಗಳು ತಿಳಿಸಿವೆ.

'ಅಕ್ರಮಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕ ಎಂ.ಪಿ. ಮಾದೇಗೌಡ, ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು' ಎಂದು ಹೇಳಿವೆ.

'38 ಸಹ ಶಿಕ್ಷಕರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಯಿತು. ಆರೋಪಿಗಳ ಪೈಕಿ 32 ಮಂದಿಯನ್ನು 6 ದಿನ ಹಾಗೂ 6 ಮಂದಿಯನ್ನು 2 ದಿನ ಸಿಐಡಿ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದರು' ಎಂದು ಮೂಲಗಳು ತಿಳಿಸಿವೆ.

100ಕ್ಕೂ ಹೆಚ್ಚು ಆರೋಪಿಗಳು: 'ಶಿಕ್ಷಣ ಇಲಾಖೆಯ ಅಧಿಕಾರಿಗಳು ಸೇರಿದಂತೆ ಹಲವರನ್ನು ಸಂಪರ್ಕಿಸಿದ್ದ ಆರೋಪಿತ ಸಹ ಶಿಕ್ಷಕರು, ಹಣ ನೀಡಿ ಬೆಂಗಳೂರಿನಲ್ಲಿ ನೇಮಕಾತಿ ಆದೇಶ ಪಡೆದಿದ್ದರು. ಅಕ್ರಮ ಎಸಗಿದ್ದ ಸಹ ಶಿಕ್ಷಕರ ಸಂಖ್ಯೆ 100ಕ್ಕೂ ಹೆಚ್ಚಿದ್ದು, ಎಲ್ಲರನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಇಬ್ಬರು ಗರ್ಭಿಣಿಯರು: 'ಆರೋಪಿತ ಇಬ್ಬರು ಸಹ ಶಿಕ್ಷಕಿಯರು, ಗರ್ಭಿಣಿಯರಾಗಿದ್ದಾರೆ. ಅವರ ಆರೋಗ್ಯದ ದೃಷ್ಟಿಯಿಂದ ಸದ್ಯಕ್ಕೆ ಬಂಧಿಸಿಲ್ಲ. ವಿಚಾರಣೆ ಮಾತ್ರ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ರಾಜರಾಜೇಶ್ವರಿನಗರ ವಲಯದಲ್ಲಿ ಮುಖ್ಯ ಆಯುಕ್ತರ ನಡಿಗೆ

ಚರಂಡಿ ಹೂಳು ತೆಗೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ಶೀಘ್ರವಾಗಿ ತೆರವು ಮಾಡಿ ಮಳೆ ನೀರು ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಗುರುವಾರ ಬೆಳಿಗ್ಗೆ 6.30ರಿಂದ 8.45ರ ವರೆಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಸುಮಾರು 4 ಕಿ.ಮೀ. ನಡಿಗೆಯಲ್ಲಿ ಸಂಚರಿಸಿ ಪಟ್ಟಣಗೆರೆ ಜಯಣ್ಣ ವೃತ್ತ, ನಿಮಿಷಾಂಬ ದೇವಿ ವೃತ್ತ, ಬಸವೇಶ್ವರ ವೃತ್ತ, ಕನಕದಾಸ ವೃತ್ತ, ಜವಾಹರ್‌ಲಾಲ್ ನೆಹರೂ ರಸ್ತೆಗಳ ಪರಿಶೀಲನೆ ನಡೆಸಿದರು.

ರಸ್ತೆಗಳ ಬದಿಯ ಚರಂಡಿಗಳಲ್ಲಿ ಬಹುತೇಕ ಹೂಳು ತುಂಬಿದೆ. ಇದರಿಂದ ಮಳೆ ನೀರು ರಸ್ತೆಯಲ್ಲೇ ಹರಿಯುತ್ತಿದೆ. ರಸ್ತೆ ಹಾಳಾಗಲು ಇದೂ ಕಾರಣವಾಗಿದೆ. ಹೀಗಾಗಿ ಚರಂಡಿಯಲ್ಲಿನ ಹೂಳನ್ನು ತೆಗೆಯಬೇಕು. ಈ ಬಗ್ಗೆ ಕೈಗೊಂಡ ಕ್ರಮದ ವರದಿ ಸಲ್ಲಿಸಬೇಕು ಎಂದು ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತ ನಾಗರಾಜ್ ಅವರಿಗೆ ಸೂಚಿಸಿದರು.



ರಾಜರಾಜೇಶ್ವರಿ ನಗರದಲ್ಲಿ ಗುರುವಾರ ಪರಿಶೀಲನೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಪಾದಚಾರಿ ರಸ್ತೆ ಮೇಲಿದ್ದ ಕಟ್ಟಡ ತ್ಯಾಜ್ಯ, ಸಾಮಗ್ರಿ ತೆರವಿಗೆ ಸೂಚಿಸಿದರು.

ಪಟ್ಟಣಗೆರೆ ಜಯಣ್ಣ ವೃತ್ತದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹಾಕಿದ್ದು, ಅವನ್ನು ತೆರವುಗೊಳಿಸಲು ಸೂಚಿಸಿದರು. ಐಡಿಯಲ್ ಹೋಮ್ಸ್ ಟೌನ್‌ಶಿಪ್ 17ನೇ ಮುಖ್ಯರಸ್ತೆ ಬದಿ ಹಾಕಿದ್ದ ಕಟ್ಟಡದ ಭಗ್ನಾವಶೇಷಗಳನ್ನು ಜೆಸಿಬಿ ಮೂಲಕ ಸೈಟ್‌ನೊಳಗೇ ಹಾಕಿಸಲಾಯಿತು. ಜೊತೆಗೆ ಸ್ಥಳದಲ್ಲಿದ್ದ ಸಣ್ಣ ಶೆಡ್ ಅನ್ನು ಕೆಡವಲಾಯಿತು.

ಬಿಇಎಂಎಲ್ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಪಾದಚಾರಿ ಮಾರ್ಗದ ಮೇಲೆ ನಿರ್ಮಿಸಿದ್ದ ಎರಡು ತಾತ್ಕಾಲಿಕ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು.

'ರಾಜರಾಜೇಶ್ವರಿ ನಗರದ ಮುಖ್ಯರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು. ಖಾಲಿ ಜಾಗದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳದೆ ಕಸದ ರಾಶಿ ಬಿದ್ದಿದೆ. ಪಾಲಿಕೆಯಿಂದ ಅದನ್ನು ಸ್ವಚ್ಛಗೊಳಿಸಿ, ಸಂಬಂಧಪಟ್ಟ ಮಾಲೀಕರಿಗೆ ದಂಡ ವಿಧಿಸಿ' ಎಂದು ಸೂಚಿಸಿದರು.

ಕಾರ್ಯಪ್ಪ ಉದ್ಯಾನ ನಿರ್ವಹಣೆಯಿಲ್ಲದೆ ವಾಯುವಿಹಾರಿಗಳಿಗೆ ಸಾಕಷ್ಟು ಸಮಸ್ಯೆಯಾಗಿದೆ ಎಂದು ಸ್ಥಳೀಯರು ದೂರಿದರು. ಸಮಸ್ಯೆ ಪರಿಹರಿಸಲು ತುಷಾರ್ ಗಿರಿನಾಥ್ ಸೂಚಿಸಿದರು.

ವಲಯ ಆಯುಕ್ತ ಡಾ. ರಾಮ್ ಪ್ರಸಾತ್ ಮನೋಹರ್, ಉಪ ಅರಣ್ಯ ಸಂರಕ್ಷಣಾ ಅಧಿಕಾರಿ ಸರಿನಾ ಸಿಕ್ಕಲಿಗರ್, ವಲಯ ಜಂಟಿ ಆಯುಕ್ತ ನಾಗರಾಜ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ವಲಯ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಉಪಸ್ಥಿತರಿದ್ದರು.

ಹಾಜಬ್ಬ ಕಾಲೇಜು ಕಟ್ಟಡಕ್ಕೆ ₹ 5ಲಕ್ಷ ದೇಣಿಗೆ

ಮಂಗಳೂರು: 'ಅಕ್ಷರ ಸಂತ' ಹರೇಕಳ ಹಾಜಬ್ಬ ಅವರ ಕನಸಿನ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಬೆಂಗಳೂರಿನ ಆರ್.ವಿ. ಶಿಕ್ಷಣ ಸಂಸ್ಥೆಯವರು ₹ 5 ಲಕ್ಷ ದೇಣಿಗೆ ನೀಡಿದರು.

ಇಲ್ಲಿನ ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಗುರುವಾರ ನಡೆದ ಸರಳ ಸಮಾರಂಭದಲ್ಲಿ ಚೆಕ್‌ನ್ನು ಹರೇಕಳ ಹಾಜಬ್ಬ ಅವರಿಗೆ ಹಸ್ತಾಂತರಿಸಲಾಯಿತು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಕುಮಾರ್ ಮಾತನಾಡಿ, 'ಹರೇಕಳ ಹಾಜಬ್ಬ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಕೊಡುಗೆ ಯಾವುದೇ ರೀತಿಯ ಹೋಲಿಕೆಗೆ ನಿಲುಕದ್ದಾಗಿದೆ' ಎಂದರು.

ಆರ್.ವಿ. ಶಿಕ್ಷಣ ಸಂಸ್ಥೆಯ ಡಾ.ಸಂತೋಷ, ಸಂಸ್ಥೆಯ ಹಣಕಾಸು ಅಧಿಕಾರಿ ಶ್ರೀಧರ್ ಮೊದಲಾದವರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಪೊಲೀಸ್ ಸಂಸ್ಮರಣ ದಿನಾಚರಣೆ: **ಅತಿಥಿಗಳು:** ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಆರಗ ಜ್ಞಾನೇಂದ್ರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಮೈಸೂರು ರಸ್ತೆಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ, ಕೇಂದ್ರ ಸ್ಥಾನದ ಉದ್ಯಾನ, ಬೆಳಿಗ್ಗೆ 8

ಭಾರತ ಕುಟುಂಬ ವ್ಯಾಪಾರ ಶೃಂಗ ಸಭೆ–2022: ಅತಿಥಿಗಳು: ವಿಜಯ್ ಸಂಕೇಶ್ವರ್, ಕೆ. ಉಲ್ಲಾಸ್ ಕಾಮತ್, ಆಯೋಜನೆ: ಫಿಕ್ಕಿ, ಸ್ಥಳ: ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 9.30

ನಾಡಪ್ರಭು ಕೆಂಪೇಗೌಡರ ಜಯಂತಿ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಅಧ್ಯಕ್ಷತೆ: ಬಿ.ಎನ್. ಬಚ್ಚೇಗೌಡ, ಅತಿಥಿಗಳು: ವಿ. ಸೋಮಣ್ಣ, ಶರತ್ ಬಚ್ಚೇಗೌಡ, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣ ಪರಿಷತ್, ಸ್ಥಳ: ಎನ್.ಜಿ.ಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.18

ನಾಡಪ್ರಭು ಕೆಂಪೇಗೌಡರ ಜಯಂತಿ, ನಗರದೇವತೆ ಅಣ್ಣಮ್ಮದೇವಿ ಉತ್ಸವ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಅತಿಥಿಗಳು: ಬಿ.ಸಿ. ನಾಗೇಶ್, ಸಿ.ಎನ್. ಬಾಲಕೃಷ್ಣ, ಅಧ್ಯಕ್ಷತೆ: ಎನ್. ಲಕ್ಷ್ಮೀನಾರಾಯಣ, ಆಯೋಜನೆ: ಸರ್ಕಾರಿ ಮುದ್ರಣಾಲಯ ನೌಕರರ ನಾಡ ಪ್ರಭು ಕೆಂಪೇಗೌಡ ಸೇವಾ ಸಮಿತಿ, ಸ್ಥಳ: ಸರ್ಕಾರಿ ಕೇಂದ್ರ ಮುದ್ರಣಾಲಯ, ಆರ್.ವಿ. ಕಾಲೇಜ್, ಮೈಸೂರು ರಸ್ತೆ, ಬೆಳಿಗ್ಗೆ 10

ಮಾರಾಟಗಾರರ ಅಭಿವೃದ್ಧಿ ಕಾರ್ಯಕ್ರಮ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ: ಉದ್ಘಾಟನೆ: ಎಂ.ಟಿ.ಬಿ. ನಾಗರಾಜ್, ಅತಿಥಿಗಳು: ಪಂಕಜ್ ಕುಮಾರ್ ಪಾಂಡೆ, ಸತ್ಯಭಾಮ ಸಿ., ಜಿ.ಆರ್. ಅಕಾದಾಸ್, ಅಧ್ಯಕ್ಷತೆ: ಕೆ.ಎನ್. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಕಾಸಿಯಾ ಉದ್ಯೋಗ ಭವನ, ವಿಜಯನಗರ, ಬೆಳಿಗ್ಗೆ 10.30

ನಾಡಿನಾದ್ಯಂತ ಪವಿತ್ರ ಮೃತ್ತಿಕೆ ಸಂಗ್ರಹ ಅಭಿಯಾನಕ್ಕೆ ಚಾಲನೆ: ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ, ವಿ. ಸೋಮಣ್ಣ, ಬಿ.ಎ. ಬಸವರಾಜು, ಎಸ್.ಟಿ. ಸೋಮಶೇಖರ್, ಎಂ.ಮುನಿರತ್ನ, ಕೆ. ಗೋಪಾಲಯ್ಯ, ಆಯೋಜನೆ: ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 11

ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪ್ರದಾನ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಶಾಂತಿನಾಥ ದಿಬ್ಬದ, ಕೆ.ಎನ್. ಚನ್ನೇಗೌಡ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 4.30

ಕೆ.ವೈ ನಾರಾಯಣಸ್ವಾಮಿ ಅವರ 'ಅನಭಿಜ್ಞ ಶಾಕುಂತಲ' ನಾಟಕ ಪ್ರದರ್ಶನ: ನಿರ್ದೇಶನ: ಪ್ರಕಾಶ್ ವಿ. ಶೆಟ್ಟಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

'ಸಮನ್ವಯದ ಎಚ್ಚರ ಅಚ್ಚುಮೆಚ್ಚು'



...ವಿಚಿತ್ರ ಅನಿಸಬಹುದು. ನಾನು 'ಪ್ರಜಾವಾಣಿ' ಪತ್ರಿಕೆ ತೆರೆದಾಗ ಮೊದಲು ನೋಡುವುದು 'ಗುಂಡಣ್ಣ'ನ ವ್ಯಂಗ್ಯಚಿತ್ರ ಮಾಲೆ. ಉಳಿದದ್ದು ಆಮೇಲೆ!. ನಿರ್ಲಿಪ್ತ ನೀತಿಯನ್ನು ಅನುಸರಿಸಿ, ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡು ಪ್ರಭುತ್ವವನ್ನು, ಪಕ್ಷಗಳನ್ನು ದಾಖಲೆಸಹಿತ ನಿರುದ್ವಿಗ್ನ ಭಾಷೆಯಲ್ಲಿ ಟೀಕೆಗೆ ಒಳಪಡಿಸುವ 'ಪ್ರಜಾವಾಣಿ' ನನಗೆ ಇಷ್ಟ.


ಸ್ಪರ್ಧೆಗೆ ಬಿದ್ದಂತೆ ಆಳುವವರನ್ನು ಹೊಗಳುವ ರಾಶಿ ಪತ್ರಿಕೆಗಳ ನಡುವೆ ಸತ್ಯಕ್ಕೆ ಆದಷ್ಟೂ ಸಮೀಪವಾಗಿರಲು ಯತ್ನಿಸುವ 'ಪ್ರಜಾವಾಣಿ' ಕನ್ನಡ ವೈಚಾರಿಕ ಪ್ರಜ್ಞೆಯ ಪ್ರತಿಬಿಂಬ. ಎಡಬಲದ ಅತಿರೇಕಗಳ ನಡುವೆ ಅದು ಕಾಯ್ದುಕೊಂಡಿರುವ ಸಮನ್ವಯದ ಎಚ್ಚರ ನನಗೆ ಅಚ್ಚುಮೆಚ್ಚು.

80ರ ದಶಕ ಅಂದರೆ ಎಂ.ಬಿ. ಸಿಂಗ್ ಅವರ ಕಾಲದಿಂದ, ಈವರೆಗೆ ನನ್ನ 30ಕ್ಕೂ ಹೆಚ್ಚು ಸಣ್ಣಕತೆಗಳು ಇಲ್ಲಿ ಪ್ರಕಟಗೊಂಡಿವೆ. ಒಂದು ವರ್ಷ ಬರೆದ ನನ್ನ 'ರೆಕ್ಕೆ ಬೇರು' ಅಂಕಣ ನನಗೆ ತುಂಬು ಧನ್ಯತೆ ಕೊಟ್ಟಿದೆ. ಇಲ್ಲಿ ದಕ್ಕಿದ ಪ್ರಬುದ್ಧ ಓದುಗರು ಅಪಾರ. 'ಪ್ರಜಾವಾಣಿ'ಯನ್ನು ನಾನು ನಿಯತವಾಗಿ ಓದುವುದು ಮಾತ್ರವಲ್ಲ; ನನ್ನ ಸಿನಿಮಾ ಪಾತ್ರಗಳಿಂದಲೂ ಓದಿಸಿದ್ದೇನೆ! ಮೌಲ್ಯಗೆಡದೆ ಮುಕ್ಕಾಲು ಶತಮಾನ ಮುಗಿಸಿರುವ ಪತ್ರಿಕೆಗೆ ಶುಭಾಶಯಗಳು!

ನಾಗತಿಹಳ್ಳಿ ಚಂದ್ರಶೇಖರ
ಸಾಹಿತಿ, ಚಿತ್ರನಿರ್ದೇಶಕ

'ಗುಣಗೌರವವೇ ವಿಭಿನ್ನ'

ಬೆಳಿಗ್ಗೆ ಎದ್ದು ಯಾರ ಮುಖ ನೋಡುವ ಮುನ್ನ, ಯಾರ ಬಳಿ ಮಾತಾಡುವ ಮುನ್ನ, 'ಪ್ರಜಾವಾಣಿ' ನೋಡಿ, ಅದರ ಜೊತೆ ಓದಿನ ಸಂವಾದ ಮಾಡದಿದ್ದರೆ ದಿನದ ಪ್ರಾರಂಭವೇ ಸರಿ ಅನ್ನಿಸುವುದಿಲ್ಲ. ಇದು 'ಪ್ರಜಾವಾಣಿ'ಯ ಲಾಗಾಯ್ತಿನ ಓದುಗ ಪರಂಪರೆಯ ದಿನಚರಿ. ಪತ್ರಿಕೆ ಅಂದರೆ ಪ್ರಜಾವಾಣಿ, ಪ್ರಜಾವಾಣಿ ಅಂದರೆ ಕನ್ನಡ ದಿನಪತ್ರಿಕೆ ಎಂಬ ಅವಿನಾ ಸಂಬಂಧ. ಇದಕ್ಕೆ ಕಾರಣ ಪ್ರಜಾಪ್ರಭುತ್ವದ ಎಂಥ ಎಡವಟ್ಟುಗಳ ಸಂದರ್ಭದಲ್ಲೂ ಪತ್ರಿಕಾಧರ್ಮಕ್ಕೆ ಅಷ್ಟಾಗಿ ಎರವಾಗಿ ನಡೆದ ಪತ್ರಿಕೆಯಲ್ಲ. 'ಪ್ರಜಾವಾಣಿ' ಸುದ್ದಿಯ ಗುಣಗೌರವ ಅಂಥದ್ದು. 'ಸಾಪ್ತಾಹಿಕ ಪುರವಣಿ' ಮೂಲಕ ಸಾಹಿತ್ಯ, ಸಂಸ್ಕೃತಿ, ಚಿಂತನೆ ಬೆಳೆಸಿತು. ಸಾಹಿತ್ಯ ಪಂಥಗಳನ್ನು ಪೋಷಿಸಿತು.



ಅಭಿರುಚಿ ರೂಪಿಸಿತು. ಅಂಕಣ ಬರಹಗಳ ಮುಖೇನ ರಾಜಕೀಯ ಪ್ರಜ್ಞೆ ಧಾರ್ಮಿಕ ವಿವೇಚನೆ ರೂಪಿಸಿತು. ತನ್ನ ಪ್ರೇರಣೆ, ಪ್ರಭಾವಗಳಿಂದ ನನ್ನಂಥ ಕೋಟ್ಯಂತರ ಮನಸ್ಸುಗಳನ್ನು ರೂಪಿಸಿದ್ದು ಪ್ರಜಾವಾಣಿ. ಇಂದಿಗೂ ಅದು ನನ್ನ ಪತ್ರಿಕೆ, ನಮ್ಮ ಪತ್ರಿಕೆ. ಯಾವ ಪತ್ರಿಕೆ ಓದಿದರೂ 'ಪ್ರಜಾವಾಣಿ' ಓದದಿದ್ದರೆ ಅದು ಓದಿನ ಅಪೂರ್ಣ. ಪ್ರಜಾವಾಣಿಯ ಅಮೃತ ಮಹೋತ್ಸವ. ಅದು, ಅದರ ಓದುಗರ ಅಮೃತ ಮಹೋತ್ಸವ. ಅಭಿವಂದನೆಗಳು.

ಎಸ್.ಜಿ.ಸಿದ್ದರಾಮಯ್ಯ
ಸಾಹಿತಿ, ಬೆಂಗಳೂರು

'ಮನೆಯ ಪತ್ರಿಕೆ'

ಸುಮಾರು 35 ವರ್ಷಗಳ ಹಿಂದೆ ಹಳಿಯಾಳದ ವಾಸ್ತವ್ಯದಲ್ಲಿರುವಾಗ 'ಪ್ರಜಾವಾಣಿ'ಯನ್ನು ಮೊದಲ ಬಾರಿಗೆ ಸ್ವಂತಕ್ಕೆ ಕೊಂಡು ಓದಲು ಆರಂಭಿಸಿದೆವು.



ಅದಕ್ಕಿಂತ ಮೊದಲು ನಾವಿದ್ದ ಗಜಾಕೋಶ ಚಾಳಿನ ಎಂಟು ಮನೆಗಳವರೂ ತಿಂಗಳ ದುಡ್ಡು ಹಂಚಿಕೊಂಡು, ಬೇರೊಂದು ಪತ್ರಿಕೆಯನ್ನು ತರಿಸಿ ಓದಿ ಆನಂದಿಸುತ್ತಿದ್ದ ದಿನಗಳವು. ನಮ್ಮ ಮನೆಯ ಪಕ್ಕದಲ್ಲೇ ಒಂದು ಸಾರ್ವಜನಿಕ ಗ್ರಂಥಾಲಯವಿದ್ದ ಕಾರಣ ಅಲ್ಲಿರುವ ಎಲ್ಲ ಪತ್ರಿಕೆಗಳನ್ನೂ ತಿರುವಿ ಹಾಕಿ ಬರುವ ಅಭ್ಯಾಸವೂ ಇತ್ತು. ಹಲವು ಸಾಹಿತ್ಯಕ ಕೃತಿಗಳ ಓದಿನ ಹವ್ಯಾಸವೂ ಆಗಲೇ ಅಂಟಿಕೊಂಡಿದ್ದರಿಂದ, ಅದು ಒಳ್ಳೆಯ ಭಾಷೆಯ ಹಿಡಿತವನ್ನು ಕಟ್ಟಿ ಕೊಡುವ ಬರಹಗಳ ಕುರಿತೂ ತಕ್ಕಮಟ್ಟಿನ ಜ್ಞಾನವನ್ನು ನೀಡಿತ್ತು ಅನಿಸುತ್ತದೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾಗುವ ಬರಹಗಳು ಅಂದರೆ ಕೃಷಿ, ಸಾವಯವ, ಸಿನಿಮಾ ಬರಹಗಳೇ ಆಗಿರಬಹುದು. ಕಾವ್ಯಾತ್ಮಕ ಭಾಷೆ ಮೈಗೂಡಿಸಿಕೊಂಡಿರುವ ಸೋಜಿಗವನ್ನು ನಾವು ದಂಪತಿ ಗಮನಿಸಿದ್ದೇ ಕಾರಣವಾಗಿ ಅಂದೇ ಪ್ರಜಾವಾಣಿ ನಮ್ಮ ಮನೆಯ ಪತ್ರಿಕೆಯಾಗಿ ಮನಸ್ಸನ್ನೂ ಆವರಿಸಿಕೊಂಡಿತು. ಬರವಣಿಗೆ ಆರಂಭಿಸಿದ ಮೇಲಂತೂ ಇಲ್ಲಿ ಚಿಕ್ಕಬರಹ ಪ್ರಕಟವಾಗುವುದೇ ದೊಡ್ಡ ಪ್ರತಿಷ್ಠೆ, ಗೌರವದ ವಿಷಯವಾಗಿ ನಮ್ಮೆಲ್ಲರ ಸೂಕ್ಷ್ಮ ಸಾಮಾಜಿಕ ಚಿಂತನೆಗೆ ಸಾಣೆ ಹಿಡಿಯುತ್ತ ಬಂದಿರುವುದು ಒಂದು ಅಭಿಮಾನದ ಸಂಗತಿ.

ಸುನಂದಾ ಕಡಮೆ, ಕತೆಗಾರ್ತಿ


'ಬಡ ವಿದ್ಯಾರ್ಥಿಗಳ ಬಾಳಿನ ಬೆಳಕು'

ನಿತ್ಯ 'ಪ್ರಜಾವಾಣಿ' ದಿನಪತ್ರಿಕೆ ಓದಲಿಲ್ಲ, ಅಂದರೆ ನೆಮ್ಮದಿಯೇ ಇಲ್ಲ. ಪ್ರಜಾವಾಣಿಯಲ್ಲಿ ಪ್ರಕಟವಾಗುವ ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ವಿಷಯ ಸಂಬಂಧಿಸಿದ ಘಟನೆಗಳು, ಕ್ರೀಡೆಗಳ ಸಂಬಂಧಿಸಿದ ಮಾಹಿತಿ ಹಾಗೂ ಅಂಕಣ ಬರಹ, ಸಂಪಾದಕೀಯ, ಒಳನೋಟ, ವಾಚಕರವಾಣಿ, ಓದಿನ ಜೊತೆಗೆ ಜ್ಞಾನವು ಹೆಚ್ಚಾಗುತ್ತಾ ಸ್ಪರ್ಧಾತ್ಮಕ ಯುಗದಲ್ಲಿ ಪರೀಕ್ಷೆಯಲ್ಲಿ ಯಶಸ್ಸುಗಳಿಸಿ, ತಮ್ಮ ಜೀವನವನ್ನು ರೂಪಿಸಿಕೊಂಡ ವಿದ್ಯಾರ್ಥಿಗಳ ಬಾಳಿನ ಬೆಳಕು ಎಂದರೆ ತಪ್ಪಾಗದು.

ಶಿಕ್ಷಣ ಪುರವಣಿ, ಸ್ಪರ್ಧಾವಾಣಿ ವಿದ್ಯಾರ್ಥಿಗಳ ಆಶಾಕಿರಣವಾಗಿವೆ. ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿ, ಪರಿಣಾಮ ಬೀರಿ ಫಲಶ್ರುತಿ ನೀಡಿದ ಎಷ್ಟೊಂದು ಉದಾಹರಣೆಗಳಿವೆ. ಭಾನುವಾರದ ಒಳನೋಟ ವರದಿಗೆ ನೀಡಿದ್ದ ಪ್ರತಿಕ್ರಿಯೆ ಪ್ರಕಟಗೊಂಡು ಸಂತೋಷ ತಂದಿತ್ತು. ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಪವಿತ್ರ ಕಾರ್ಯ ಮಾಡುತ್ತಾ ಮುನ್ನಡೆದಿದೆ. ಪ್ರಜಾವಾಣಿಗೆ 75ನೇ ವರ್ಷದ ಸಂಭ್ರಮಾಚರಣೆ ಶುಭಾಶಯಗಳು. ಸದಾ ಕಾಲ ಬಡ ವಿದ್ಯಾರ್ಥಿಗಳ ಬಾಳಿನ ಬೆಳಕಾಗಿ ಮುನ್ನಡೆಯುತ್ತಿರಲಿ.

ಮಲ್ಲಿಕಾರ್ಜುನ, ಕೊಪ್ಪಳ.

'ಓದುವ ಹಸಿವಿಗೆ ಪ್ರಜಾವಾಣಿ'



ಪ್ರಸ್ತುತ ಸಂದರ್ಭದಲ್ಲಿ ಬಹುತೇಕ ಮಾಧ್ಯಮಗಳು ಕಾರ್ಪೋರೇಟ್ ಮತ್ತು ಆಳುವ ವರ್ಗದ ಹಿತಾಸಕ್ತಿಗೆ ಪೂರಕವಾಗಿರುವಾಗ 'ಪ್ರಜಾವಾಣಿ' ಓದುಗ ಕೇಂದ್ರಿತವಾಗಿರುವುದು ಹೆಮ್ಮೆಯೆನಿಸುತ್ತದೆ. ಪುಟ ತಿರುವಿ ಹಾಕುವ ಪತ್ರಿಕೆಯಾಗದೇ ಓದುಗರನ್ನು ಗಂಟೆಗಟ್ಟಲೆ ಹಿಡಿದಿಟ್ಟುಕೊಳ್ಳುವ ವೈವಿಧ್ಯ, ವೈಚಾರಿಕ ಸುದ್ದಿಗಳು, ಅಂಕಣಗಳು 'ಪ್ರಜಾವಾಣಿ'ಯಲ್ಲಿ ಇರುತ್ತವೆ. ಸುದ್ದಿ ಪ್ರಕಟಿಸುವಾಗ ಜನಪ್ರಿಯತೆಗಿಂತ ಜನಪರತೆಗೆ ಆದ್ಯತೆ ಕೊಡುವುದು, ಸಾಮಾಜಿಕ ನೆಮ್ಮದಿಯನ್ನೇ ಗುರಿಯಾಗಿಟ್ಟುಕೊಳ್ಳುವುದು ಇಂದಿನ ಪತ್ರಿಕೋದ್ಯಮದ ದೊಡ್ಡ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ 'ಪ್ರಜಾವಾಣಿ'ಗೆ ಅಮೃತ ಮಹೋತ್ಸವದ ಶುಭಾಶಯಗಳು. ಪತ್ರಿಕೆ ಯಶಸ್ವಿಯಾಗಿ ಶತಮಾನದೆಡೆಗೆ ಸಾಗಲಿ.

ಡಾ.ಸಿದ್ದನಗೌಡ ಪಾಟೀಲ, ಸಂಪಾದಕರು, 'ಹೊಸತು'

ದಲಿತ ಹಕ್ಕು ಎಂದೂ ಬಳಸದ ಖರ್ಗೆ– ಬಿಕೆಸಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ದಲಿತ ಎಂಬ ಕಾರಣಕ್ಕಾಗಿ ಕಾಂಗ್ರೆಸ್‌ನಲ್ಲಿ ಯಾವುದೇ ಹುದ್ದೆಯನ್ನು ಮಲ್ಲಿಕಾರ್ಜುನ ಖರ್ಗೆ ಅವರು ಕೇಳಿ ಪಡೆದಿಲ್ಲ. ದಿನಗೂಲಿ ಮಾಡುವವನ ಮಗನಾಗಿ ಹುಟ್ಟಿದ್ದ ಅವರು, ಕಷ್ಟಪಟ್ಟು ಪಕ್ಷದಲ್ಲಿ ಮುಂದೆ ಬಂದಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಬಣ್ಣಿಸಿದ್ದಾರೆ.

ಎಐಸಿಸಿ ಅಧ್ಯಕ್ಷರಾಗಿ ಖರ್ಗೆ ಚುನಾಯಿತರಾಗಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ಎಸ್.ಎಂ. ಕೃಷ್ಣ ಸಂಪುಟದಲ್ಲಿ (1999-2004) ಅವರೊಂದಿಗೆ ನಿಕಟವಾಗಿ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು' ಎಂದು ನೆನಪಿಸಿಕೊಂಡಿದ್ದಾರೆ.

'ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು, ವೀರಪ್ಪನ್‌ನಿಂದ ಡಾ. ರಾಜ್‌ಕುಮಾರ್ ಅಪಹರಣ ಆದಾಗ ನನಗೆ ಹೆಚ್ಚಿನ ಜವಾಬ್ದಾರಿ ನೀಡಿದ್ದರು. ಆ ಜವಾಬ್ದಾರಿಯನ್ನು ನಿಭಾಯಿಸಲು, ಆಗ ಗೃಹ ಸಚಿವರಾಗಿದ್ದ ಖರ್ಗೆಯವರು ನನಗೆ ಸಹಕರಿಸಿದ ರೀತಿಯನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಆಡಳಿತದ ವಿಷಯಗಳಲ್ಲಿ ಅವರ ವಸ್ತುನಿಷ್ಠತೆಯನ್ನು ಮೆಚ್ಚಲೇಬೇಕು. ಸಚಿವ ಸಂಪುಟ ಸಭೆಯ ಮುಂದೆ ಬರುವ ಎಲ್ಲ ವಿಷಯಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುತ್ತಿದ್ದ ಅವರು, ಬಹುಶಃ ಸಂಪುಟದಲ್ಲಿ ಅತ್ಯುತ್ತಮ ಸಚಿವರಾಗಿದ್ದರು' ಎಂದೂ ಹೇಳಿದ್ದಾರೆ.

'ಪ್ರಜಾಸತ್ತಾತ್ಮಕ ತತ್ವಗಳನ್ನು ಅನುಸರಿಸಿ ಮಲ್ಲಿಕಾರ್ಜುನ ಖರ್ಗೆ, ತಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ಕೆಲಸ ಮಾಡುತ್ತಾರೆ. ಖರ್ಗೆ ಅವರ ಜೊತೆಯಲ್ಲಿ ಕೆಲಸ ಮಾಡುವುದಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮತ್ತೊಬ್ಬ ಅಭ್ಯರ್ಥಿ ಶಶಿ ತರೂರ್ ಭರವಸೆ ನೀಡಿದ್ದಾರೆ' ಎಂದೂ ಚಂದ್ರಶೇಖರ್ ಹೇಳಿದ್ದಾರೆ.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ಘಟಿಕೋತ್ಸವ

'ಶಿಕ್ಷಣದ ಜತೆಗೆ ಕೌಶಲ ಅತ್ಯವಶ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಿಕೆ ಜತೆಗೆ ಕೌಶಲಗಳನ್ನು ಬೆಳೆಸಿಕೊಂಡರೆ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ' ಎಂದು ಬೆಂಗಳೂರು ಐಐಎಂ ನಿರ್ದೇಶಕ ಡಾ.ರಿಷಿಕೇಶ್ ಟಿ.ಕೃಷ್ಣ ಸಲಹೆ ನೀಡಿದರು.

ಗುರುವಾರ ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ 14ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಪದವಿ ಪಡೆದ ಮಾತ್ರಕ್ಕೆ ವಿದ್ಯಾರ್ಥಿಗಳ ಜವಾಬ್ದಾರಿ ಮುಗಿಯುವುದಿಲ್ಲ. ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ. ವಿದ್ಯಾರ್ಥಿಗಳು ಬಹುಕೌಶಲಗಳಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಮಾಡುವುದು ಉತ್ತಮ. ಉದ್ಯೋಗಕ್ಕೆ ಸೇರಿದ ಮೇಲೆಯೂ ನಿರಂತರವಾಗಿ ಹೊಸ ವಿಷಯಗಳನ್ನು ಕಲಿಯಬೇಕು' ಎಂದು ಸಲಹೆ ನೀಡಿದರು.

'ಉತ್ತಮ ಕೌಶಲಗಳನ್ನು ಬೆಳೆಸಿಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು. ಐಐಎಂನಲ್ಲಿ ಈ ರೀತಿ ಹಲವು ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ನಮ್ಮಲ್ಲಿ ಉದ್ಯೋಗಾವಕಾಶಗಳಿಗೆ ಕೊರತೆಯಿಲ್ಲ. ಪ್ರತಿಭೆ ಇದ್ದರೆ ಸಾಕಷ್ಟು ಅವಕಾಶಗಳು ಅರಸಿ ಬರುತ್ತವೆ' ಎಂದರು.



ಎಂ.ಎಸ್. ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು ಪದಕಗಳೊಂದಿಗೆ ಸಂಭ್ರಮಿಸಿದರು

'ಭಾರತದಲ್ಲಿ ಇಂದಿಗೂ ಬಡತನ, ನಿರುದ್ಯೋಗ ಸಮಸ್ಯೆಗಳು ಜ್ವಲಂತವಾಗಿವೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಸಮಸ್ಯೆಗಳು ಇಂದಿಗೂ ಮುಂದುವರಿದಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿ ಯುವಜನತೆಯ ಮೇಲಿದೆ' ಎಂದು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಮಾತನಾಡಿ, 'ವಿದ್ಯಾರ್ಥಿಗಳು ಸಮಾಜಕ್ಕೆ ಕೊಡುಗೆ ನೀಡುವ ಕಾರ್ಯಗಳನ್ನು ಮಾಡಬೇಕು. ಎಂದಿಗೂ ತಾಳ್ಮೆ, ಸಹನೆ ಕಳೆದುಕೊಳ್ಳಬಾರದು' ಎಂದು ಕಿವಿಮಾತು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆ ಅಧ್ಯಕ್ಷ ಜಯರಾಂ, ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್. ರಾಮ್‌ಪ್ರಸಾದ್, ಆರ್‌ಐಟಿ ಪ್ರಾಂಶುಪಾಲ ಡಾ.ಎನ್.ಆರ್.ವಿ. ನಾಯ್ಡು, ವಿ.ವಿ. ಹಳೇ ವಿದ್ಯಾರ್ಥಿ ತಲ್ಲಂ ವೆಂಕಟೇಶ್ ಇದ್ದರು. ಸಮಾರಂಭದಲ್ಲಿ ಒಟ್ಟು 1633 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಜ.6ರಿಂದ ಪಾದಯಾತ್ರೆ: ಪ್ರಣವಾನಂದ ಸ್ವಾಮೀಜಿ

ಬೀದರ್: 'ಈಡಿಗ ಸಮುದಾಯವನ್ನು ಪ್ರವರ್ಗ 1ಕ್ಕೆ ಸೇರಿಸುವಂತೆ ಒತ್ತಾಯಿಸಿ ಜನವರಿ 6ರಂದು ಕುದ್ರೋಳಿಯಿಂದ ಗೋಕರ್ಣ ಮಾರ್ಗವಾಗಿ ಬೆಂಗಳೂರು ವರೆಗೆ 35 ದಿನಗಳ ಕಾಲ 658 ಕಿ.ಮೀ ಪಾದಯಾತ್ರೆ ಚಾಲನೆ ನೀಡಲಾಗುವುದು' ಎಂದು ಕಲಬುರಗಿಯ ಚಿತ್ತಾಪುರದ ನಾರಾಯಣ ಗುರುಗಳ ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಯಾತ್ರೆಯ ಕೊನೆಯ ದಿನ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ನಡೆಸಿ, ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು' ಎಂದರು

'ಅತ್ಯಂತಕಡಿಮೆ ಜನಸಂಖ್ಯೆ ಹೊಂದಿರುವ ಮೇಲ್ವರ್ಗದರೇ ಮೀಸಲಾತಿಯ ಶೇ 10ರಷ್ಟು ಲಾಭ ಪಡೆದಿದ್ದಾರೆ. ಹಿಂದುಳಿದ ಜಾತಿಗಳನ್ನು ಹತ್ತಿಕ್ಕುತ್ತಿರುವ ಕಾರಣ ಬೀದಿಗಿಳಿದು ಹೋರಾಟ ನಡೆಸುವುದು ಅನಿವಾರ್ಯವಾಗಿದೆ' ಎಂದು ಹೇಳಿದರು.

ಶಮಂತಾ ಡಿ.ಎಸ್. ಅವರ 'ಹಿಮದಗ್ನಿ' ಕೃತಿ ಬಿಡುಗಡೆ ಕಾರ್ಯಕ್ರಮ

ಕಾಶ್ಮೀರ ಶಾಪಗ್ರಸ್ತ ದೇವತೆ: ಎಂ.ಎಸ್. ಆಶಾದೇವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂಲೋಕದ ಸ್ವರ್ಗವೆಂದು ಕರೆಸಿಕೊಳ್ಳುವ ಕಾಶ್ಮೀರವು ಶಾಪಗ್ರಸ್ತ ದೇವತೆಯಾಗಿದೆ. ಅಲ್ಲಿನ ಜನಸಾಮಾನ್ಯರಲ್ಲಿ ಹಿಂದೂ–ಮುಸ್ಲಿಂ ಎಂಬ ಕಂದಕ ಸೃಷ್ಟಿಸಿ, ದ್ವೇಷ ಬಿತ್ತುವ ಕೆಲಸವನ್ನು ಜನನಾಯಕರು ಮಾಡುತ್ತಿದ್ದಾರೆ' ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಬೇಸರ ವ್ಯಕ್ತಪಡಿಸಿದರು.

ಸಾರಥಿ ಸಂಸ್ಥೆ ನಗರದಲ್ಲಿ ಗುರುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಶಮಂತಾ ಡಿ.ಎಸ್. ಅವರ 'ಹಿಮದಗ್ನಿ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

'ಜೀವನದಲ್ಲಿ ಒಮ್ಮೆಯಾದರೂ ಕಾಶ್ಮೀರ ನೋಡಬೇಕು ಅನಿಸುತ್ತದೆ. ಆದರೆ, ಅಲ್ಲಿಗೆ ಹೋಗಲು ಭಯವೂ ಆಗುತ್ತದೆ. ಕಾಶ್ಮೀರದ ಅಸೀಮ ಸೌಂದರ್ಯಕ್ಕೂ ಅದರ ಸುಡು ವಾಸ್ತವಕ್ಕೂ ಇರುವ ವಿಷಯ ಸಂಬಂಧ ನಮ್ಮಲ್ಲಿ ವಿಷಾದ ಹುಟ್ಟಿಸುತ್ತದೆ. ಕಾಶ್ಮೀರವನ್ನು ಕೇಂದ್ರವಾಗಿರಿಸಿಕೊಂಡು ಚಿತ್ರಿಸಲಾದ 'ಕಾಶ್ಮೀರ್ ಫೈಲ್ಸ್' ಸಿನಿಮಾವು ಕಲೆಯ ಶೋಷಣೆ ಮತ್ತು ಅಪವ್ಯಾಖ್ಯಾನ ಅನಿಸುತ್ತದೆ. ದುಷ್ಟಶಕ್ತಿಗಳು ಅಲ್ಲಿನ ಎಲ್ಲ ಸಾಧ್ಯತೆಗಳನ್ನು ಬಲಿಸಿಕೊಳ್ಳುತ್ತಿವೆ' ಎಂದು ಹೇಳಿದರು.



ಎಂ.ಎಸ್. ಆಶಾದೇವಿ

'ಹಿಂದೂ–ಮುಸ್ಲಿಮರು ತಮ್ಮೆಲ್ಲರ ಭಿನ್ನಾಭಿಪ್ರಾಯಗಳ ನಡುವೆಯೂ ಹೇಗೋ ಹೊಂದಿಕೊಂಡು ಬದುಕಲು ಹಂಬಲಿಸುತ್ತಿದ್ದಾರೆ. ಮೂರು ದಶಕಗಳ ಹಿಂದಿನ ಚಿತ್ರಣವನ್ನು ಕೃತಿ ಕಟ್ಟಿಕೊಡುತ್ತದೆ. ಇದು ನಮ್ಮನ್ನು ಆಳವಾಗಿ ಕಲಕುತ್ತಲೇ ನಮ್ಮನ್ನು ಅಧೀರರನ್ನಾಗಿಯೂ ಮಾಡುತ್ತದೆ. ಆ ಸೌಹಾರ್ದವನ್ನು ದ್ವೇಷ ರಾಜಕಾರಣಕ್ಕಾಗಿ ಬಲಿಕೊಡುತ್ತಿರುವ, ನಾವು ಅದಕ್ಕೆ ಮೂಕಸಾಕ್ಷಿಗಳಾಗುತ್ತಿರುವ ಅಸಹಾಯಕತೆಯ ಕಣ್ಣು ಮನಸ್ಸಿಗೆ ರಾಚುತ್ತದೆ' ಎಂದರು.


ಬೆಂಗಳೂರು ದಕ್ಷಿಣ ಡಿಸಿಪಿ ಪಿ. ಕೃಷ್ಣಕಾಂತ್, 'ಕಾಶ್ಮೀರಿಯರು ಹಲವು ಸವಾಲುಗಳನ್ನು ಎದುರಿಸಿ, ಜೀವನ ಸಾಗಿಸುತ್ತಿದ್ದಾರೆ. ಕಷ್ಟಗಳನ್ನು ಎದುರಿಸಿ ಮುನ್ನಡೆದಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ. ಯುವಜನರು ಸಾಮಾಜಿಕ ಜಾಲತಾಣಗಳಲ್ಲಿ ಸಮಯವನ್ನು ವ್ಯರ್ಥ ಮಾಡಿ, ಜೀವನ ಹಾಳು ಮಾಡಿಕೊಳ್ಳಬಾರದು' ಎಂದು ತಿಳಿಸಿದರು.

ಲೇಖಕಿ ಶಮಂತಾ ಡಿ.ಎಸ್., 'ಪುಸ್ತಕವನ್ನು ಇತಿಹಾಸದ ರೂಪದಲ್ಲಿ ನೋಡಬೇಕು. 1997ರಲ್ಲಿ ಮೊದಲ ಆವೃತ್ತಿ ಹೊರತರಲಾಗಿತ್ತು. ಈಗ ಕಾಶ್ಮೀರದಲ್ಲಿ ಸಾಕಷ್ಟು ಬದಲಾಗಿದೆ. ಆದ್ದರಿಂದ ಎರಡನೇ ಆವೃತ್ತಿಯನ್ನು ಹೊರತರಲಾಯಿತು' ಎಂದರು.

ಪುಸ್ತಕ ಪರಿಚಯ

- **ಪುಸ್ತಕ:** 'ಹಿಮದಗ್ನಿ'
- **ಲೇಖಕಿ:** ಶಮಂತಾ ಡಿ.ಎಸ್.
- **ಬೆಲೆ:** ₹156
- **ಪುಟಗಳು:** 160
- **ಪ್ರಕಾಶನ:** ಸಾಧನಾ ಪ್ರಕಾಶನ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಒಂದು ಲಿಲ್ಲಿಯಾಗಲಿ ಅಥವಾ ಗುಲಾಬಿಯಾಗಲಿ ಎಂದಿಗೂ ನಟಿಸುವುದಿಲ್ಲ, ತನ್ನ ಮೂಲಗುಣಕ್ಕೆ ತಕ್ಕಂತೆ ಇರುವುದೇ ಅದರ ಸೌಂದರ್ಯದ ಗುಟ್ಟು.

–ಜಿಡ್ಡು ಕೃಷ್ಣಮೂರ್ತಿ

ರಾಜಧಾನಿಯ ರಸ್ತೆಗಳಿಗೆ ಗುಂಡಿಗಳಿಂದ ಮುಕ್ತಿ ಎಂದು?

ಬೆಂಗಳೂರಿನ ರಸ್ತೆಗಳಿಗೆ ಗುಂಡಿಗಳಿಂದ ಮುಕ್ತಿಯೇ ಇಲ್ಲವೆಂದು ತೋರುತ್ತದೆ. ಗುಂಡಿಗಳ ಕಾರಣದಿಂದ ಹಲವು ಸಾವುಗಳು ಸಂಭವಿಸಿದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕಣ್ಣು ತೆರೆದಿಲ್ಲ. ಹೈಕೋರ್ಟ್ ಪದೇ ಪದೇ ಕಿವಿ ಹಿಂಡಿದರೂ ಬಿಬಿಎಂಪಿ ಆಡಳಿತ ವ್ಯವಸ್ಥೆ ಎಚ್ಚೆತ್ತುಕೊಂಡಿಲ್ಲ. ಸಾರ್ವಜನಿಕರ ಅತ್ಯಂತ ಮೂಲಭೂತ ಅಗತ್ಯ ಎನಿಸಿದ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಲಾಗಾಯ್ತಿನಿಂದಲೂ ಅದಕ್ಕೆ ಸಾಧ್ಯವಾಗಿಲ್ಲ. ಬೆಂಗಳೂರಿನ ರಾಜಾಜಿನಗರದ ಬಳಿ ಮೂರು ದಿನಗಳ ಹಿಂದೆ ರಸ್ತೆಗುಂಡಿಯ ಕಾರಣದಿಂದ ಸಂಭವಿಸಿದ ಅಪಘಾತದಲ್ಲಿ ಮತ್ತೊಂದು ಜೀವ ಬಲಿಯಾಗಿದೆ. ರಾಜಧಾನಿಯಲ್ಲಿ ಒಂದು ವರ್ಷದ ಅವಧಿಯಲ್ಲಿ ರಸ್ತೆ ಗುಂಡಿಗಳಿಂದಾಗಿ ಸಂಭವಿಸಿದ ಐದನೇ ಸಾವು ಇದು. ಆದರೆ, ಬಿಬಿಎಂಪಿ ಮಾತ್ರ ಯಥಾಪ್ರಕಾರ ಕುಂಭಕರ್ಣನ ನಿದ್ರೆಗೆ ಜಾರಿದೆ. 'ಈ ವರ್ಷ ಸುಮಾರು 22 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ' ಎಂಬ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಹೇಳಿಕೆ ಅರ್ಥ ಕಳೆದುಕೊಂಡಿದೆ. ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಗುಂಡಿಗಳನ್ನು ಮುಚ್ಚಿದ್ದರೆ ನಗರದಲ್ಲಿ ಬಹುತೇಕ ರಸ್ತೆಗಳು ಸುಸ್ಥಿತಿಯಲ್ಲಿ ಇರಬೇಕಿತ್ತು. ಮೆಜೆಸ್ಟಿಕ್‌ನಿಂದ ನೀವು ಯಾವ ದಿಕ್ಕಿನತ್ತ ಹೊರಟರೂ ಗುಂಡಿಮಯ ರಸ್ತೆಗಳೇ ನಿಮ್ಮನ್ನು ಸ್ವಾಗತಿಸುತ್ತವೆ. ವಾಸ್ತವ ಹೀಗಿರುವಾಗ, ಇನ್ನು 1,500 ಗುಂಡಿಗಳನ್ನು ಮಾತ್ರ ಮುಚ್ಚಬೇಕಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಿರುವುದು ಆತ್ಮವಂಚನೆಯಲ್ಲದೆ ಬೇರೇನಲ್ಲ. ರಸ್ತೆ ಗುಂಡಿಗಳ ಸಂಖ್ಯೆಯು ಅಧಿಕಾರಿಗಳು ಹೇಳಿದ ಸಂಖ್ಯೆಗಿಂತ ಅನೇಕ ಪಟ್ಟು ಹೆಚ್ಚು ಇದೆ ಎಂಬುದು ದಿನನಿತ್ಯ ನಗರದಲ್ಲಿ ಅಡ್ಡಾಡುವ ಪ್ರತಿಯೊಬ್ಬ ವಾಹನ ಸವಾರನಿಗೂ ಗೊತ್ತಿರುವ ಸಂಗತಿ. ಈ ವರ್ಷ ಮಳೆ ಹೆಚ್ಚಿಗೆ ಸುರಿದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ, ಬಿಬಿಎಂಪಿಯು ತನ್ನ ಎಲ್ಲ ವೈಫಲ್ಯಕ್ಕೂ ಮಳೆಯ ನೆಪವನ್ನು ಮುಂದೆಮಾಡಿ ನುಣುಚಿಕೊಳ್ಳುವಂತಿಲ್ಲ.



ರಸ್ತೆಗಳ ನಿರ್ವಹಣೆ ವಿಚಾರದಲ್ಲಿ ಬಿಬಿಎಂಪಿಯ ನಿರ್ಲಕ್ಷ್ಯ ಕೊನೆಯಾಗಬೇಕು

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಐದು ವರ್ಷಗಳಲ್ಲಿ ₹ 20,060 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಮಂಡಲ ಅಧಿವೇಶನದಲ್ಲಿ ಮಾಹಿತಿ ನೀಡಿದ್ದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 13,974 ಕಿಲೊಮೀಟರ್ ಉದ್ದದ ರಸ್ತೆ ಜಾಲ ಇದೆ. ಅಂದರೆ, ಪ್ರತೀ ಕಿಲೊಮೀಟರ್ ರಸ್ತೆಗೆ ಐದು ವರ್ಷಗಳಲ್ಲಿ ತಲಾ ₹ 1.44 ಕೋಟಿ ವ್ಯಯಿಸಲಾಗಿದೆ. ಇಷ್ಟೊಂದು ದೊಡ್ಡ ಮೊತ್ತದ ಕಾಮಗಾರಿಗಳು ನಡೆದ ಮೇಲೆ ಎಲ್ಲ ರಸ್ತೆಗಳು ಸುಸ್ಥಿತಿಯಲ್ಲಿ ಇರಬೇಕಿತ್ತು. ಆದರೆ, ವಾಸ್ತವ ಚಿತ್ರಣ ಬೇರೆಯೇ ಇದೆ. ರಸ್ತೆಗಳೆಲ್ಲ ಗುಂಡಿಮಯವಾಗಿವೆ. ಆಡಳಿತ ವೈಫಲ್ಯ ಮತ್ತು ಅಕ್ರಮಗಳ ಕಥೆಗಳನ್ನು ಹೇಳುತ್ತಿವೆ. ರಸ್ತೆ ನಿರ್ಮಾಣ ಕಾಮಗಾರಿಯ ಗುತ್ತಿಗೆ ಪಡೆದವರು, ಮೂರು ವರ್ಷಗಳವರೆಗೆ ಆ ರಸ್ತೆಯ ನಿರ್ವಹಣೆ ಹೊಣೆಯನ್ನೂ ನೋಡಿಕೊಳ್ಳಬೇಕು ಎಂಬ ನಿಯಮವಿದೆ. ಗುತ್ತಿಗೆದಾರರಿಂದ ರಸ್ತೆಗಳ ನಿರ್ವಹಣೆ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವುದು ಪಾಲಿಕೆ ಎಂಜಿನಿಯರ್‌ಗಳ ಜವಾಬ್ದಾರಿ. ರಸ್ತೆಗಳ ಇಂದಿನ ದುಃಸ್ಥಿತಿಗೆ ಇವರಿಬ್ಬರ ನಡುವಿನ ಅನೈತಿಕ ಮೈತ್ರಿಯೇ ಕಾರಣ. ರಸ್ತೆಗಳಲ್ಲಿ ಗುಂಡಿ ಕಾಣಿಸಿಕೊಂಡರೆ ಅವುಗಳನ್ನು ತಕ್ಷಣ ಮುಚ್ಚಿಸುವ ಉದ್ದೇಶದಿಂದಲೇ ಬಿಬಿಎಂಪಿಯು ಬೆಂಗಳೂರಿನ ಹೊರವಲಯದ ಕಣ್ಣೂರಿನಲ್ಲಿ ಬಿಸಿ ಡಾಂಬರು- ಜಲ್ಲಿ ಮಿಶ್ರಣ ಘಟಕವನ್ನು ಸ್ಥಾಪಿಸಿದೆ. ಆದರೆ, ಉದ್ದೇಶ ಮಾತ್ರ ಈಡೇರಿಲ್ಲ. ರಸ್ತೆಗಳನ್ನು ಗುತ್ತಿಗೆದಾರರು ಸಮರ್ಪಕವಾಗಿ ನಿರ್ವಹಿಸುವಂತೆ ನೋಡಿಕೊಳ್ಳುವಲ್ಲಿಯೂ ಬಿಬಿಎಂಪಿ ಸೋತಿದೆ. ಗುಂಡಿ ಮುಚ್ಚುವ ಕೆಲಸ ಬಿಬಿಎಂಪಿ ಕಡೆಯಿಂದಲೂ ಆಗುತ್ತಿಲ್ಲ.

'ರಸ್ತೆ ಗುಂಡಿಗಳನ್ನು ಮುಚ್ಚಿಸುವ ಹೊಣೆ ಹೊತ್ತ ಬಿಬಿಎಂಪಿಯ ಅಧಿಕಾರಿಯನ್ನು ಸೇವೆಯಿಂದ ಅಮಾನತು ಮಾಡಿ ಜೈಲಿಗೆ ಅಟ್ಟುವಂತೆ ಆದೇಶಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಈ ವರ್ಷದ ಆರಂಭದಲ್ಲಿ ಎಚ್ಚರಿಕೆ ನೀಡಿತ್ತು. ಆ ಬಳಿಕವೂ ಬಿಬಿಎಂಪಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದಕ್ಕೆ ಗುಂಡಿಗಳೇ ಸಾಕ್ಷಿ. ಹದಗೆಟ್ಟ ರಸ್ತೆಗಳ ಕಾರಣದಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ, ಅಪಘಾತಗಳು ಹೆಚ್ಚುತ್ತಿವೆ. ಬೆಂಗಳೂರಿಗರ ಅಮೂಲ್ಯ ಸಮಯ ವ್ಯರ್ಥವಾಗಿ ರಸ್ತೆಗಳಲ್ಲೇ ಕಳೆದುಹೋಗುತ್ತಿದೆ. ರಸ್ತೆಗಳ ನಿರ್ವಹಣೆ ವಿಚಾರದಲ್ಲಿ ಬಿಬಿಎಂಪಿಯ ನಿರ್ಲಕ್ಷ್ಯ ಕೊನೆಯಾಗಬೇಕು. 'ತೇಪೆ ಹಚ್ಚುವುದೇ ನಿಮ್ಮ ಕೆಲಸವಲ್ಲ. ಗುಂಡಿಗಳೇ ಬೀಳದಂತೆ ಗುಣಮಟ್ಟದ ರಸ್ತೆಗಳನ್ನು ನಗರದಲ್ಲಿ ನಿರ್ಮಿಸಬೇಕು' ಎಂದೂ ಹೈಕೋರ್ಟ್ ಹೇಳಿತ್ತು. ಈ ಮಾತಿನ ಅರ್ಥ ಅರಿಯಲಾರದ ಸ್ಥಿತಿಗೆ ಬಿಬಿಎಂಪಿ ಬಂದಿರಲಿಕ್ಕಿಲ್ಲ. ರಸ್ತೆಗಳ ದುಃಸ್ಥಿತಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಕೆಲಸ ಬಿಬಿಎಂಪಿಯಿಂದ ಇನ್ನಾದರೂ ಆಗಬೇಕು.

ದಿನದ ಟ್ವೀಟ್

ಅಧಿಕಾರಸ್ಥರು ಪಾಲಿಸುವರೇ?



ಕಾರಿನಲ್ಲಿ ಪ್ರಯಾಣಿಸುವ ಪ್ರತಿಯೊಬ್ಬರೂ ಸೀಟ್ ಬೆಲ್ಟ್ ಧರಿಸುವುದು ನಿಯಮದ ಪ್ರಕಾರ ಈಗ ಕಡ್ಡಾಯ. ಇದನ್ನು ಉಲ್ಲಂಘಿಸಿದವರಿಗೆ ₹ 1,000 ದಂಡ ವಿಧಿಸಲಾಗುತ್ತದೆ... ಇದು, ಬೆಂಗಳೂರಿನಲ್ಲಿರುವ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿಗೂ ಅನ್ವಯವಾಗುವುದೇ?

ಕಾಂಜೀವರಂ ರಾಜನ್ ಗೋಪಾಲಕೃಷ್ಣನ್

ಕಿಡಿನುಡಿ



ಉಚಿತವಾಗಿ ಯಾವುದೂ ಸಿಗುವುದಿಲ್ಲ ಎಂಬುದನ್ನು ಮರೆತದ್ದಕ್ಕೆ ಲಿಜ್ ಟ್ರಸ್ ದಂಡ ತೆತ್ತಿದ್ದಾರೆ. ಪರ್ಯಾಯ ಇಲ್ಲದೆ ತೆರಿಗೆಗಳನ್ನು ಕಡಿತ ಮಾಡುವುದು ಮತ್ತು ಇತಿಮಿತಿ ಇಲ್ಲದೆ ಇಂಧನ ಸಬ್ಸಿಡಿಗಳನ್ನು ಘೋಷಿಸಿದ್ದು ಬ್ರಿಟಿಷ್ ಸರ್ಕಾರದ ಖ್ಯಾತಿಗೆ ಹಾಗೂ ಅಲ್ಲಿನ ಹಣಕಾಸು ನಿರ್ವಹಣೆಯ ವಿಶ್ವಾಸಾರ್ಹತೆಗೆ ಕುತ್ತು ತಂದಿದೆ. ಅರ್ಥಶಾಸ್ತ್ರದ ನಿಯಮಗಳು ಎಲ್ಲರಿಗೂ ಅನ್ವಯವಾಗುತ್ತವೆ ಎಂಬುದನ್ನು ಶ್ರೀಲಂಕಾ ಮತ್ತು ಬ್ರಿಟನ್‌ನ ಪರಿಸ್ಥಿತಿಗಳು ಎತ್ತಿ ತೋರಿಸುತ್ತಿವೆ.

ಜಯಪ್ರಕಾಶ್ ನಾರಾಯಣ್, ಲೋಕಸತ್ತಾ ಪಕ್ಷದ ಸಂಸ್ಥಾಪಕ

25 ವರ್ಷಗಳ ಹಿಂದೆ

ಮಂಗಳವಾರ, 21-10-1997

- **ಕಲ್ಯಾಣ್ ಸಿಂಗ್ ಇಂದು ವಿಶ್ವಾಸಮತ: ಕಾಂಗ್ರೆಸ್, ದಳ ಇಬ್ಭಾಗ; ಸರ್ಕಾರಕ್ಕೆ ಬೆಂಬಲ ಸಂಭವ**

ಲಖನೌ, ಅ. 20 (ಪಿಟಿಐ)– ಬಹುಜನ ಸಮಾಜ ಪಕ್ಷ ಬೆಂಬಲ ಹಿಂದಕ್ಕೆ ಪಡೆದಿದ್ದರಿಂದ ಬಿಕ್ಕಟ್ಟಿಗೆ ಸಿಕ್ಕಿರುವ ಬಿಜೆಪಿ ನೇತೃತ್ವದ ಸರ್ಕಾರ ನಾಳೆ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚಿಸುವ ಸಿದ್ಧತೆ ನಡೆಸುತ್ತಿರುವಾಗಲೇ ಕಾಂಗ್ರೆಸ್ ಹಾಗೂ ಜನತಾದಳ ಇಬ್ಭಾಗವಾಗಿ ಎರಡೂ ಪಕ್ಷಗಳ ಒಂದೊಂದು ಬಣ ಮುಖ್ಯಮಂತ್ರಿ ಕಲ್ಯಾಣ ಸಿಂಗ್ ಅವರಿಗೆ ಬೆಂಬಲ ವ್ಯಕ್ತಪಡಿಸುವ ಸಂಭವ ಕಂಡುಬರುವುದರೊಂದಿಗೆ ಉತ್ತರ ಪ್ರದೇಶದ ರಾಜಕೀಯಕ್ಕೆ ಹೊಸ ತಿರುವು ಬಂದಿದೆ.

ಇಂದು ನಡೆದ ಹಠಾತ್ ಬೆಳವಣಿಗೆಯಲ್ಲಿ 37 ಸದಸ್ಯ ಬಲದ ಕಾಂಗ್ರೆಸ್ ಶಾಸಕಾಂಗ ಪಕ್ಷದ 19 ಶಾಸಕರು ಪಕ್ಷದಿಂದ ಹೊರ ನಡೆದು ಪ್ರತ್ಯೇಕವಾಗಿ 'ಉತ್ತರ ಪ್ರದೇಶ ಲೋಕ ತಾಂತ್ರಿಕ ಕಾಂಗ್ರೆಸ್' ರಚಿಸಿಕೊಂಡಿದ್ದಾರೆ. ಇವರು ಕಲ್ಯಾಣ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ಬೆಂಬಲ ಸೂಚಿಸುವ ಇಂಗಿತ ವ್ಯಕ್ತ ಮಾಡಿದ್ದಾರೆ.

- **ಪತನದತ್ತ ಗುಜರಾತ್ ಸರ್ಕಾರ: ವಾಘೇಲಗೆ ಕಾಂಗ್ರೆಸ್ ಬೆಂಬಲ ವಾಪಸ್**

ಅಹಮದಾಬಾದ್, ಅ. 20 (ಯುಎನ್‌ಐ)– ಗುಜರಾತ್‌ನಲ್ಲಿ ಶಂಕರ್ ಸಿಂಗ್ ವಾಘೇಲ ನೇತೃತ್ವದ ರಾಷ್ಟ್ರೀಯ ಜನತಾ ಪಾರ್ಟಿಯ ಸರ್ಕಾರ ಒಂದು ವರ್ಷ ಪೂರೈಸಲು ಕೇವಲ ಮೂರು ದಿನಗಳು ಬಾಕಿ ಉಳಿದಿರುವಂತೆ, ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಇಂದು ಹಿಂತೆಗೆದುಕೊಂಡಿತು.

50 ವರ್ಷಗಳ ಹಿಂದೆ

ಶನಿವಾರ, 21-10-1972

- **ಐದನೇ ಯೋಜನೆ: ಗ್ರಾಮಾಂತರ ಜನತೆಯ ಕ್ಷೇಮಾಭಿವೃದ್ಧಿಗೆ ಹೆಚ್ಚು ಗಮನ: ಸಚಿವ ಅಹ್ಮದ್**

ನವದೆಹಲಿ, ಅ. 20– ಐದನೇ ಪಂಚವಾರ್ಷಿಕ ಯೋಜನೆಯು ಕೇವಲ ಉತ್ಪನ್ನ ನಿರ್ದೇಶಿತವಾಗಿರದೆ ಗ್ರಾಮಾಂತರ ಜನಸಮುದಾಯದ ಕ್ಷೇಮಾಭ್ಯುದಯದತ್ತ ಹೊಸ ಗಮನ ನೀಡುವುದೆಂದು ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲೀ ಅಹ್ಮದ್ ಇಂದು ಇಲ್ಲಿ ಹೇಳಿದರು.

ಸಾಮಾಜಿಕ ಬದಲಾವಣೆ ಕುರಿತ ಸಂಸ್ಥೆ ಏರ್ಪಡಿಸಿದ್ದ ಹಸಿರುಕ್ರಾಂತಿ ಕುರಿತ ವಿಚಾರಗೋಷ್ಠಿಯೊಂದನ್ನು ಉದ್ಘಾಟಿಸಿದ ಅವರು, ಮುಂದಿನ ಐದು ವರ್ಷಗಳಿಗೆ ಸಮಗ್ರ ಕೃಷಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಹೇಳಿದರು.

- **800 ರೂ ಬೆಲೆ ಎತ್ತು 25 ರೂಗೆ ಮಾರಾಟ!**

ಬೆಂಗಳೂರು, ಅ. 20– ಕಲ್ಬುರ್ಗಿ ಜಿಲ್ಲೆಯಲ್ಲಿ ಮಳೆಯಿಲ್ಲದೆ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದ್ದು, ಕೆಲಸ ಇಲ್ಲದೆ ಜನ ನೆರೆರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆಂದೂ, ಪರಿಹಾರ ಕಾರ್ಯವನ್ನು ನಿಧಾನಗೊಳಿಸಲಾಗಿದೆ ಎಂದೂ ವಿಧಾನಸಭಾ ಸದಸ್ಯ ಶ್ರೀ ಪ್ರಭಾಕರ್ ತೇಲ್ಕರ್ ತಿಳಿಸಿದ್ದಾರೆ.

ಶ್ರೀಯುತರು ನೀಡಿರುವ ಹೇಳಿಕೆಯಲ್ಲಿ, ಭೂಸಾರ ರಕ್ಷಣೆಯನ್ನು ಕಲ್ಬುರ್ಗಿ ಜಿಲ್ಲೆ ಅದರಲ್ಲಿಯೂ ಕಲಗಿ ಕ್ಷೇತ್ರದಲ್ಲಿ ಕೈಗೊಳ್ಳದಿದ್ದರೆ ಗ್ರಾಮಗಳಲ್ಲಿ ಜನ ಉಳಿಯದಿರಬಹುದು ಎಂದೂ, ಆದುದರಿಂದ ಭೂಸಾರ ರಕ್ಷಣೆ ಕಾರ್ಯವನ್ನು ಕೈಗೊಳ್ಳಬೇಕೆಂದೂ ಒತ್ತಾಯಪಡಿಸಿದ್ದಾರೆ.

ಒಡೆದು ಆಳುವ ರಾಜಕಾರಣದಾಚೆ ಮನಗಳ ಬೆಸೆಯಲಿ ಕ್ರಿಕೆಟ್ ಕಂಪು

'ಗಾಯ' ಶಮನಗೊಳಿಸುವರೇ ಬಿನ್ನಿ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ರೋಜರ್ ಮೈಕೆಲ್ ಹಂಫ್ರಿ ಬಿನ್ನಿ 43 ವರ್ಷಗಳ ಹಿಂದೆ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದು ಪಾಕಿಸ್ತಾನ ತಂಡದ ವಿರುದ್ಧ. ಅವರು ವೃತ್ತಿಜೀವನದ ಕೊನೆಯ ಟೆಸ್ಟ್ ಪಂದ್ಯವನ್ನು ಆಡಿದ್ದೂ ಅದೇ ದೇಶದ ಎದುರು. ಇದೀಗ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ, ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಮೊದಲ ಪಂದ್ಯವನ್ನು ಪಾಕ್ ಎದುರೇ ಆಡುತ್ತಿದೆ!

ಅಷ್ಟೇ ಅಲ್ಲ, ಬಿನ್ನಿ ಅಧ್ಯಕ್ಷ ಗಾದಿಗೇರಿದ ದಿನವೇ 'ಭಾರತ ತಂಡವು ಮುಂದಿನ ವರ್ಷ ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲು ಪಾಕಿಸ್ತಾನಕ್ಕೆ ತೆರಳುವುದಿಲ್ಲ. ತಟಸ್ಥ ತಾಣದಲ್ಲಿ ಆಡಲಾಗುವುದು' ಎಂದು ಮಂಡಳಿಯ ಕಾರ್ಯದರ್ಶಿ ಜಯ್ ಶಾ ಅವರು ಹೇಳಿದ ಮಾತು ಈಗ ಬಿಸಿ ಚರ್ಚೆಗೆ ಕಾರಣವಾಗಿದೆ. ಮುಂದಿನ ವರ್ಷ ಭಾರತದಲ್ಲಿಯೇ ನಡೆಯಲಿರುವ ಏಕದಿನ ವಿಶ್ವಕಪ್‌ನಲ್ಲಿ ಆಡುವುದರಿಂದ ಹಿಂದೆ ಸರಿಯುವ ಕುರಿತು ಪಾಕ್ ಕ್ರಿಕೆಟ್ ಮಂಡಳಿಯೂ ಚಿಂತನೆ ನಡೆಸಿದೆ ಎಂಬ ಮಾತುಗಳೂ ಕೇಳಿಬಂದಿವೆ.

ಈ ಎಲ್ಲ ಚರ್ಚೆಗಳ ನಡುವೆ ಇದೇ ಭಾನುವಾರ ಮೆಲ್ಬರ್ನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಭಾರತ ಮತ್ತು ಪಾಕ್ ನಡುವಣ ಪಂದ್ಯವು ಕುತೂಹಲಕ್ಕೆ ಕಾರಣವಾಗಿದೆ. ಹೋದ ಸಲ ಯುಎಇಯಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರು ಸೋತಿತ್ತು. ವಿಶ್ವಕಪ್ ಟೂರ್ನಿಗಳಲ್ಲಿ ಪಾಕ್ ಎದುರು ಭಾರತ ಸೋತಿದ್ದ ಮೊದಲ ಪಂದ್ಯ ಅದಾಗಿತ್ತು. ಈ ಬಾರಿ ಅದರ ಸೇಡು ತೀರಿಸಿಕೊಳ್ಳುವಲ್ಲಿ ಭಾರತ ಯಶಸ್ವಿಯಾಗುವುದೇ ಎಂಬ ಕುತೂಹಲವೂ ಗರಿಗೆದರಿದೆ. ಆದರೆ ಇಡೀ ಟೂರ್ನಿಯಲ್ಲಿ ಭಾರತದ ಆಟ ಹೇಗಿರಬಹುದು ಎಂಬ ಚರ್ಚೆಯೂ ಈಗ ಮುನ್ನೆಲೆಗೆ ಬಂದಿದೆ. ದಿಗ್ಗಜ ಕಪಿಲ್ ದೇವ್ ಅವರೇ ಹೇಳಿರುವ ಪ್ರಕಾರ, ರೋಹಿತ್ ಶರ್ಮಾ ಬಳಗವು ಸೆಮಿಫೈನಲ್ ತಲುಪುವುದೂ ಕಷ್ಟ.

ತಂಡದ ಆಟಗಾರರ ಅಸ್ಥಿರ ಪ್ರದರ್ಶನ, ಸಂಯೋಜನೆಯಲ್ಲಿ ಮಾಡಿದ ಅತಿಯಾದ ಪ್ರಯೋಗಗಳು ವಿಶ್ವಕಪ್ ಕಣದಲ್ಲಿ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಡೆತ್ ಓವರ್ ಪರಿಣತ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಇಲ್ಲದ ಭಾರತ ತಂಡವು ಆಸ್ಟ್ರೇಲಿಯಾ ನೆಲದಲ್ಲಿ ಜಯಕ್ಕಾಗಿ ಬಹಳಷ್ಟು ಶ್ರಮಪಡಬೇಕಿದೆ. ಆಟಗಾರರ ಗಾಯದ ಸಮಸ್ಯೆಯು ತಂಡವನ್ನು ಅಪಾರವಾಗಿ ಕಾಡಿದೆ. ಒಂದು ವರ್ಷದ ಅವಧಿಯಲ್ಲಿ ಒಟ್ಟು 40 ಆಟಗಾರರನ್ನು ಭಾರತ ತಂಡವು ಕಣಕ್ಕಿಳಿಸಿದೆ. ಏಳು ಆಟಗಾರರು ನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಹಿಂದೆಂದೂ ಇಷ್ಟೊಂದು ಪ್ರಯೋಗಗಳು ನಡೆದಿಲ್ಲ. 'ವರ್ಕ್‌ಲೋಡ್ ಮ್ಯಾನೇಜ್‌ಮೆಂಟ್' ಅನುಸರಿಸಿಯೂ ಪ್ರಮುಖ ಆಟಗಾರರು ಗಾಯಗೊಳ್ಳುವುದನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ.

ವೈದ್ಯರು, ಕೋಚ್‌ಗಳು ಮತ್ತು ಅತ್ಯಾಧುನಿಕ ವ್ಯವಸ್ಥೆಗಳು ಇದ್ದರೂ ಈ ರೀತಿಯಾಗಲು ಆಟಗಾರರು ತಮ್ಮ ಫಿಟ್‌ನೆಸ್ ಕುರಿತು ಗಂಭೀರವಾಗಿಲ್ಲವೇ ಎಂಬ ಅನುಮಾನವನ್ನೂ ಹುಟ್ಟುಹಾಕಿದೆ. ಸದ್ಯ ಭಾರತ ತಂಡದಲ್ಲಿರುವ ಕೆಲವು ಆಟಗಾರರು ಈ ಹತ್ತು ತಿಂಗಳುಗಳಲ್ಲಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಗೆ (ಎನ್‌ಸಿಎ) ಎರಡು-ಮೂರು ಬಾರಿ ಬಂದು ಆರೈಕೆ ಪಡೆದುಕೊಂಡು ಹೋಗಿದ್ದಾರೆ. ಆದರೆ ವಿರಾಟ್ ಕೊಹ್ಲಿ ಮಾತ್ರ ಒಮ್ಮೆಯೂ ಬಂದಿಲ್ಲ. ಅವರು ಸರಣಿಗಳ ನಡುವೆ ವಿಶ್ರಾಂತಿ ಪಡೆದಿದ್ದು ಬಿಟ್ಟರೆ ಗಾಯದ ಸಮಸ್ಯೆಯಿಂದ ಬಳಲಿದ್ದು ಕಡಿಮೆ. ಈ ಹಿಂದೆ ಧೋನಿ ಕೂಡ ನಿರಂತರವಾಗಿ ಎಲ್ಲ ಮಾದರಿಗಳಲ್ಲಿಯೂ ಆಡುತ್ತಿದ್ದರು. ವಿಕೆಟ್‌ಕೀಪಿಂಗ್ ಹಾಗೂ ಬ್ಯಾಟಿಂಗ್‌ನಲ್ಲಿಯೂ ಮಿಂಚುತ್ತಿದ್ದರು.

ಗಾಯದ ಸಮಸ್ಯೆಯನ್ನು ಬಿನ್ನಿ ಗಂಭೀರವಾಗಿ ಪರಿಗಣಿಸಿದ್ದಾರೆ. 'ಬೂಮ್ರಾ ಅವರಂತಹ ಪ್ರಮುಖ ಬೌಲರ್ ಇಲ್ಲದೇ ಅಂತರರಾಷ್ಟ್ರೀಯ ಟೂರ್ನಿಗೆ ಭಾರತ ಹೋಗಿದೆ. ಅವರಿಗೆ ಪರ್ಯಾಯವಾಗಿ ತಕ್ಕ ಬೌಲರ್ ಸಿದ್ಧವಾಗಿಲ್ಲ. ಈ ದಿಸೆಯಲ್ಲಿ ಗಾಯಾಳುಗಳ ಸಮಸ್ಯೆಯ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಆಯಾಮಗಳಿಂದಲೂ ಪರಿಶೀಲಿಸಿ ಯೋಜನೆ ಸಿದ್ಧಗೊಳಿಸುತ್ತೇವೆ' ಎಂದಿದ್ದಾರೆ. ಮುಂದಿನ ವರ್ಷ ಭಾರತದಲ್ಲಿ ನಡೆಯುವ ಏಕದಿನ ವಿಶ್ವಕಪ್ ಹಾಗೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ವೇಳೆಗೆ ತಂಡವನ್ನು ಸದೃಢಗೊಳಿಸುವ ಕನಸು ಅವರದ್ದು.

ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಸಂಬಂಧಗಳ ಬಗ್ಗೆಯೂ ಮಾತನಾಡಿರುವ ಅವರು, 'ಈ ವಿಷಯದಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಬಿಸಿಸಿಐ ನಿರ್ಧಾರ ಕೈಗೊಳ್ಳುವುದಿಲ್ಲ' ಎಂದಿದ್ದಾರೆ.

2008ರಲ್ಲಿ ಪಾಕಿಸ್ತಾನದಲ್ಲಿ ನಡೆದಿದ್ದ ಏಷ್ಯಾ ಕಪ್ ನಂತರ ಭಾರತ ತಂಡ ಅಲ್ಲಿಗೆ ಕಾಲಿಟ್ಟಿಲ್ಲ. ಗಡಿಯಾಚೆಯಿಂದ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವುದನ್ನು ನಿಲ್ಲಿಸುವವರೆಗೂ ದ್ವಿಪಕ್ಷೀಯ ಕ್ರಿಕೆಟ್ ಸಂಬಂಧ ಬೆಳೆಸುವುದಿಲ್ಲ ಎಂಬ ನಿಲುವು ಭಾರತ ಸರ್ಕಾರದ್ದಾಗಿದೆ. 2009ರಲ್ಲಿ ಲಾಹೋರ್‌ನಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡವಿದ್ದ ಬಸ್ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ನಂತರ ವಿಶ್ವದ ಬೇರೆ ಕ್ರಿಕೆಟ್ ತಂಡಗಳೂ ಪಾಕಿಸ್ತಾನ ಪ್ರವಾಸ ರದ್ದುಗೊಳಿಸಿದವು. ಇದರಿಂದಾಗಿ ಪಾಕಿಸ್ತಾನವು 2011ರ ವಿಶ್ವಕಪ್ ಟೂರ್ನಿಗೆ ಭಾರತ, ಶ್ರೀಲಂಕಾ ಹಾಗೂ ಬಾಂಗ್ಲಾದೇಶದೊಂದಿಗೆ ವಹಿಸಬೇಕಿದ್ದ ಜಂಟಿ ಆತಿಥ್ಯದ ಗೌರವವನ್ನೂ ಕಳೆದುಕೊಂಡಿತು. 2015ರಿಂದ ಕೆಲವು ತಂಡಗಳು ಪಾಕ್‌ನಲ್ಲಿ ಕ್ರಿಕೆಟ್ ಸರಣಿ ಆಡಿವೆ. ಇತ್ತೀಚೆಗೆ ಇಂಗ್ಲೆಂಡ್ ಕೂಡ ಲಾಹೋರ್‌ನಲ್ಲಿ ಆಡಿತ್ತು.



1992ರಲ್ಲಿ ವಿಶ್ವಕಪ್ ಗೆದ್ದ ಪಾಕ್ ತಂಡದ ನಾಯಕ ಇಮ್ರಾನ್ ಖಾನ್ ಅವರೇ ಕೆಲವು ವರ್ಷ ದೇಶದ ಪ್ರಧಾನಿಯಾಗಿದ್ದರು. ಆದರೂ ಪರಿಸ್ಥಿತಿ ಸಂಪೂರ್ಣ ಸುಧಾರಿಸಲಿಲ್ಲ. ಇಮ್ರಾನ್ ಆಡುತ್ತಿದ್ದ ಕಾಲಘಟ್ಟದಲ್ಲಿದ್ದ ಪಾಕ್ ಆಟಗಾರರ ಮನೋಭಾವದಲ್ಲಿಯೂ ಭಾರತವನ್ನು ಸೋಲಿಸಬೇಕು ಎಂಬ ಛಲ ಇರುತ್ತಿತ್ತು. ಅವರ ಹಾವಭಾವಗಳಲ್ಲಿ ಆಕ್ರಮಣಶೀಲತೆ ಇತ್ತು. ಅದಕ್ಕಾಗಿಯೇ ಉಭಯ ತಂಡಗಳ ಪಂದ್ಯಗಳು ಯಾವಾಗಲೂ ಬಿಸಿಯೇರಿಸುತ್ತಿದ್ದವು.

ಆದರೆ ಪಾಕಿಸ್ತಾನದ ಈಗಿನ ತಂಡದ ಆಟಗಾರರ ನಡವಳಿಕೆ ಬದಲಾಗಿದೆ. ಅಂದು ಜಾವೇದ್ ಮಿಯಾಂದಾದ್ ಪಂದ್ಯವೊಂದರಲ್ಲಿ ಕುಪ್ಪಳಿಸಿ ಅಣಕ ಮಾಡಿದ್ದರು. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವೆಂಕಟೇಶ್ ಪ್ರಸಾದ್ ಎಸೆತವನ್ನು ಅಮಿರ್ ಸೊಹೈಲ್ ಬೌಂಡರಿಗಟ್ಟಿ ಅಹಂಕಾರ ಪ್ರದರ್ಶಿಸಿದ್ದರು. ಈ ರೀತಿಯ ನಡವಳಿಕೆಗಳು ಈಗಿನ ಹುಡುಗರಲ್ಲಿ ಕಾಣುತ್ತಿಲ್ಲ ಎಂಬುದು ಗಮನಾರ್ಹ. ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ, ರೋಹಿತ್ ಶರ್ಮಾ ಅವರೊಂದಿಗೆ ಆತ್ಮೀಯವಾಗಿ ಸ್ನೇಹ ಇಟ್ಟುಕೊಂಡಿರುವವರಿದ್ದಾರೆ. ಪಾಕ್ ತಂಡದ ನಾಯಕ ಬಾಬರ್ ಆಜಂ ತಮ್ಮ ಆಟದಲ್ಲಿ ಕೊಹ್ಲಿಯವರನ್ನು, ನಡವಳಿಕೆಯಲ್ಲಿ ಧೋನಿಯವರನ್ನು ಅನುಸರಿಸುತ್ತ ಐಸಿಸಿ ರ್‍ಯಾಂಕಿಂಗ್‌ನ ಅಗ್ರಸ್ಥಾನದಲ್ಲಿದ್ದಾರೆ. ಭಾರತದ ಆಟಗಾರರೂ ಪಾಕ್ ಆಟಗಾರರೊಂದಿಗೆ ಸೌಹಾರ್ದವಾಗಿ ವ್ಯವಹರಿಸುವ ದೃಶ್ಯಾವಳಿಗಳು ಕಳೆದ ಎರಡು–ಮೂರು ವರ್ಷಗಳಲ್ಲಿ ನಡೆದ ಪಂದ್ಯಗಳ ಸಂದರ್ಭಗಳಲ್ಲಿ ದಾಖಲಾಗಿವೆ. ಪಂದ್ಯದಲ್ಲಿ ಜಿದ್ದಾಜಿದ್ದಿ, ನಂತರ ಎಲ್ಲರೂ ಮಿತ್ರರು. ಯಾವುದೇ ಕ್ರೀಡೆಯ ಉದ್ದೇಶವೂ ಇದೇ ಅಲ್ಲವೇ?

ಆದರೆ ಉಭಯ ದೇಶಗಳ ಕೆಲವು ಅಭಿಮಾನಿಗಳಲ್ಲಿರುವ ಅತಿರೇಕದ ಭಾವನೆಗಳೇ ಬೇರೆ. ಈಚೆಗೆ ಇಂಗ್ಲೆಂಡ್‌ನಲ್ಲಿ ಎರಡೂ ದೇಶಗಳ ಅಭಿಮಾನಿಗಳ ನಡುವೆ ಆದ ಗಲಭೆ ಇದಕ್ಕೆ ಉದಾಹರಣೆ. ಅಭಿಮಾನಿಗಳಲ್ಲಿರುವ ಭಾವನೆಗಳನ್ನು ರಾಜಕೀಯ ಹಾಗೂ ಮಾರುಕಟ್ಟೆ ಶಕ್ತಿಗಳು ಎರಡೂ ತಂಡಗಳನ್ನು 'ಬದ್ಧ ವೈರಿಗಳು' ಎಂಬಂತೆ ಬಿಂಬಿಸುತ್ತವೆ. ಅದರಿಂದ ಲಾಭ ಪಡೆಯುತ್ತಿವೆ.

ಬದಲಾಗಿರುವ ಈಗಿನ ಪರಿಸ್ಥಿತಿಯಲ್ಲಿ ತಾವೂ ಕ್ರಿಕೆಟ್ ತಾರೆಗಳಾಗಬೇಕು, ಶ್ರೀಮಂತರಾಗಬೇಕು ಹಾಗೂ ಜಾಗತಿಕ ಗೌರವ ಗಳಿಸಬೇಕು ಎಂಬ ತುಡಿತ ಪಾಕ್ ಆಟಗಾರರಲ್ಲಿ ಕಂಡುಬರುತ್ತಿದೆ. ಇದೊಂದು ಆಶಾದಾಯಕ ಬೆಳವಣಿಗೆ. ಅದಕ್ಕೆ ಅಲ್ಲಿಯ ವ್ಯವಸ್ಥೆ ಅವಕಾಶ ನೀಡಬೇಕು. ತನ್ನ ನೆಲದಲ್ಲಿ ಬೇರೆ ದೇಶಗಳ ತಂಡಗಳು ಬಂದು ಆಡುವಂತಹ ಸುರಕ್ಷಿತ ವಾತಾವರಣ ನೆಲೆಸುವಂತೆ ನೋಡಿಕೊಳ್ಳಬೇಕು. ಒಡೆದು ಆಳುವ ರಾಜಕಾರಣದಾಚೆ ಮನಗಳ ಬೆಸೆಯುವ ಕ್ರಿಕೆಟ್ ಕಂಪು ಬೀರಬೇಕಲ್ಲವೇ?

ಚುರುಮುರಿ



ಏನು ಹಂಗಂದ್ರೆ?

• ಬಿ.ಎನ್.ಮಲ್ಲೇಶ್

ಹರಟೆಕಟ್ಟೆಯಲ್ಲಿ ತೆಪರೇಸಿ ನರ್ಗೀಸ್ ಮಂಡಕ್ಕಿ, ಮೆಣ್ಸಿನ್ಕಾಯಿ ತಿನ್ನುತ್ತ 'ಮೊನ್ನೆ ಏನಾತು ಗೊತ್ತಾ?' ಎಂದ.

'ಏನಾತು?' ಗುಡ್ಡೆ ಪ್ರಶ್ನೆ.

'ನನ್ ಸಣ್ ಮಗ ಕ್ರಿಕೆಟ್‌ನಲ್ಲಿ ಸೋತು ಮನೆಗೆ ಬಂದಿದ್ದ. ಯಾಕೋ ಸೋತ್ರಿ ಅಂತ ಕೇಳಿದ್ಕೆ 'ನಾವೇನ್ ಸೋತಿಲ್ಲ, ಅವರೇ ಗೆದ್ರು' ಅನ್ನೋದಾ?'

'ಅಲೆ ಇವ್ನ, ಹಂಗಂದ್ನಾ? ಈ ತರ ಎಲ್ಲೋ ಕೇಳಿದಂಗೈತಪ...' ದುಬ್ಬೀರ ತಲೆ ಕೆರೆದುಕೊಂಡ.

'ಅದು ಹೋಗ್ಲಿ, ಸ್ಕೂಲ್ ಪರೀಕ್ಷೇಲೂ ಫೇಲಾಗೋದಾ? ಯಾಕೋ ಅಂದ್ರೆ 'ನಾನೇನ್ ಫೇಲಾಗಿಲ್ಲ, ಮೇಷ್ಟ್ರು ಮಾರ್ಕ್ಸ್ ಕೊಟ್ಟಿಲ್ಲ ಅಷ್ಟೆ' ಅಂತಾನೆ! ಏನು ಹಂಗಂದ್ರೆ?'

'ಅಂದ್ರೇ ನಾನೇನ್ ಫೇಲಾಗಿಲ್ಲ, ಬೇರೆಯವರು ಪಾಸಾಗಿದಾರೆ ಅಂತ ಅರ್ಥ. ನಿನ್ ಮಗ ಮುಂದೆ ದೊಡ್ಡ ರಾಜಕಾರಣಿ ಆಗ್ತಾನೆ ಕಣಲೆ ತೆಪರ...' ಗುಡ್ಡೆ ನಕ್ಕ.

'ಇದ್ನ ಇನ್ನೊಂದ್ ತರ ಹೇಳಬಹುದಾ?' ಕೊಟ್ರೇಶಿ ಕೇಳಿದ.

'ಹೆಂಗೆ?'

'ಹಸಿವಿನ ಸೂಚ್ಯಂಕದಲ್ಲಿ ಭಾರತ ಕಳಪೆ ಆಗೇತಲ್ಲ, ಅದನ್ನ 'ನಾವ್ಯಾರೂ ಹಸ್ಕಂಡಿಲ್ಲ, ಬೇರೆ ದೇಶದೋರು ಚೆನ್ನಾಗಿ ಊಟ ಮಾಡ್ತದಾರೆ' ಅನ್ನಬೋದಾ?'

ದುಬ್ಬೀರನಿಗೆ ಮತ್ತೆ ಗೊಂದಲ. ಈ ತರದ್ದು ಎಲ್ಲೋ ಕೇಳಿದೀನಲ್ಲ ಅಂತ ಮತ್ತೂ ತಲೆ ಕೆರೆದುಕೊಂಡ.

ಅಷ್ಟರಲ್ಲಿ ಗುಡ್ಡೆ ಮಂಡಕ್ಕಿ ತಿಂದು ಪೇಪರ್‌ನಲ್ಲಿ ಕೈ ಒರೆಸಿಕೊಳ್ಳುವಾಗ ಅದರಲ್ಲಿದ್ದ ಒಂದು ಹೆಡ್‌ಲೈನ್‌ನ ಗಟ್ಟಿಯಾಗಿ ಓದಿದ 'ರೂಪಾಯಿ ಕುಸೀತಿಲ್ಲ, ಡಾಲರ್ ಬಲವರ್ಧನೆ ಆಗ್ತಾ ಇದೆ...'

'ಹ್ಞಾಂ... ಇದೇ ನನ್ ತಲೆ ತಿಂತಿದ್ದು. ಅದ್ನ ಯಾರು ಹೇಳಿದಾರ್ಲೆ ಗುಡ್ಡೆ?' ದುಬ್ಬೀರ ಕುತೂಹಲದಿಂದ ಕೇಳಿದ.

'ಇದ್ನಾ? ಏನೋಪ್ಪ, ಇದ್ರಲ್ಲಿ ಅಷ್ಟೇ ಇರೋದು. ಪೇಪರ್ ಹರಿದೋಗಿದೆ' ಎಂದ ಗುಡ್ಡೆ.

'ಥೋತ್ತೇರಿ...' ತಲೆ ಕೊಡವಿದ ದುಬ್ಬೀರ. ಎಲ್ಲರೂ ಮುಖ ಮುಖ ನೋಡಿಕೊಂಡರು.

ಸಂಗತ

ಬದಲಾಗಿದೆ ಅಭಿವೃದ್ಧಿಯ ಪರಿಕಲ್ಪನೆ!

ಅಭಿವೃದ್ಧಿಯ ಹೆಸರಿನಲ್ಲಿ ಅನಾರೋಗ್ಯಕರ ಸ್ಪರ್ಧೆಗೆ, ಅಂಧ ಪೈಪೋಟಿಗೆ ನಾವು ಇಳಿದಿದ್ದೇವೆ

• ಜಯಂತ ಕೆ.ಎಸ್.

ರಾಜಕೀಯ ರಂಗದಲ್ಲಿರುವ ಸ್ನೇಹಿತನೊಬ್ಬ ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ಹಂಚಿಕೊಂಡ ಸುದ್ದಿಯೊಂದು ನನ್ನನ್ನು ಯೋಚನೆಗೆ ಹಚ್ಚಿತು. 'ಅಭಿವೃದ್ಧಿಯ ಪರ್ವ ಆರಂಭ, ನಮ್ಮ ಊರಿಗೆ ಪೊಲೀಸ್ ಠಾಣೆ ಮಂಜೂರು'. ಊರಿಗೆ ಪೊಲೀಸ್ ಠಾಣೆ ಅಗತ್ಯವಿಲ್ಲ ಎಂಬುದು ಅಭಿವೃದ್ಧಿಯ ಮಾನದಂಡವೋ ಅಥವಾ ಪೊಲೀಸ್ ಠಾಣೆ ಮಂಜೂರಾಗಿದೆ ಎಂಬುದು ಅಭಿವೃದ್ಧಿಯ ಸಂಕೇತವೋ? ಅಭಿವೃದ್ಧಿಯ ವ್ಯಾಖ್ಯಾನವೇ ಒಂದು ರೀತಿಯಲ್ಲಿ ಈಗ ಅರ್ಥವಾಗದ ಸಂಗತಿ.


ನಾಲ್ಕಾರು ವರ್ಷಗಳ ಹಿಂದೆ ಧಾರವಾಡ ನಗರದ ಪ್ರಮುಖ ವೃತ್ತವೊಂದರಲ್ಲಿ ಹೈಮಾಸ್ಟ್ ದೀಪ ಅಳವಡಿಸಲಾಯಿತು. ಆ ದೀಪದ ಕಂಬದ ಕೆಳಗೆ ವಿಶಾಲವಾಗಿ ಹರಡಿಕೊಂಡ ಮರಗಳಿದ್ದವು. ಆ ಮರಗಳ ಮೇಲೆ ನೂರಾರು ಪಕ್ಷಿಗಳು ಗೂಡು ಕಟ್ಟಿ ವಾಸ ಮಾಡುತ್ತಿದ್ದವು. ಪ್ರತಿದಿನ ಮುಂಜಾನೆ ಮರದ ಕೆಳಗೆ ಮೂರು–ನಾಲ್ಕು ಪಕ್ಷಿಗಳು ಸತ್ತು ಬಿದ್ದಿರುತ್ತಿದ್ದವು. ಪಕ್ಷಿಗಳ ಸಾವಿಗೆ ಕಾರಣ ಏನು ಎಂದು ಹುಡುಕಿದಾಗ, ಕಣ್ಣು ಕುಕ್ಕುವ ಬೆಳಕು ಬೀಳುವುದರಿಂದ ಪಕ್ಷಿಗಳಿಗೆ ನಿದ್ದೆ ಮಾಡಲು ಸಾಧ್ಯವಾಗದೆ ಸತ್ತು ಬೀಳುತ್ತಿವೆ ಎಂಬುದು ತಿಳಿಯಿತು.

ದೊಡ್ಡ ನಗರಗಳಲ್ಲಿ ಸುರಕ್ಷತೆ ದೃಷ್ಟಿಯಿಂದ ಪ್ರಮುಖ ವೃತ್ತಗಳಲ್ಲಿ ನಲವತ್ತು – ಐವತ್ತು ಅಡಿ ಎತ್ತರದ ಹೈಮಾಸ್ಟ್ ದೀಪ ಅಳವಡಿಸಲಾಗಿದೆ. ಇದರ ಅಗತ್ಯ ಏನು, ಇದನ್ನು ಎಲ್ಲಿ ಅಳವಡಿಸಬೇಕು ಎಂಬುದರ ಬಗ್ಗೆ ಯೋಚಿಸುವುದಕ್ಕಿಂತ ಕೆಲವರು ಇದನ್ನು ಪ್ರತಿಷ್ಠೆ, ಅಭಿವೃದ್ಧಿಯ ಸಂಕೇತ ಎಂದು ಭಾವಿಸಿದ್ದಾರೆ! ಇದೀಗ ಈ ಹೈಮಾಸ್ಟ್ ದೀಪಗಳು ಉದ್ಯಾನಗಳಿಗೂ ಕಾಲಿಟ್ಟಿವೆ. ಪರಿಣಾಮವಾಗಿ, ಪಕ್ಷಿ ಸಂಕುಲವು ಉದ್ಯಾನಗಳ ಮರಗಳ ಮೇಲೂ ಜೀವಿಸಲಾಗದ ಪರಿಸ್ಥಿತಿ ಸೃಷ್ಟಿಯಾಗಿದೆ.

ಅಭಿವೃದ್ಧಿ ಹೆಸರಿನಲ್ಲಿ ಅನಾರೋಗ್ಯಕರ ಸ್ಪರ್ಧೆಗೆ ನಾವು ಇಳಿದಿದ್ದೇವೆ. ಒಂದು ನಿರ್ದಿಷ್ಟ ಕಾರಣಕ್ಕೆ ಯಾವುದಾದರೂ ವೃತ್ತದಲ್ಲೋ ಅಥವಾ ಉದ್ಯಾನದಲ್ಲೋ ಹೈಮಾಸ್ಟ್ ದೀಪ ಅಳವಡಿಸಿದರೆ, ಪಕ್ಕದ ವಾರ್ಡ್‌ನವರು, 'ಆ ವಾರ್ಡ್‌ನಲ್ಲಿ ಹೈಮಾಸ್ಟ್ ದೀಪ ಅಳವಡಿಸಿದ್ದಾರೆ, ನಮ್ಮಲ್ಲಿ ಏಕಿಲ್ಲ? ನಿಮಗೆ ಅದನ್ನು ತರುವ ತಾಕತ್ತು ಇಲ್ಲವೇ' ಎಂದು ಅಲ್ಲಿನ ಜನಪ್ರತಿನಿಧಿಯನ್ನು ಹೀಯಾಳಿಸುವ ಮಟ್ಟಿಗೆ ಈಗ ಪರಿಸ್ಥಿತಿ ಹದಗೆಟ್ಟಿದೆ. ಇಂತಹ ಮೂದಲಿಕೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿಯಾದರೂ ಆತ ಅಗತ್ಯ ಇಲ್ಲದಿದ್ದರೂ ತನ್ನ ವಾರ್ಡ್‌ನಲ್ಲಿ ಒಂದು ಹೈಮಾಸ್ಟ್ ದೀಪ ಹಾಕಿಸುತ್ತಾನೆ. ಇದರ ಸಾಧಕ–ಬಾಧಕದ ಬಗ್ಗೆ ಗಮನಹರಿಸುವ ವ್ಯವಧಾನ ಯಾರಲ್ಲೂ ಉಳಿದಿಲ್ಲ.

ಹಳ್ಳಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲು ಈಗ ಪೈಪೋಟಿ ಉಂಟಾಗಿರುವುದರ ಹಿಂದೆಯೂ ಅಭಿವೃದ್ಧಿ ಕುರಿತ ಇಂತಹ ಅಪಕ್ವ ಮನೋಧೋರಣೆಯೇ ಕಾರಣ. ಹಳ್ಳಿಯ ಯಾವುದಾದರೂ ಒಂದು ಬೀದಿಗೆ ಯಾವುದೋ ಒಂದು ಕಾರಣಕ್ಕೆ ಅಗತ್ಯ ಎಂದು ಅನ್ನಿಸಿ ಕಾಂಕ್ರೀಟ್ ರಸ್ತೆ ಮಾಡಿಸಿದರೆ ಮುಗಿಯಿತು; ಉಳಿದ ಬೀದಿಯವರ ಕಣ್ಣು ಕೆಂಪಾಗುತ್ತದೆ. ಅವರನ್ನು ಸಮಾಧಾನಪಡಿಸಲು ಅಗತ್ಯ ಇದೆಯೋ ಇಲ್ಲವೋ ಅಲ್ಲಿಯೂ ಕಾಂಕ್ರೀಟ್ ರಸ್ತೆ ಮಾಡಿಸಬೇಕಾದ ಅನಿವಾರ್ಯವು ಸ್ಥಳೀಯ ಜನಪ್ರತಿನಿಧಿಗಳಿಗೆ ಎದುರಾಗುತ್ತದೆ. ಜನರಿಗೆ ತಿಳಿಹೇಳುವ ನೈತಿಕತೆಯನ್ನು ಜನಪ್ರತಿನಿಧಿಗಳು ಉಳಿಸಿಕೊಂಡಿಲ್ಲವೋ ಅಥವಾ ಅರ್ಥ ಮಾಡಿಕೊಳ್ಳುವ ವಿನಯವು ಜನರಲ್ಲಿ ಉಳಿದಿಲ್ಲವೋ ಗೊತ್ತಾಗುವುದಿಲ್ಲ. ಅಂತೂ ಅಂಧ ಪೈಪೋಟಿ ಮುಂದುವರಿದಿದೆ! ಇಂತಹ ಸ್ಥಿತಿ ಒದಗಲು ಕಾರಣ ಏನು, ಇದರಲ್ಲಿ ಯಾರ ಪಾತ್ರ ಎಷ್ಟು ಎಂಬುದರ ಕುರಿತು ಬೇರೆ ಬೇರೆ ಕ್ಷೇತ್ರಗಳ ತಜ್ಞರು ಕೂಲಂಕಷವಾಗಿ ಅಧ್ಯಯನ ನಡೆಸಿದರೆ ಕುತೂಹಲಕರ ಅಂಶಗಳು ಹೊರಗೆ ಬರಬಹುದು.

ಮಾನವಕೇಂದ್ರಿತ ಅಭಿವೃದ್ಧಿಯ ಬೆನ್ನುಹತ್ತಿರುವ ಕಾರಣಕ್ಕೆ ಪ್ರಕೃತಿಯೇ ನಮಗೆ ಪಾಠ ಕಲಿಸುತ್ತಿದೆ. ಬೆಂಗಳೂರಿನಲ್ಲಿ ಈಚೆಗೆ ಆಗಿರುವ ಮಳೆಯ ಅವಾಂತರ, ಕೊಡಗಿನಲ್ಲಿ ಆಗುತ್ತಿರುವ ಭೂಕುಸಿತ... ಇವೆಲ್ಲ ನಮಗೆ ಪಾಠಗಳಾಗಬೇಕು. ಅಭಿವೃದ್ಧಿಯ ಹೆಸರಿನಲ್ಲಿ ನಮ್ಮಲ್ಲಿ ಆಗುತ್ತಿರುವ ಕಾರ್ಯಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕಲಿಯುವ ಆಸಕ್ತಿಯೇ ನಮ್ಮಲ್ಲಿ ಕಾಣಿಸುತ್ತಿಲ್ಲ ಎಂಬುದು ಹೆಜ್ಜೆ ಹೆಜ್ಜೆಗೂ ಮನವರಿಕೆ ಆಗುತ್ತದೆ. ಸುಸ್ಥಿರ ಅಭಿವೃದ್ಧಿ ಸಾಧ್ಯತೆಗಳನ್ನು ಶೋಧಿಸುವ ಕೆಲಸ ಈಗಲಾದರೂ ಆಗಬೇಕು. ಅದಕ್ಕೆ ಜನರ ಮನೋಧೋರಣೆಯನ್ನು ಒಗ್ಗಿಸುವಂತಹ ಪ್ರಯತ್ನಗಳು ಬಿರುಸು ಪಡೆಯಬೇಕು.



ಮೂಲಸೌಕರ್ಯಗಳನ್ನು ಒದಗಿಸುವುದು ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಆದರೆ, ಈ ವಿಚಾರದಲ್ಲಿ ಆದ್ಯತೆಗಳನ್ನು ಸರಿಯಾಗಿ ಗುರುತಿಸಬೇಕಾಗಿದೆ. ಕೆಲವರು ಮೂಲ ಸೌಕರ್ಯ ಒದಗಿಸುವುದನ್ನೇ ಸಮಗ್ರ ಅಭಿವೃದ್ಧಿ ಎಂದು ಭಾವಿಸಿಕೊಂಡಿದ್ದಾರೆ. ಶಾಲೆ, ಆಸ್ಪತ್ರೆ, ಆಟದ ಮೈದಾನ, ಗ್ರಂಥಾಲಯ ಇಂಥವುಗಳನ್ನು ಒದಗಿಸುವುದಕ್ಕೆ ಪ್ರಾಮುಖ್ಯ ಸಿಗಬೇಕು. ಆದರೆ ನಮ್ಮಲ್ಲಿ ರಸ್ತೆ ನಿರ್ಮಿಸುವುದೊಂದೇ ಮೂಲ ಸೌಕರ್ಯ ಎಂಬಂತಾಗಿದೆ. ಮೂಲಸೌಕರ್ಯ ವೃದ್ಧಿಯ ಜೊತೆಗೆ ಸಮುದಾಯದ ಉತ್ಪಾದಕ ಸಾಮರ್ಥ್ಯವೂ ವೃದ್ಧಿಯಾಗಬೇಕು. ಶೈಕ್ಷಣಿಕವಾಗಿ, ಆರ್ಥಿಕವಾಗಿ ಒಂದು ಸಮುದಾಯದ ಸಬಲೀಕರಣವನ್ನೂ ಅದು ಒಳಗೊಂಡಿರಬೇಕು.

ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆ ಏನು ಎಂಬುದನ್ನು ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸಮುದಾಯಕ್ಕೆ ಅರ್ಥ ಮಾಡಿಸುವ ಕೆಲಸ ಹಿಂದೆಂದಿಗಿಂತ ಇಂದು ಜರೂರಾಗಿ ಆಗಬೇಕಿದೆ.

ಲೇಖಕ: ಸಾಮಾಜಿಕ ಕಾರ್ಯಕರ್ತ, ಧಾರವಾಡ

ವಾಚಕರ ವಾಣಿ

ಇರಲೂಬಹುದು...!

'ದೆಹಲಿಯಲ್ಲಿ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿಸಲು ನಿರ್ಬಂಧ (ಪ್ರ.ವಾ., ಅ. 20). ಹೌದು, ಈಗಾಗಲೇ ಅಲ್ಲಿ ಎಎಪಿ, ಬಿಜೆಪಿ ನೇತಾರರು, ಲೆಫ್ಟಿನೆಂಟ್ ಗವರ್ನರ್ ಅವರ 'ಬಾಯಿ ಪಟಾಕಿ'ಗಳು ಹಲ ದಿನಗಳಿಂದ ಸಿಡಿಯುತ್ತಿವೆ! (ಹಬ್ಬ ಇರದಿದ್ದರೂ) ಅವುಗಳ ಶಬ್ದದ ತೀವ್ರತೆ ದೇಶದ ಎಲ್ಲೆಡೆ ಕೇಳಿಸುತ್ತಿದೆ. ಆದ್ದರಿಂದ ಇರಲೂಬಹುದು ದೀಪಾವಳಿ ಪಟಾಕಿಗೆ ನಿರ್ಬಂಧ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ರಾಜಕೀಯ ತಂತ್ರಗಾರಿಕೆ ಏನೇ ಇದ್ದರೂ...

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ನಿರೀಕ್ಷಿಸಿದಂತೆಯೇ ಆಯ್ಕೆಯಾಗಿದ್ದಾರೆ. ಪಕ್ಷನಿಷ್ಠೆಗೆ ಹೆಸರಾದವರು. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಸಚಿವರಾಗಿ ಬೇರೆ ಬೇರೆ ಖಾತೆಗಳನ್ನು ದಕ್ಷತೆಯಿಂದ ನಿಭಾಯಿಸಿದ್ದಾರೆ. ನೆಹರೂ–ಗಾಂಧಿ ಕುಟುಂಬಕ್ಕೆ ನಿಷ್ಠರಾಗಿದ್ದರೂ ಮುಖ್ಯಮಂತ್ರಿ ಸ್ಥಾನ ಮಾತ್ರ ಹಲವು ಸಲ ಕೈಬಿಟ್ಟು ಹೋದದ್ದು ವಿಪರ್ಯಾಸ.

ಪರಿಶಿಷ್ಟ ಜಾತಿಯ ವೋಟುಗಳ ಮೇಲೆ ಕಣ್ಣಿಟ್ಟು ಖರ್ಗೆ ಅವರನ್ನು ಪಕ್ಷದ ಅಧ್ಯಕ್ಷ ಗಾದಿಗೆ ತರಲಾಗಿದೆ ಎಂಬ ಟೀಕೆಗಳಿವೆ. ರಾಜಕೀಯ ತಂತ್ರಗಾರಿಕೆ ಏನೇ ಇರಬಹುದು. ಖರ್ಗೆ ಅವರ ಆಯ್ಕೆಯು ಪಕ್ಷದ ಬಲವರ್ಧನೆಗೆ ನೆರವಾಗಲಿ. ದೇಶಕ್ಕೆ ಸದೃಢ ವಿರೋಧ ಪಕ್ಷದ ಅಗತ್ಯ ಇದೆ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಆ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡುವರೇ?

ಸಹಶಿಕ್ಷಕರ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ 38 ಸಹಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ಬಂಧಿಸಿರುವ ಸುದ್ದಿ (ಪ್ರ.ವಾ., ಅ. 20) ಓದಿ ವಿಷಾದವೆನಿಸಿತು. ಹೇಳಿಕೇಳಿ ಶಿಕ್ಷಕ ಹುದ್ದೆ. ಅದರಲ್ಲೂ ಅಕ್ರಮವೆಸಗಿ ಮೇಷ್ಟ್ರು, ಮೇಡಮ್ಮು ಆಗಿ ಒಂದು ಸಮಾಜ ಕಟ್ಟುತ್ತೇವೆಂದು ಹೊರಡುವ ಇಂತಹ ಶಿಕ್ಷಕರಿಂದ ಸಮಾಜ ಏನು ನಿರೀಕ್ಷೆ ಮಾಡಲು ಸಾಧ್ಯ?

ಕೆಲವು ಶಿಕ್ಷಕರು ತಮ್ಮ ದುಡಿಮೆಯ ಹಣದಲ್ಲಿ ಒಂದಿಷ್ಟು ಭಾಗವನ್ನು ಶಾಲೆಯ ಅಭಿವೃದ್ಧಿಗೆ ಹಾಕಿ, ವಿದ್ಯಾರ್ಥಿಗಳ ಒಳಿತಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಹೀಗಿರುವಾಗ ಅಕ್ರಮದ ದಾರಿಯಿಂದ ಬಂದ ವ್ಯಕ್ತಿಗಳಿಂದ ಅಕ್ಷರ ಕಲಿತ ಮಕ್ಕಳು ಸಾಧಿಸುವುದಾದರೂ ಏನು? ಕಾಯಾ ವಾಚಾ ಮನಸಾ ಕಲಿಸಿದಾಗ, ತೊಡಗಿಸಿಕೊಂಡಾಗ ಕಿಂಚಿತ್ ಕಲಿಕೆ ಸಾಧ್ಯ. ಬಂಧನಕ್ಕೆ ಒಳಗಾಗಿರುವ ಶಿಕ್ಷಕರು ಮಕ್ಕಳ ದೃಷ್ಟಿಯಲ್ಲಿ ಏನಾಗುತ್ತಾರೆ? ಆ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಧೈರ್ಯ ಇವರಿಗೆ ಇದೆಯೇ?

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಗ್ರಾಮೀಣ ಆಟ: ಆಯೋಜನೆಯಾಗಲಿ ಕ್ರೀಡಾಕೂಟ

ಜನಪದರಿಂದ ಪರಂಪರಾನುಗತವಾಗಿ ಬಳುವಳಿಯಾಗಿ ಬಂದಿರುವ ಗ್ರಾಮೀಣ ಆಟಗಳಲ್ಲಿ ಕೆಲವು ವಿನಾಶದ ಅಂಚಿಗೆ ತಲುಪುತ್ತಿವೆ. ಮಕ್ಕಳು ಈಗ ಮೊಬೈಲ್ ಗೇಮ್ ಮತ್ತು ಟಿ.ವಿ ವೀಕ್ಷಣೆಯ ಗೀಳಿಗೆ ಬಿದ್ದಿದ್ದಾರೆ. ಅವರನ್ನು ಅಲ್ಲಿಂದ ಹೊರಗೆ ತರಲು ಈ ಬಗೆಯ ಆಟಗಳು ಖಂಡಿತ ನೆರವಾಗಬಲ್ಲವು. ಈ ಆಟಗಳು ನಿಸ್ಸಂದೇಹವಾಗಿ ಈಗಿನ ಮಕ್ಕಳಿಗೆ ಮುದ ನೀಡುತ್ತವೆ. ಮರೆಗೆ ಸರಿದಿರುವ ಈ ಆಟಗಳನ್ನು ಮತ್ತೆ ಸಚೇತನಗೊಳಿಸಿದರೆ ಗ್ರಾಮೀಣ ಆಟಗಳನ್ನು ಉಳಿಸಿಕೊಂಡಂತೆಯೂ ಆಗುತ್ತದೆ.

ಆದರೆ ಈ ಆಟಗಳಿಗೆ ಕಾಯಕಲ್ಪ ನೀಡುವ ಕೆಲಸ ಆಗಬೇಕು. ಇಂತಹ ಆಟಗಳಿಗಾಗಿಯೇ ಪ್ರತ್ಯೇಕ ಕ್ರೀಡಾಕೂಟ ಆಯೋಜಿಸುವ ದಿಸೆಯಲ್ಲಿ ಸರ್ಕಾರ ಯೋಚಿಸಬೇಕು.

ವಿಜಯ್ ರಾಂಪುರ, ಚನ್ನಪಟ್ಟಣ

ಮತ್ತೊಂದು ಪಕ್ಷದ ಉಸಾಬರಿ ಏಕೆ?

'ಪಕ್ಷ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಕೊಟ್ಟಿದ್ದರೆ ನಾವೂ ಒಪ್ಪಿಕೊಳ್ಳುತ್ತಿದ್ದೆವು. ಇಂಥ ಸ್ಥಿತಿಯಲ್ಲಿ ನಾವು ಒಪ್ಪಿಕೊಳ್ಳುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಅದು, ಇನ್ನೊಂದು ಪಕ್ಷಕ್ಕೆ ಸಂಬಂಧಿಸಿದ ವಿಚಾರ. ಇವರಿಗೆ ಆ ಉಸಾಬರಿ ಏಕೆ!? ಇವರು ಒಪ್ಪಿದರೆಷ್ಟು, ಬಿಟ್ಟರೆಷ್ಟು?

ವಿರೋಧ ಪಕ್ಷದ ಒಂದು ಉನ್ನತ ಸ್ಥಾನವು ಕರ್ನಾಟಕದ ಒಬ್ಬ ನಾಯಕನಿಗೆ ಸಿಕ್ಕಿದಾಗ, ಮುಖ್ಯಮಂತ್ರಿಯಾಗಿ ಔಪಚಾರಿಕವಾಗಿ ಅವರನ್ನು ಅಭಿನಂದಿಸುವುದು ಇವರ ಘನತೆ, ಗೌರವವನ್ನು ಹೆಚ್ಚಿಸುವ ವಿಷಯ. ಆ ಕೆಲಸವನ್ನು ಈ ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿ ಮಾಡಿದ್ದಾರೆ. ಬೊಮ್ಮಾಯಿ ಅವರಿಗೆ ಆ ರೀತಿ ಮಾಡುವುದು ಅಪಥ್ಯವೆನಿಸಿದ್ದರೆ ಸುಮ್ಮನಿದ್ದು ಬಿಡಬಹುದಿತ್ತು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ನೀರಿಗಿಳಿಯುವ ಸಲ್ಲದ ಸಾಹಸ

ಇತ್ತೀಚೆಗೆ ಸುರಿದ, ಸುರಿಯುತ್ತಿರುವ ಭಾರಿ ಮಳೆಯಿಂದ ಅಪಾರ ಪ್ರಮಾಣದ ಬೆಳೆ ನಷ್ಟ, ಪಶುಪಕ್ಷಿ, ಮಾನವ ಜೀವಹಾನಿ ಆಗಿರುವುದು ದುಃಖಕರ. ಈಗ ಬಹುತೇಕ ಊರುಗಳ ಕೆರೆ, ಕಟ್ಟೆಗಳು, ಹಳ್ಳಗಳು ಮೈದುಂಬಿ ಹರಿದು ರಸ್ತೆಯ ಮೇಲೆಲ್ಲ ನೀರು ಹರಿಯುತ್ತಿದೆ. ಆದರೂ ಕೆಲ ದ್ವಿಚಕ್ರ ವಾಹನ ಸವಾರರು, ಖಾಸಗಿ ಬಸ್‌ಗಳ ಚಾಲಕರು ಅಪಾಯದ ಸಂಭವ ಗೊತ್ತಿದ್ದೂ ನೀರಿಗಿಳಿಯುವ ದುಸ್ಸಾಹಸ ಮಾಡಿದ ಚಿತ್ರಗಳನ್ನು ಪತ್ರಿಕೆಗಳಲ್ಲಿ ದಿನನಿತ್ಯ ಕಾಣಬಹುದು. ನೀರಿನ ಸೆಳೆತ ಕೆಲವೊಮ್ಮೆ ಎಂಥವರಿಗೂ ಎಟುಕದು. ವಿನಾಕಾರಣ ಅಪಾಯಕ್ಕೆ ಒಡ್ಡಿಕೊಳ್ಳುವುದು ವಿವೇಕಯುತ ನಡೆಯಲ್ಲ.

ಆರ್.ಟಿ.ವೆಂಕಟೇಶ್ ಬಾಬು, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಿಜೆಪಿ, ಕಾಂಗ್ರೆಸ್ ನಾಯಕರಿಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್. ಡಿ. ದೇವೇಗೌಡ ಪಂಥಾಹ್ವಾನ

‘ಮೀಸಲಾತಿ: ಬಹಿರಂಗ ಚರ್ಚೆಗೆ ಬರಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೀಸಲಾತಿ ಬಗ್ಗೆ ಮಾತನಾಡುವ ಕಾಂಗ್ರೆಸ್ ಮತ್ತು ಬಿಜೆಪಿಯ ನಾಯಕರು ಬಹಿರಂಗ ಚರ್ಚೆಗೆ ಬರಲಿ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಪಂಥಾಹ್ವಾನ ನೀಡಿದರು.

ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಹೊರವಲಯದ ರೆಸಾರ್ಟ್‌ನಲ್ಲಿ ಪಕ್ಷದ ಟಿಕೆಟ್ ಆಕಾಂಕ್ಷಿಗಳಿಗೆ ಗುರುವಾರ ಆಯೋಜಿಸಿದ್ದ ಸಮಾಲೋಚನಾ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಪ್ರತಿ ವರ್ಗವನ್ನೂ ಗುರುತಿಸಿದ ವ್ಯಕ್ತಿ ಇದ್ದರೆ ಅದು ನಾನು. ಇದು ಅಹಂಕಾರವಲ್ಲ. ಸತ್ಯ ಹೇಳಲು ಯಾರ ಮುಂದೆ ಬೇಕಾದರೂ ನಿಲ್ಲಬಲ್ಲೆ. ಯಾವ ಆತಂಕವೂ ನನಗಿಲ್ಲ. ಮುಸ್ಲಿಮರಿಗೆ ಮೀಸಲಾತಿ ಕೊಟ್ಟವರು ಕಾಂಗ್ರೆಸ್ಸೋ, ಬಿಜೆಪಿಯೋ? ಶಕ್ತಿ ಇದ್ದರೆ ಮುಂದೆ ಬರಲಿ. ಎಲ್ಲೇ ವೇದಿಕೆ ಸಿದ್ಧಪಡಿಸಿದರೂ ಬರುತ್ತೇನೆ’ ಎಂದು ಗುಡುಗಿದರು.

‘ಹೆಣ್ಣುಮಕ್ಕಳಿಗೆ ಮೀಸಲಾತಿಯನ್ನು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಕೊಡಲಿಲ್ಲ. ರಾಜ್ಯದಲ್ಲಿ ಮೊದಲಿಗೆ ಮೀಸಲಾತಿ ವ್ಯವಸ್ಥೆ ಮಾಡಿದವರು ಯಾರು? ನನಗಿನ್ನೂ ಜ್ಞಾಪಕ ಶಕ್ತಿ ಇದೆ. ನಾವಿದ್ದೇವೆ; ಹೆದರಬೇಡಿ. 2023ರವರೆಗೆ ಕೈಜೋಡಿಸಿ ಹೋರಾಡುತ್ತೇನೆ’ ಎಂದು ಮುಖಂಡರಿಗೆ ಧೈರ್ಯ ತುಂಬಿದರು.

‘ಕುಮಾರಸ್ವಾಮಿ 10 ವರ್ಷಗಳಲ್ಲಿ ಮಾಡಿರುವ ಕೆಲಸಗಳು, ನೀಡಿರುವ ಕೊಡುಗೆಗಳ ಬಗ್ಗೆ ಮಾತನಾಡಲು ಬಹಳ ಇದೆ. ಈಗ, ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವುದು ಅತ್ಯಂತ ಅವಶ್ಯವಾಗಿದೆ. ಪ್ರತಿಯೊಬ್ಬರ ಶಕ್ತಿಯನ್ನೂ ಬಳಸಿಕೊಳ್ಳಬೇಕು’ ಎಂದರು.

‘ನನ್ನ ಹೋರಾಟ ನಿಲ್ಲಿಸುವುದಿಲ್ಲ. 2023ರ ಚುನಾವಣೆಯಲ್ಲಿ ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡಬೇಕು ಎಂಬುದಷ್ಟೇ ಉದ್ದೇಶವಲ್ಲ. ಎಲ್ಲ ಶಕ್ತಿಯನ್ನೂ ಒಗ್ಗೂಡಿಸಿಕೊಂಡು ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕಾಗಿ ಹೋರಾಟದ ಸಂಕಲ್ಪ ಮಾಡಬೇಕು. ಪಕ್ಷಕ್ಕೆ ಶಕ್ತಿ ಇಲ್ಲ ಎಂಬ ಮನೋಭಾವ ಅನೇಕರಲ್ಲಿದೆ. ಹಾಗೆಂದು ಭಾವಿಸಬೇಡಿ. ಜೆಡಿಎಸ್ ಮುಳುಗೇ ಹೋಯಿತು ಎನ್ನುವವರಿದ್ದಾರೆ. ಅವರಿಗೆ ಹೇಗೆ ಉತ್ತರಿಸಬೇಕೆಂದು ಗೊತ್ತಿದೆ. ಅಪಪ್ರಚಾರವನ್ನು ನಿಲ್ಲಿಸಿ. ಪಕ್ಷ ಉಳಿಯಬೇಕೆನ್ನುವುದು ನನ್ನ ಆಶಯ, ದೇವರ ಇಚ್ಛೆಯೂ ಹೌದು’ ಎಂದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ‘ನೀವು ಆರಾಮವಾಗಿ ಇದ್ದರೆ ಸಾಕು. ನಾವೆಲ್ಲರೂ ಪ್ರಾಣ ಕೊಟ್ಟು ಹೋರಾಡಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ಆತಂಕ ಪಡಬೇಡಿ. ಕುಮಾರಸ್ವಾಮಿ ಎರಡೂ ಪಕ್ಷಗಳನ್ನೂ ಎದುರು ಹಾಕಿಕೊಂಡು ಹೋರಾಡುತ್ತಿದ್ದಾರೆ. ನಮ್ಮನ್ನು ನೀವು ಆಶೀರ್ವದಿಸಬೇಕು’ ಎಂದು ದೇವೇಗೌಡರನ್ನು ಉದ್ದೇಶಿಸಿ ಹೇಳಿದರು.



ಮೈಸೂರಿನಲ್ಲಿ ಗುರುವಾರ ನಡೆದ ಜೆಡಿಎಸ್ ಟಿಕೆಟ್ ಆಕಾಂಕ್ಷಿಗಳ ಸಮಾಲೋಚನಾ ಕಾರ್ಯಾಗಾರದ 2ನೇ ದಿನದ ಕಾರ್ಯಕ್ರಮವನ್ನು ಪಕ್ಷದ ವರಿಷ್ಠ ಎಚ್‌.ಡಿ.ದೇವೇಗೌಡ ಉದ್ಘಾಟಿಸಿದರು. ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಇದ್ದಾರೆ

ಶಿವಲಿಂಗೇಗೌಡ ಗೈರು

ಮೈಸೂರು: ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಹಾಸನ ಜಿಲ್ಲೆ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿಲ್ಲ.

‘ಸ್ಥಳೀಯ ಸಮಸ್ಯೆಗಳಿಂದ ಅವರು ಬಂದಿಲ್ಲ. ಜೊತೆಯಲ್ಲೇ ಇರುತ್ತೇನೆಂದಿದ್ದಾರೆ. ಇರುವುದು–ಬಿಡುವುದು ಅವರ ವೈಯಕ್ತಿಕ ನಿರ್ಧಾರ’ ಎಂದು ಎಚ್‌.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

‘ದುಡುಕಿ ನಿರ್ಧರಿಸಬೇಡಿ ಎಂದು ಶಿವಲಿಂಗೇಗೌಡರಿಗೆ ಹೇಳಿದ್ದೇನೆ. ಅಷ್ಟೂ ಮೀರಿ ಹೊಸ ರಾಜಕೀಯ ಬೆಳವಣಿಗೆಯಾಗಿ ಬೇರೆಯವರ ಮಾತಿಗೆ ಬೆಲೆ ಕೊಟ್ಟರೆ ನಾನೇನು ಮಾಡಲು ಸಾಧ್ಯ?’ ಎಂದು ಎಚ್‌.ಡಿ.ದೇವೇಗೌಡ ಹೇಳಿದರು.

‘126ರಲ್ಲಿ ನಿಖಿಲ್ ಹೆಸರು ಕೂಡ ಇರಬಹುದು’

‘ನ.1ರಂದು ಬಿಡುಗಡೆ ಮಾಡಲಿರುವ ಜೆಡಿಎಸ್‌ನ 126 ಅಭ್ಯರ್ಥಿಗಳ ಪಟ್ಟಿಯಲ್ಲಿ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೆಸರೂ ಇರಬಹುದು’ ಎಂದ ಕುಮಾರಸ್ವಾಮಿ, ಚುನಾವಣೆಯಲ್ಲಿ ಪುತ್ರ ಸ್ಪರ್ಧಿಸುವ ಬಗ್ಗೆ ಸುಳಿವು ನೀಡಿದರು.

‘ಕೆಸರೆರಚಾಟದಲ್ಲಿ ತೊಡಗಿರುವ ಕಾಂಗ್ರೆಸ್–ಬಿಜೆಪಿಯವರು, ಮೈತ್ರಿ ಅನಿವಾರ್ಯವಾದರೆ ಅನುಕೂಲವಾಗುತ್ತದೆಂದು ಪಕ್ಷವನ್ನು ಟೀಕಿಸುತ್ತಿಲ್ಲ’ ಎಂದರು.

ಇದಕ್ಕೂ ಮುನ್ನ, ಕುಟುಂಬದವರು ಹಾಗೂ ಟಿಕೆಟ್ ಆಕಾಂಕ್ಷಿಗಳ ಜೊತೆ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಗುರುವಾರ ವಿಶೇಷ ಪೂಜೆ ಸಲ್ಲಿಸಿದರು.

ಗೌಡರು ಪ್ರಚಾರಕ್ಕೆ ಸಿದ್ಧವಾಗುತ್ತಿದ್ದಾರೆ: ಎಚ್‌ಡಿಕೆ

‘2023ರ ಚುನಾವಣಾ ಪ್ರಚಾರಕ್ಕೆ ಹೋಗಲು ವಾಹನ ಸಿದ್ಧವಾಗಿದೆಯಾ? ಸಂಚಾರಕ್ಕೆ ತೊಂದರೆಯಾಗದಂತೆ ಸುಸಜ್ಜಿತ ವ್ಯವಸ್ಥೆಯಾಗಬೇಕೆಂದು ದೇವೇಗೌಡರು ವಿಚಾರಿಸುತ್ತಿರುತ್ತಾರೆ. ಇದು ಅವರ ಉತ್ಸಾಹವನ್ನು ತೋರಿಸುತ್ತದೆ’ ಎಂದು ಎಚ್‌.ಡಿ.ಕುಮಾರಸ್ವಾಮಿ ತಿಳಿಸಿದರು.

‘ಉತ್ತರ ಕರ್ನಾಟಕದಲ್ಲಿ ಪಕ್ಷಕ್ಕೆ ಅಸ್ತಿತ್ವವಿಲ್ಲ ಎಂದು ಕೆಲವರು ಹೇಳುತ್ತಾರೆ. ಈ ಬಾರಿ 35ರಿಂದ 40 ಮಂದಿ ಅಲ್ಲಿನವರೇ ಆಯ್ಕೆಯಾಗಲಿದ್ದಾರೆ’ ಎಂದರು.

ಜೆಡಿಎಸ್‌ನಲ್ಲೇ ಉಳಿಯುವೆ: ಜಿ.ಟಿ.ದೇವೇಗೌಡ

ಮೈಸೂರು: ಮೂರು ವರ್ಷಗಳಿಂದಲೂ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಮನವೊಲಿಸುವಲ್ಲಿ ಎಚ್‌.ಡಿ.ದೇವೇಗೌಡ ಯಶಸ್ವಿಯಾದರು.

ಇಲ್ಲಿನ ವಿ.ವಿ.ಮೊಹಲ್ಲಾದಲ್ಲಿರುವ ಜಿಟಿಡಿ ನಿವಾಸಕ್ಕೆ ಗುರುವಾರ ಬಂದು ಭೋಜನ ಸ್ವೀಕರಿಸಿ ಮುನಿಸು ಮರೆಯುವಂತೆ ಮಾಡಿದರು. ಈ ಭೇಟಿಯು ಭಾವುಕ ಕ್ಷಣಗಳಿಗೂ ಸಾಕ್ಷಿಯಾಯಿತು.

‘ನಾನು ಜೆಡಿಎಸ್ ಬಿಡುವುದಿಲ್ಲ.ಇಲ್ಲೇ ಇರುತ್ತೇನೆ’ ಎಂದು ಘೋಷಿಸುವ ಮೂಲಕ ಜಿ.ಟಿ.ದೇವೇಗೌಡ ಅವರು ಹಲವು ದಿನಗಳ ಉಹಾಪೋಹಗಳಿಗೆ ತೆರೆ ಎಳೆದರು.

ಟೋಲ್‌ಗೇಟ್ ಪ್ರತಿಭಟನೆ: ಹೋರಾಟ ಸಮಿತಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ವಿರುದ್ಧ ಟೋಲ್‌ಗೇಟ್ ವ್ಯವಸ್ಥಾಪಕ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಪ್ರತ್ಯೇಕ ದೂರು ನೀಡಿದ್ದು, ಸುರತ್ಕಲ್ ಠಾಣೆಯಲ್ಲಿ ಎರಡು ಎಫ್‌ಐಆರ್ ದಾಖಲಾಗಿವೆ.

‘ಅ.18ರಂದು ಹೋರಾಟ ಸಮಿತಿಯ 30ಕ್ಕಿಂತ ಹೆಚ್ಚು ಸದಸ್ಯರು ಅಕ್ರಮ ಕೂಟ ಸೇರಿ ಸುರತ್ಕಲ್ ಟೋಲ್ ಪ್ಲಾಜಾ ಎದುರು ರಸ್ತೆಯಲ್ಲಿ ಕುಳಿತು ಘೋಷಣೆ ಕೂಗುತ್ತ, ವಾಹನ ಸಂಚಾರ ತಡೆದು ನಿಲ್ಲಿಸಿದರು. ಸುಗಮ ಸಂಚಾರಕ್ಕೆ ಅಡ್ಡಿ ಪಡಿಸಿದರು‘ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯವರು ಎಸಿಪಿ ಕಚೇರಿಯಲ್ಲಿ ಅ.14ರಂದು ನಡೆದ ಸಭೆಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದರೂ, ಅ.18 ರಂದು ನಡೆಸಿದ ಪ್ರತಿಭಟನೆಯ ವೇಳೆ ವಾಹನ ಸಂಚಾರಕ್ಕೆ ಅಡ್ಡಿ ಮಾಡಿದ್ದಾರೆ’ ಎಂದು ದೂರಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಲಿಂಗೇಗೌಡ ಹಾಗೂ ಸುರತ್ಕಲ್ ಎನ್‌ಐಟಿಕೆ ಟೋಲ್‌ನ ಶುಲ್ಕ ವಸೂಲಿ ಏಜೆನ್ಸಿ ನೂರ್ ಮೊಹಮ್ಮದ್ ಸಂಸ್ಥೆಯ ಸುರತ್ಕಲ್ ವಿಭಾಗದ ವ್ಯವಸ್ಥಾಪಕ ಶಿಶುಪಾಲ್ ಸಿಂಗ್ ಅವರು ಅ.18ರಂದೇ ದೂರು ನೀಡಿದ್ದು, ಪೊಲೀಸರು ಅದೇ ದಿನ ಎಫ್‌ಐಆರ್ ದಾಖಲಿಸಿದ್ದಾರೆ.

ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 143, 147, 341, 283, 149 (ಅಕ್ರಮ ಕೂಟ ಸೇರಿ, ಸಾರ್ವಜನಿಕರ ಸುರಕ್ಷತೆಗೆ ಅಡ್ಡಿಪಡಿಸಿದ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ.

ಸುರತ್ಕಲ್ ಟೋಲ್ ಗೇಟ್ ತೆರವುಗೊಳಿಸಬೇಕು ಎಂದು ಹೋರಾಟ ಗಾರರು ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ್ದರು.

ನ. 1ರಂದು ಪುನೀತ್‌ಗೆ ಮರಣೋತ್ತರ ‘ಕರ್ನಾಟಕ ರತ್ನ’ ಪ್ರದಾನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ನ. 1ರಂದು ‘ಕರ್ನಾಟಕ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಈ ಬಗ್ಗೆ ಪುನೀತ್ ರಾಜ್‌ಕುಮಾರ್ ಕುಟುಂಬದ ಸದಸ್ಯರು ಮತ್ತು ಸಂಪುಟ ಸಹೋದ್ಯೋಗಿಗಳ ಜೊತೆ ಗುರುವಾರ ಚರ್ಚಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, ‘ವಿಧಾನಸೌಧದ ಮೆಟ್ಟಿಲುಗಳ ಮೇಲೆ ಅಂದು ಸಂಜೆ 4 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ’ ಎಂದರು.

‘ಈವರೆಗೆ ಎಂಟು ಜನರಿಗೆ ‘ಕರ್ನಾಟಕ ರತ್ನ’ ಪ್ರಶಸ್ತಿ ನೀಡಲಾಗಿದೆ. 2009ರ ನಂತರ ಮೊದಲ ಬಾರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಕನ್ನಡ ಚಿತ್ರರಂಗ, ಭಾಷೆ, ಸಂಸ್ಕೃತಿಗೆ ಪುನೀತ್ ರಾಜ್‌ಕುಮಾರ್ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ದೊಡ್ಡ ಸಾಧನೆ ಮಾಡಿ ಎಲ್ಲರ ಮನದಾಳದಲ್ಲಿ ಚಿರಸ್ಥಾಯಿಯಾಗಿರುವ ಪುನೀತ್, ನಿಜವಾದ ಕರ್ನಾಟಕ ರತ್ನ. ಅವರು ಯುವಜನರಿಗೆ ಸದಾಕಾಲ ಪ್ರೇರಣೆ ಆಗಿರಬೇಕು ಎಂಬ ಮಹದಾಸೆಯಿಂದ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಬಣ್ಣಿಸಿದರು.

ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮವನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಬೇಕೆಂಬ ಅಭಿಮಾನಿಗಳ ಬೇಡಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ನ. 1ರ ಬಳಿಕ ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಮೂರು ಕಾರ್ಯಕ್ರಮಗಳನ್ನು ಸುಮಾರು 10 ದಿನ ಆಯೋಜಿಸಲು ತೀರ್ಮಾನಿಸಲಾಗಿದೆ’ ಎಂದರು.

ಧರ್ಮಪುರ: ಕೊಚ್ಚಿ ಹೋದ ಇಬ್ಬರು ರೈತರು

ಐದನೇ ತರಗತಿ ಬಾಲಕಿ ಸಾವು • ಮಳೆ: ಹೆದ್ದಾರಿಗಳಿಗೆ ನುಗ್ಗಿದ ಕೆರೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರ ರಾತ್ರಿ ಭಾರಿ ಮಳೆ ಸುರಿದಿದ್ದು ಹಲವು ಕೆರೆಗಳು ಕೋಡಿ ಬಿದ್ದು, ಸೇತುವೆಗಳು ಮುಳುಗಡೆಯಾಗಿವೆ. ಕೆಲ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಮೇಲೆ ನೀರು ಹರಿದು ಸಂಚಾರ ವ್ಯತ್ಯಯವಾಗಿತ್ತು.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿಯ ದಡ್ಡಿಹಳ್ಳಿ ಕೆರೆ ಕೋಡಿ ಬಿದ್ದಿದ್ದು, ಬೈಕ್‌ನಲ್ಲಿ ಸಂಬಂಧಿ ಜೊತೆಗೆ ಶಾಲೆಗೆ ತೆರಳುತ್ತಿದ್ದ ವಿದ್ಯಾರ್ಥಿನಿ ರಂಜಿತಾ ಎಂಬುವರು ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಮೃತಪಟ್ಟಿದ್ದಾರೆ.



ರಂಜಿತಾ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಕೆರೆಯ ಕೋಡಿ ನೀರು ಹರಿದು ಹೋಗುತ್ತಿರುವ ದೊಡ್ಡ ಹಳ್ಳದಲ್ಲಿ ಕುರಿದಾಸನಹಟ್ಟಿ ಗ್ರಾಮದ ರೈತರಾದ ಲೋಕೇಶ್ (38) ಹಾಗೂ ತಿರುಮಲ (25) ಅವರು ಕೊಚ್ಚಿ ಹೋಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗೆ ನುಗ್ಗಿದ ನೀರು: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಹಳೇಹಳ್ಳಿ– ಶಿವಗಂಗಾ ಗ್ರಾಮಗಳ ಬಳಿ ರಾಷ್ಟ್ರೀಯ ಹೆದ್ದಾರಿ–13ರ ಮೇಲೆ ಅಂದಾಜು 3 ಅಡಿಯಷ್ಟು ನೀರು ನಿಂತಿತ್ತು. ತುಮಕೂರು ನಗರ ಸಮೀಪದ ಬೆಂಗಳೂರು– ಪುಣೆ ರಾಷ್ಟ್ರೀಯ ಹೆದ್ದಾರಿ 48ರ ಕೋರ ಸಮೀಪ ರಸ್ತೆಗೆ ಕೆರೆಯ ನೀರು ನುಗ್ಗಿದ ಪರಿಣಾಮ ಬೆಳಿಗ್ಗೆ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್‌ನಲ್ಲಿ ಚಿಕ್ಕಕೆರೆ ತುಂಬಿದ್ದು, ನಾರಾಯಣಪುರದ ನೂರಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)


ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	26,196	26,196
ಹಾರಂಗಿ	2,859	2,855.06	2,006	250
ಕಬಿನಿ	2,284	2,283.97	3,554	3,000
ಹೇಮಾವತಿ	2,922	2921.65	7,587	8,642
ಲಿಂಗನಮಕ್ಕಿ	1,819	1,814	2,371	6,899
ಸೂಪಾ (ಮೀ)	564	553.75	1,383	1,804
ಮಾಣಿ	595	589	189	753
ತುಂಗಭದ್ರಾ	1,633	1,633	34,355	34,724
ಮಲಪ್ರಭಾ	2,079.50	2,079.50	1,394	1,394
ಘಟಪ್ರಭಾ	2,175	2,175	2,897	2,897
ಭದ್ರಾ	186	185	1,593	2,797
ಆಲಮಟ್ಟಿ (ಮೀ)	519.60	519.60	32,168	26,833
ನಾರಾಯಣಪುರ (ಮೀ)	492.25	492.07	75,000	82,600

* ನೆಲಮಟ್ಟದಿಂದ

ದ್ವೀಪದಲ್ಲಿ ಸಿಲುಕಿದ ಕುರಿಗಾಹಿಗಳು

ಕೆ.ಆರ್.ಪೇಟೆ (ಮಂಡ್ಯ): ಹೇಮಾವತಿ ನದಿ ಪಾತ್ರದಲ್ಲಿ ಪ್ರವಾಹ ಉಂಟಾಗಿದೆ. ಅಕ್ಕಿಹೆಬ್ಬಾಳು ಮತ್ತು ಬಂಡಿಹೊಳೆ ಸಮೀಪದ ಹೊಸಪಟ್ಟಣ ದ್ವೀಪ ಮುಳುಗಡೆಯಾಗಿ ಅಲ್ಲಿ ಕುರಿ ಮೇಯಿಸಲು ತೆರಳಿದ್ದ ಕುರಿಗಾಹಿಗಳು ಗುರುವಾರ ನೀರಿನಲ್ಲಿ ಸಿಲುಕಿದ್ದಾರೆ. ಸುಮಾರು 900 ಎಕರೆಯ ದ್ವೀಪದಲ್ಲಿ ಸುಮಾರು 900 ಕುರಿಗಳೊಂದಿಗೆ 10 ಕುರಿಗಾಹಿಗಳು ಸಿಲುಕಿಕೊಂಡಿದ್ದು, ಅವರನ್ನು ರಕ್ಷಿಸುವ ಕಾರ್ಯವನ್ನು ಅಗ್ನಿಶಾಮಕ ತಂಡ ನಡೆಸಿದೆ.


ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು



ಮುಂದಿನ ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿ ಪಾಕಿಸ್ತಾನದ ಬದಲಿಗೆ ತಟಸ್ಥ ತಾಣದಲ್ಲಿ ನಡೆಯಬೇಕು ಎಂಬ ಭಾರತದ ನಿಲುವು ಸಮರ್ಥನೀಯವಾದುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 255

ವಿಶ್ವಕರ್ಮನಿಂದ ಮಂಟಪ ನಿರ್ಮಾಣ

ಹಿಮವಂತ ರಾಜಧಾನಿಯ ರಾಜಮಾರ್ಗಗಳೆಲ್ಲವನ್ನೂ ಗುಡಿಸಿ, ನೀರನ್ನು ಹಾಕಿಸಿ, ತಳಿರುತೋರಣಗಳನ್ನು ಕಟ್ಟಿಸಿದ್ದ. ಜನರೆಲ್ಲ ಸ್ವಯಂಪ್ರೇರಿತರಾಗಿ ತಮ್ಮ ಮನೆಗಳಿಗೆ ಅಲಂಕರಣ ಮಾಡಿದ್ದರು. ಅವರೆಲ್ಲ ತಮ್ಮ ಮನೆಯ ಮಗಳ ಮದುವೆ ಎಂಬಂತೆ ಪಾರ್ವತೀ ಕಲ್ಯಾಣೋತ್ಸವದಲ್ಲಿ ಸಂಭ್ರಮದಿಂದ ಪಾಲ್ಗೊಂಡಿದ್ದರು.

ಹಿಮವಂತ ಅರಮನೆಯ ರಾಜಾಂಗಣವನ್ನು ಬಾಳೆಕಂಬಗಳಿಂದ ಅಲಂಕರಿಸಿ, ಮಾವಿನೆಲೆಗಳ ತೋರಣಗಳನ್ನು ಕಟ್ಟಿಸಿದ. ಸುತ್ತಲೂ ಸುವಾಸನೆಯಾದ ಮಾಲತೀಹಾರವನ್ನು ಹಾಕಿಸಿದ. ಮಂಗಳದ್ರವ್ಯಗಳನ್ನು ನಾಲ್ಕು ಕಡೆಗಳಲ್ಲೂ ಇರಿಸಿದ. ಮಹಾಮಹಿಮನಾದ ಗರ್ಗಮುನಿಯ ಸಮ್ಮುಖದಲ್ಲಿ ವಿವಾಹಯೋಗ್ಯವಾದ ಮಂಗಳಕಾರ್ಯಗಳನ್ನು ಆಯೋಜಿಸಿದ. ದೇವಶಿಲ್ಪಿ ವಿಶ್ವಕರ್ಮನ ಮೂಲಕ ವಿಸ್ತಾರವಾದ ಮಂಡಪವನ್ನು ಕಟ್ಟಿಸಿದ. ಅದರಲ್ಲಿ ಮನೋಹರವಾದ ವೇದಿಕೆಯನ್ನು ನಿರ್ಮಿಸಿದ.


ವಿಶ್ವಕರ್ಮ ನಿಮಿಸಿದ ವಿವಾಹಮಂಡಪವು ಹತ್ತುಸಾವಿರಯೋಜನದಷ್ಟು ವಿಸ್ತಾರವಾಗಿತ್ತು. ಅಲ್ಲಿರಿಸಿದ್ದ ಸ್ಥಾವರ ಮತ್ತು ಜಂಗಮ ವಸ್ತುಗಳು ಒಂದಕ್ಕಿಂತ ಒಂದು ಸುಂದರವಾಗಿದ್ದವು. ಜಲ ಯಾವುದು? ನೆಲ ಯಾವುದು? ಎಂಬುದು ತಕ್ಷಣ ತಿಳಿಯಲಾರದಷ್ಟು ನೆಲಾಂಗಣವನ್ನು ವಿಶ್ವಕರ್ಮ ಚಮತ್ಕಾರವಾಗಿ ರಚಿಸಿದ್ದ. ಮಂಟಪದಲ್ಲಿ ಒಂದು ಕಡೆ ಸುಂದರವಾದ ಸಿಂಹವನ್ನೂ ಹಂಸಪಕ್ಷಿಗಳನ್ನೂ ನವಿಲುಗಳನ್ನೂ ನಿರ್ಮಿಸಿದ್ದರೆ; ಮತ್ತೊಂದು ಕಡೆ ಸ್ತ್ರೀಯರು ಪುರುಷರೊಡನೆ ಸೇರಿ ನರ್ತಿಸುವಂತಿರುವ ಬೊಂಬೆಗಳನ್ನು ನಿರ್ಮಿಸಿದ್ದ. ದ್ವಾರಪಾಲಕರನ್ನು ಸುಂದರವಾಗಿ ನಿರ್ಮಿಸಿ, ಅವರ ಕೈಗಳಿಗೆ ಬಿಲ್ಲುಕೊಟ್ಟು ಜೀವಂತವಿರುವವರಂತೆ ಮಾಡಿದ್ದ.

ಮಹಾದ್ವಾರದ ಮಧ್ಯೆ ಮಹಾಲಕ್ಷ್ಮಿಯನ್ನು ನಿರ್ಮಿಸಿದ್ದ. ಅದು ಕ್ಷೀರಸಮುದ್ರದಿಂದ ಎದ್ದುಬಂದ ಸಾಕ್ಷಾತ್ ಲಕ್ಷ್ಮಿಯಂತಿತ್ತು. ಮಂಟಪದ ಮಹಾದ್ವಾರದಲ್ಲಿ ಶುದ್ಧ ಸ್ಫಟಿಕದಿಂದ ನಂದಿಯ ಮೂರ್ತಿಯನ್ನು ನಿರ್ಮಿಸಿದ್ದ. ಅದು ನಿಜವಾದ ನಂದಿಯಂತೆ ತೋರುತ್ತಿತ್ತು. ನಂದಿಯ ಮೇಲೆ ರತ್ನಮಯವಾದ ದಿವ್ಯಪುಷ್ಪಕ ವಿಮಾನವನ್ನು ನಿರ್ಮಿಸಿದ್ದ. ಅದು ಶುಭ್ರವಾದ ಚಿಗುರುಗಳಿಂದಲೂ ಚಾಮರಗಳಿಂದಲೂ ಶೋಭಿಸುತ್ತಿತ್ತು.

ಎಡಗಡೆಯಲ್ಲಿ ಶುದ್ಧ ಸ್ಫಟಿಕದ ವರ್ಣವುಳ್ಳ ಎರಡು ಆನೆಗಳನ್ನು ನಿರ್ಮಿಸಿದ್ದ. ಅವುಗಳಿಗೆ ನಾಲ್ಕು ದಂತಗಳಿದ್ದವು. ಅವು ಪರಸ್ಪರ ಕಾಳಗವಾಡುವಂತೆ ಸೊಂಡಿಲುಗಳನ್ನು ಬೆಸೆದುಕೊಂಡಿದ್ದವು. ಅದರ ಜೊತೆ ಸೂರ್ಯನಂತೆ ತೇಜಸ್ವಿಗಳಾದ ಎರಡು ಕುದುರೆಗಳನ್ನು ನಿರ್ಮಿಸಿದ್ದ. ಅವು ಚಾಮರಗಳಿಂದ ಮತ್ತು ದಿವ್ಯಾಭರಣಗಳಿಂದ ಅಲಂಕರಿಸಲ್ಪಟ್ಟಿದ್ದವು. ಲೋಕಪಾಲಕ ದೇವತೆಗಳ ಮೂರ್ತಿಗಳನ್ನು ರತ್ನಗಳಿಂದಲಂಕರಿಸಿದ್ದ. ಅಲ್ಲದೆ, ಋಷಿಗಳ, ಸಿದ್ಧರ ಮೂರ್ತಿಗಳನ್ನು ಸಹ ನಿರ್ಮಿಸಿದ್ದ. ಗರುಡನ ಮೇಲೆ ಕುಳಿತ ವಿಷ್ಣು, ವೇದಸೂಕ್ತಗಳೊಂದಿಗೆ ಬ್ರಹ್ಮ, ಐರಾವತದ ಮೇಲೆ ಕುಳಿತಿರುವ ಇಂದ್ರ, ಅವನ ಸುತ್ತಲೂ ದೇವಸಮೂಹವೇ ಇರುವಂತೆ ವಿವಾಹಮಂಟಪದಲ್ಲಿ ನಿರ್ಮಿಸಿದ್ದ.

ದೇವತೆಗಳ ವಾಸಕ್ಕಾಗಿ ದೇವಲೋಕವನ್ನೇ ಸೃಷ್ಟಿಸಿದ. ಶಂಕರನ ವರದಿಂದಲೇ ಶಿಲ್ಪಕಲೆಯಲ್ಲಿ ಚತುರನಾದ ವಿಶ್ವಕರ್ಮ, ಶಿವನ ಪ್ರೀತಿಗಾಗಿ ಶಿವಗೃಹವನ್ನು ಕೈಲಾಸದಲ್ಲಿರುವಂತೆಯೇ ನಿರ್ಮಿಸಿದ. ಏಳು ಕಕ್ಷೆಗಳಿರುವಂತಹ ಸತ್ಯಲೋಕವನ್ನು ಬ್ರಹ್ಮನ ವಾಸಕ್ಕಾಗಿ, ಮಹೋಜ್ವಲವಾದ ವೈಕುಂಠಲೋಕವನ್ನು ವಿಷ್ಣುವಾಸಕ್ಕಾಗಿ, ಅಮರಾವತಿಯಂತಿರುವ ಮನೆಯನ್ನು ದೇವೇಂದ್ರನಿಗಾಗಿ ನಿರ್ಮಿಸಿದ. ಹೀಗೆ ಲೋಕಪಾಲ ದೇವತೆಗಳೆಲ್ಲರ ವಾಸಕ್ಕಾಗಿ ಅತ್ಯಾಕರ್ಷಕವಾದ ಮತ್ತು ಸಕಲೈಶ್ವರ್ಯಗಳಿಂದ ಕೂಡಿದ ಮನೆಗಳನ್ನು ನಿರ್ಮಿಸಿದ. ಹೀಗೆ ಹರನಿಗೂ ಆಶ್ಚರ್ಯಕರವಾದಂತಹ ಮೂರ್ತಿಶಿಲ್ಪವನ್ನು ವಿಶ್ವಕರ್ಮ ಅದ್ಭುತವಾಗಿ ರಚಿಸಿದ. ಹೀಗೆ ವಿವಾಹ ಸಿದ್ಧತೆಗಳನ್ನು ಮಾಡಿಸಿದ ಹಿಮವಂತ, ವರ ಶಂಕರನ ಬರುವಿಕೆಗಾಗಿ ಕಾದಿದ್ದ ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಏಕಾದಶಿ ಗಂ. 17-23 ನಕ್ಷತ್ರ: ಮಘಾ ಗಂ. 12-28 ಯೋಗ: ಶುಕ್ಲ ಗಂ. 17- 46, ಕರಣ: ಬಾಲವ ಗಂ. 17-23, ತುಲಾ ಮಾಸದ 03 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 – 12:00

ಸೂರ್ಯೋದಯ : 06-25 **ಸೂರ್ಯಾಸ್ತ :** 06-05

ಮುಸ್ಲಿಂ ದಿನಾಂಕ : 24 ರಬಿಉಲ್ಲಾವಲ್

ದಿನ ವಿಶೇಷ : ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮೀಜಿ ಜಯಂತಿ

ಅದೃಷ್ಟ ಸಂಖ್ಯೆ : 1, 4

ಮೇಷ: ಇನ್ನೊಬ್ಬರನ್ನು ನಿಮಗೆ ಹೋಲಿಸಿಕೊಳ್ಳದೇ, ಯಾವುದೇ ಅತಿಯಾಸೆ ಇಲ್ಲದೆ, ನಿಶ್ಚಿಂತೆಯಿಂದ ದುಡಿದಲ್ಲಿ ಹೆಚ್ಚಿನ ಆದಾಯ ಹೊಂದುವಿರಿ. ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಸೌಲಭ್ಯವನ್ನು ಪಡೆಯಬಹುದು.

ವೃಷಭ: ಹಾಲು ಉತ್ಪನ್ನಗಳ ಮಾರಾಟಗಾರರಿಗೆ ಅಧಿಕ ಆದಾಯ ಇರುವುದು. ನಿರ್ಮಾಣ ಕೆಲಸಗಳ ಗುತ್ತಿಗೆಯನ್ನು ಹಿಡಿಯುವವರು ವಸ್ತುಗಳ ಬೆಲೆ ಏರಿಕೆ ಗಮನದಲ್ಲಿಟ್ಟುಕೊಂಡು ವ್ಯವಹಾರ ಮುಂದುವರಿಸುವುದು ಉತ್ತಮ.

ಮಿಥುನ: ಅನ್ಯರಿಗೆ ಸಲಹೆ ಸೂಚನೆ ಕೊಡುವ ನಿಮಗೆ ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಕಷ್ಟವೆನಿಸಲಿದೆ. ಈ ದಿನದಂದು ಷರತ್ತು ಇರುವ ವ್ಯವಹಾರಗಳಿಗೆ ಕೈ ಹಾಕಬೇಡಿ. ಬರಹಗಾರರಿಗೆ ವಿಷಯ ಸಂಗ್ರಹವಾಗುವುದು.

ಕರ್ಕಾಟಕ: ದೈನಂದಿನ ಬದುಕನ್ನು ಶಿಸ್ತುಬದ್ಧ ರೀತಿಯಲ್ಲಿ ನಡೆಸಲು ತೀರ್ಮಾನಿಸುವುದರಿಂದ ಅಭಿವೃದ್ಧಿಯನ್ನು ಹೊಂದುವಿರಿ. ವಕೀಲಿ ವೃತ್ತಿಯವರಿಗೆ ಅಧ್ಯಯನದ ಕೊರತೆ ಕಾಣಲಿದೆ. ಮನದ ಗೊಂದಲ ದೂರಾಗಲಿದೆ.

ಸಿಂಹ: ಬಂಧು ಮಿತ್ರರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ. ಸ್ನೇಹಿತರ ಕಷ್ಟಗಳಿಗೆ ನೆರವಾಗುವ ಸ್ವಭಾವದಿಂದ ಸಮಸ್ಯೆಗಳನ್ನು ತಲೆ ಮೇಲೆ ಎಳೆದುಕೊಂಡಂತೆ ಆಗಬಹುದು. ಸ್ನೇಹಿತರ ಕಷ್ಟಗಳನ್ನು ವಿಮರ್ಶಿಸಿ ಸಹಕರಿಸಿ.

ಕನ್ಯಾ: ಸಿಹಿ ಪದಾರ್ಥಗಳ ಮಾರಾಟಗಾರರಿಗೆ ಉತ್ತಮವಾದ ಆದಾಯ ಇರಲಿದೆ. ರಂಗಭೂಮಿ ಕಲಾವಿದರಿಗೆ ಒಳ್ಳೆಯ ಅವಕಾಶಗಳು ಲಭಿಸಲಿವೆ. ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಜಾಗ್ರತರಾಗಿರಿ.

ತುಲಾ: ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ವೃಶ್ಚಿಕ: ಸಿವಿಲ್ ಎಂಜಿನಿಯರ್‌ಗಳಿಗೆ ಕೀರ್ತಿ ಸಂಪಾದನೆಗೆ ಜೊತೆಯಲ್ಲಿ ಆರ್ಥಿಕತೆಗೆ ಸಹಾಯವಾಗುವ ಉತ್ತಮ ಅವಕಾಶಗಳು ಸಿಗುವುದು. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿರುವುದು. ವಿಷ್ಣುಸಹಸ್ರನಾಮ ಪಠಿಸಿ.

ಧನು: ನಿಮ್ಮ ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಿಸಿಕೊಳ್ಳುವಿರಿ. ವಿವಾಹ ವಿಷಯಗಳಲ್ಲಿ ಮಗಳ ಅಭಿಪ್ರಾಯ ಪಡೆದು ಮುಂದುವರಿಯುವುದುಉತ್ತಮ.

ಮಕರ: ನಿಮ್ಮ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲ ಉಂಟಾಗುವುದು. ದೇವತಾ ಕಾರ್ಯಗಳನ್ನು ಹಮ್ಮಿಕೊಳ್ಳುವುದರಿಂದ ಅಥವಾ ಭಾಗವಹಿಸುವ ಉದ್ದೇಶದಿಂದ ಪ್ರಯಾಣ ಮಾಡಬೇಕಾಗಬಹುದು

ಕುಂಭ: ನಟ ನಟಿಯರಿಗೆ ವಿಪುಲ ಅವಕಾಶಗಳು ದೊರೆಯಲಿವೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ.ಅವಿವಾಹಿತರಿಗೆ ಕಂಕಣ ಯೋಗ ಕೂಡಿ ಬರಲಿದೆ. ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳುವುದು.

ಮೀನ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಆಲಸ್ಯ ಹೆಚ್ಚಾಗುವುದು. ರೈತಾಪಿ ವರ್ಗದವರ ಈ ದಿನದ ಕೆಲಸ ಕಾರ್ಯಗಳಿಗೆ ತಡೆ ಬರಬಹುದು.

ಬೆರಗಿನ ಬೆಳಕು
ಗುರುರಾಜ ಕರಜಗಿ



ಬದುಕಿನ ಕುಶಲತೆ

ಜೀವನವದೊಂದು ಕಲೆ; ಕಲೆಯ ಕಲಿಸುವುದೆಂತು?
ಸಾವಿರದ ನಿಯಮ ಯುಕ್ತಿಗಳನೊರೆದೊಡೆಯುಂ ||
ಆವುದೋ ಕುಶಲತೆಯದೊಂದಿರದೆ ಜಯವಿರದು |
ಆ ವಿವರ ನಿನ್ನೊಳಗೆ – ಮಂಕುತಿಮ್ಮ || 740 ||

ಪದ-ಅರ್ಥ: ಜೀವನವದೊಂದು = ಜೀವನವು+ಅದೊಂದು, ಯುಕ್ತಿಗಳನೊರೆದೊಡೆಯುಂ = ಯುಕ್ತಿಗಳನು + ಒರೆದೊಡೆಯುಂ(ತಿಳಿಸಿದರೂ), ಕುಶಲತೆಯದೊಂದಿರದೆ = ಕುಶಲತೆ + ಅದೊಂದು + ಇರದೆ.

ವಾಚ್ಯಾರ್ಥ: ಜೀವನ ಒಂದು ಕಲೆ. ಅದನ್ನು ಕಲಿಸುವುದು ಹೇಗೆ? ಸಾವಿರಾರು ನಿಯಮಗಳನ್ನು, ಉಪಾಯಗಳನ್ನು ಹೇಳಿಕೊಟ್ಟರೂ, ಯಾವುದೋ ಕುಶಲತೆ ಇಲ್ಲದೆ ಹೋದರೆಜಯ ದೊರಕುವುದಿಲ್ಲ. ಅದರ ವಿವರ ನಿನ್ನಲ್ಲೇ ಇದೆ.

ವಿವರಣೆ: ನಾವು ಬದುಕಿನಲ್ಲಿ ಎಷ್ಟೊಂದು ತರಹದ ಜನರನ್ನು ಕಾಣುತ್ತೇವಲ್ಲ! ತೀರ ಕೆಳಮಟ್ಟದಿಂದ ಬೆಳೆದು ಕೀರ್ತಿಯ ಶಿಖರಕ್ಕೇರಿದವರು, ಯಶಸ್ಸಿನ ಗೋಪುರದ ಮೇಲೆ ಹತ್ತಿ ಸೋಲಿನ ಪ್ರಪಾತಕ್ಕೆ ಧುಮುಕಿದವರು, ಆರಕ್ಕೇರದೆ, ಮೂರಕ್ಕಿಳಿಯದೆ ಇಡೀ ಜೀವನವನ್ನು ಅನಾಮಧೇಯರಾಗಿ ಕಳೆದು ಮುಗಿಸಿದವರು, ಒಂದು ದುರ್ಬಲ ಕ್ಷಣದಲ್ಲಿ ಕುಸಿದು ಸಾರ್ಥಕವಾಗಬಹುದಾಗಿದ್ದ ಜೀವನವನ್ನು ಹತಾತ್ತಾಗಿ ಕಳೆದುಕೊಂಡವರು, ಬದುಕನ್ನು ಕೊನೆಗೊಳಿಸಲೆಂದು ನಿರ್ಧರಿಸಿ, ಕೊನೆಯ ಕ್ಷಣದಲ್ಲಿ ಅದನ್ನು ಬದಲಿಸಿ, ಕೀರ್ತಿಯನ್ನು ತಮ್ಮದಾಗಿಸಿಕೊಂಡವರು. ಒಬ್ಬೊಬ್ಬರ ಬದುಕು ಒಂದೊಂದು ತರಹ. ಯಾಕೆ ಹೀಗೆ? ಎಲ್ಲರೂ ವಾಸವಾಗಿರುವ ನೆಲ ಒಂದೇ, ಗಾಳಿ ಒಂದೇ, ನೀರು ಒಂದೇ ಆದರೆ ಬದುಕುಗಳು ಬೇರೆ ಬೇರೆ. ಬಹುಶ: ಇದಕ್ಕೆ ಕಾರಣ ಅವರು ಯೋಚಿಸುವ ಮನಸ್ಸುಗಳು ಬೇರೆ ಬೇರೆ. ಅದಕ್ಕೇನೂರು ಜನರಿಗೆ ಬದುಕೆಂದರೇನು ಎಂದು ಕೇಳಿದರೆ ಪ್ರಾಯಶ: ಮುನ್ನೂರು ಉತ್ತರಗಳು ದೊರೆತಾವು. ಎಲ್ಲರಿಗೂ ಅವರವರದೇ ವ್ಯಾಖ್ಯೆ. ಆದರೆ ಒಂದು ಮಾತು ಸತ್ಯ. ಬದುಕು ಒಂದು ಕಲೆ. ಆದ್ದರಿಂದ ಅದನ್ನು ಕಲಿಯಬಹುದು. ನಟನೆಯನ್ನು ಕಲಿಸಲು ಶಾಲೆಗಳೇ ಇವೆ, ನೂರಾರು ವಿಧಾನಗಳಿವೆ. ಆದರೆ ಕೊನೆಗೆ ಆ ಕಲೆಯನ್ನು ಹೊಮ್ಮಿಸುವುದು ಕಲಾವಿದನಲ್ಲಿ ಆಂತರ್ಯವಾದ ಶಕ್ತಿ. ಈ ಮಾತನ್ನು ಕಗ್ಗ ಕೇಳುತ್ತದೆ. ಜೀವನದ ಕಲೆಯನ್ನು ಕಲಿಸುವುದು ಹೇಗೆ? ಹೊರಗಡೆಯಿಂದ ನೂರು ಜನ ಸಾವಿರ ಉಪದೇಶಗಳನ್ನು ನೀಡಬಹುದು, ಯುಕ್ತಿಗಳನ್ನು ಕೊಡಬಹುದು ಆದರೆ ತನ್ನ ಬದುಕನ್ನು ವ್ಯಕ್ತಿ ತಾನೇ ಸಾಗಿಸಬೇಕು. ಕೆಲವರು ಕಷ್ಟದ ಕುಲುಮೆಯಲ್ಲಿ ಹಾದು ಬಂದರೂ ಬದುಕನ್ನು ಸೊಗಸಾಗಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಎಲ್ಲ ಭಾಗ್ಯಗಳಿದ್ದೂ ನರಳುತ್ತಾರೆ. ವಿಷವನ್ನು ಅಮೃತವಾಗಿಸುವ, ಅಗ್ನಿಯಲ್ಲಿ ಪ್ರೀತಿಯ ತಂಪನ್ನು ಹುಡುಕುವುದೇ ಬದುಕಿನ ಕುಶಲತೆ. ಆ ಕುಶಲತೆ ಸಾಧ್ಯವಾಗದಾಗ ಬದುಕು ಬರಡಾಗುತ್ತದೆ, ಭಾರವಾಗುತ್ತದೆ. ಹೊರಗಿನ ನೂರು ಉಪದೇಶಗಳ ಸಾರವನ್ನು, ವಿಚಾರದ ಒಲೆಯಲ್ಲಿ ಬೇಯಿಸಿ, ಹೊರಬಂದ ತತ್ವ ಕುಶಲತೆಯಿಂದ ಬಳಸುವ ಶಕ್ತಿ ನಮ್ಮಲ್ಲೇ ಇದೆ. ಅದನ್ನು ಬಳಸಿದವರು ಯಶಸ್ವಿಗಳಾಗುತ್ತಾರೆ.


ಪದಬಂಧ 5115
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ತನ್ನನ್ನು ತಾನೇ ಹೊಗಳಿಕೊಳ್ಳುವಿಕೆ (5)
6.ಅಂತಃಕರಣ ಹೊಂದಿರುವ ಪಚನಾಂಗ (3)
7.ಈತ ಕೇಡನ್ನುಂಟುಮಾಡುವವನು (3)
8.ಸಂವಹನದ ನಂತರ ನಡೆಸಿರುವ ಯಜ್ಞ (3)
10.ರಕ್ತಸಿಕ್ತನಾದವನು ತೋರಿಸಿರುವ ಖಾಲಿ ಕೈ! (4)
11. ಶೌರ್ಯವನ್ನು ಕುರಿತ ಹಾಡು (4)
12.ಶಾಪಗೊಂಡಿರುವನು ಬೇರೆಯವರ ಅಧೀನದಲ್ಲಿದ್ದಾನೆ (4)
13. ಪುಸ್ತಕದ ಮೇಲುಹೊದಿಕೆ (4)
14.ವಲಯದ ಹತ್ತಿರ ಖರೀದಿಸಿದ ಉಪ್ಪು (3)
16.ಬಯಲ ಕಡೆ ಸಾಗುತ್ತಿರುವ ಆನೆಮರಿ (3)
18.ದಾಸನು ಶೇಖರಿಸಿರುವ ಸಾಮಾನು (3)
20.ಪ್ರವಾಸದಲ್ಲಿ ಸತಿಯು ಉಳಿದುಕೊಂಡಿರುವ ಮನೆ!(5)

ಮೇಲಿಂದ ಕೆಳಕ್ಕೆ

1.ಸಂಕಟದಿಂದ ಪಾವತಿಸಿದ ತೆರಿಗೆ (2)
2.ಆಕಳು ಮೇಯಿಸುತ್ತಿರುವ ಚಾರ (2)
3.ಭಾವ ಬೀರಿರುವ ವರ್ಚಸ್ಸು (3)
4.ಬೇಸರಿಕೆಯಾಗುವಷ್ಟು ಹೆಚ್ಚಾದ ಧಗೆ! (2)
5.ಅಂಕಣದಲ್ಲೇ ಪ್ರಾರಂಭವಾಗಿರುವ ಕಾಳಗ! (2)
8.ಸಮಸ್ತರಿಗೂ ಕಾಣಿಸುತ್ತಿರುವ ಕೈಚಳಕ (5)
9.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
15.ಗತಿಸಿದ ಮಹಾತ್ಮರ ಹುಟ್ಟುಹಬ್ಬ (3)
16.ಕತ್ತೆತ್ತಿದಾಗ ಕಾಣಿಸಿರುವ ಗಾರ್ಧಭ! (2)
17.ಭವನದಲ್ಲಿರುವ ಸಂಸಾರ
18 ದಾಸೋಹದಲ್ಲಿ ಆದ ಬಾಯಾರಿಕೆ (2)
19.ಇದು ಪುಡಿಮಾಡಿರುವ ಧಾನ್ಯ (2)



5114ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನೆ
2.ಆಕ್ಷೇಪಣೆ 4.ಪರಿಪಾಕ
7.ಜಗತಿ 8.ಮೌನ
9.ವಲ್ಲಭ 10.ಪಂಕ್ತಿ
11.ಹಾವಸೆ 12.ತರತಮ
14.ಹಗೆತನ 15.ಅಡಾವುಡಿ

ಮೇಲಿಂದ ಕೆಳಕ್ಕೆ:
1.ಪ್ರತಾಪ 3.ಪದಾತಿ
5.ರಿಸನ 6.ಕತ್ತಿವರಸೆ
7.ಜಡಭರತ 10.ಪಂಡಿತ
11.ಹಾವುಗೆ 13.ಮಹಡಿ

ಸುಡೊಕು 5501

6				9		1		8
	1			3			6	
		7	4			3		9
2	9				4	6		
1	4			5				2
			1				9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5500 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು (ಆರೋಗ್ಯ ಸೌಧ, 3ನೇ ಮಹಡಿ, ಕುಷ್ಟರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023)
ದೂರವಾಣಿ ಸಂಖ್ಯೆ: 080–29552542, ಇ–ಮೇಲ್: eekhsdrp@gmail.com

ಸಂಖ್ಯೆ: ಆಕುಕ/ಕಾ.ಇಂ/ಇಂ.ವಿ/ಬೆಂ/ಸ.ಇಂ–1&4/ಟೆಂಡರ್/2022–23/25 ದಿನಾಂಕ: 20.10.2022

ಟೆಂಡರ್ ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ವತಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ನೋಂದಾಯಿತ ಅರ್ಹ ಗುತ್ತಿಗೆದಾರರು ಭಾಗವಹಿಸಲು ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

(1) Construction of Road, Drainage and Compound wall in the premises of TLH Devanahalli Bengaluru Rural District, (2) Providing additional works to Newly Constructed Geriatric Ward at General Hospital Doddaballapura in Bengaluru Rural District, (3) Construction of Staff Quarters at Doddahalli PHC in Pavagada Taluk, Tumkur District ಕಾಮಗಾರಿಗಳ ಟೆಂಡರನ್ನು **https://eproc.karnataka.gov.in** ಅಂತರ್ಜಾಲದ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಕಾಮಗಾರಿಗೆ ಸಂಬಂಧಿಸಿದಂತೆ ಖಾಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 07.11.2022 ರಂದು ಸಂಜೆ 4.00 ರವರೆಗೆ. **ಸೂಚನೆ: ಸದರಿ ಟೆಂಡರಿಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಅಥವಾ ಮುಂದೂಡಿಕೆಗಳು ಇದ್ದಲ್ಲಿ ಅವುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನ ಮುಖಾಂತರವೇ ಪ್ರಕಟಿಸಲಾಗುವುದು.**

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2722/ಆಕಾರ್/22–23

ಕರ್ನಾಟಕ ಸರ್ಕಾರ

ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸ್ತ್ರೀ ಶಕ್ತಿ ಭವನ ಕಟ್ಟಡ, ತಾಲ್ಲೂಕು ಪಂಚಾಯಿತಿ ಆವರಣ,
ಸೋಮವಾರಪೇಟೆ, ಕೊಡಗು ಜಿಲ್ಲೆ–571236
cdpo.spt@gmail.com, ದೂರವಾಣಿ: 08276–282281

ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆಯ ಮರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮಹಿಳೆಯರ ಮತ್ತು ಮಕ್ಕಳ ಇಲಾಖೆ, ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಸೋಮವಾರಪೇಟೆ, ಸೋಮವಾರಪೇಟೆ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗಿರುವ ಮಕ್ಕಳು, ಗರ್ಭಿಣಿ, ಬಾಣಂತಿಯರು ಮತ್ತು ತೀವ್ರ ಅಪೌಷ್ಠಿಕ ಮಕ್ಕಳು ಹಾಗೂ ಸಾಮಾನ್ಯ ಅಪೌಷ್ಟಿಕ ಮಕ್ಕಳಿಗೆ ಮೊಟ್ಟೆ ಖರೀದಿಸಲು ಆದೇಶ ನೀಡಿದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅನ್ವಯಿಸುವಂತೆ 2022–23ನೇ ಸಾಲಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಅದರಂತೆ ಟೆಂಡರನ್ನು ಸಲ್ಲಿಸಲು ದಿನಾಂಕ: 29.10.2022ರಂದು ಕೊನೆಯ ದಿನಾಂಕವಾಗಿದ್ದು, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿನಾಂಕ: 31.10.2022 ಆಗಿರುತ್ತದೆ. ಹಾಗೂ ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಸೋಮವಾರಪೇಟೆ ಇವರನ್ನು ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸೋಮವಾರಪೇಟೆ ತಾಲ್ಲೂಕು

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 36/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ.–1/ಜೆಜೆಎಂ/1505/2022–23 ದಿನಾಂಕ : 18–10–2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 79.28 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.585 ಲಕ್ಷಗಳು. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 37.61 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 0.75 ಲಕ್ಷಗಳು. 3) ಕಾಲಾವಧಿ : 06 ತಿಂಗಳು. 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸಲು ಕೊನೆಯ ದಿನಾಂಕ : 05–11–2022 ರ ಸಂಜೆ 5.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07–11–2022 ರ ಬೆಳಿಗ್ಗೆ 11.00 ಗಂಟೆಯ ನಂತರ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 09–11–2022 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. **ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/296/ಮಣಿಪಾಲ್/2022–23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ,
ಬೆಂಗಳೂರು– 560023. ದೂರವಾಣಿ ಸಂಖ್ಯೆ: 080–29557023
ಇ–ಮೇಲ್: cekhsdrp@gmail.com

ಸಂಖ್ಯೆ: ಆಕುಕ/ಇಂಘ/ಮುಇಂ/ತಾಸ–3/ಸಇಂ–8/ಟಿಎನ್‌ಡಿ/2022–23/1833 ದಿನಾಂಕ: 20.10.2022

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಮೂರನೇ ದರ್ಜೆ, ಎರಡನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement) ಮೂಲಕ ಆಹ್ವಾನಿಸಲಾಗಿದೆ.

1) ಕಾಮಗಾರಿಗಳ ವಿವರ: 1) ಬಳ್ಳಾರಿ ಜಿಲ್ಲೆಯ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ, 2) ಕೊಪ್ಪಳ ಜಿಲ್ಲೆಯ ಕೊಪ್ಪಳ ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ, 3) ರಾಯಚೂರು ಜಿಲ್ಲೆಯ ರಿಮ್ಸ್‌ನಲ್ಲಿ ಧರ್ಮಶಾಲಾ ನಿರ್ಮಾಣ ಪ್ಯಾಕೇಜ್ ಕಾಮಗಾರಿ. **ಟೆಂಡರ್‌ಗಿಟ್ಟ ಮೊತ್ತ:** ರೂ. 159.00 ಲಕ್ಷಗಳಲ್ಲಿ **ಇಎಂಡಿ ಮೊತ್ತ:** ರೂ. 2.40 ಲಕ್ಷಗಳಲ್ಲಿ. **ಕಾಲಾವಧಿ ಮಳೆಗಾಲ ಸೇರಿದಂತೆ :** 6 ತಿಂಗಳು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 05.11.2022 ರಂದು 16.00 ಗಂಟೆಯವರೆಗೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 07.11.2022 ರಂದು 16.00 ಗಂಟೆಗೆ.

2) ಕಾಮಗಾರಿಗಳ ವಿವರ: 1) ಮೈಸೂರು ಜಿಲ್ಲೆಯ, ಮೈಸೂರು ಕೆ.ಆರ್. ಆಸ್ಪತ್ರೆ ಮತ್ತು ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ, 2)ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ, 3) ಕೊಡಗು ಜಿಲ್ಲೆಯ ಕೊಡಗು ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ & 4) ಹಾಸನ ಜಿಲ್ಲೆಯ ಹಾಸನ ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಧರ್ಮಶಾಲಾ ನಿರ್ಮಾಣ ಪ್ಯಾಕೇಜ್ ಕಾಮಗಾರಿ. **ಟೆಂಡರ್‌ಗಿಟ್ಟ ಮೊತ್ತ:** ರೂ. 207.00 ಲಕ್ಷಗಳಲ್ಲಿ **ಇಎಂಡಿ ಮೊತ್ತ:** ರೂ. 3.20 ಲಕ್ಷಗಳಲ್ಲಿ **ಕಾಲಾವಧಿ ಮಳೆಗಾಲ ಸೇರಿದಂತೆ :** 6 ತಿಂಗಳು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 19.11.2022 ರಂದು 16.00 ಗಂಟೆಯವರೆಗೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 21.11.2022 ರಂದು 16.00 ಗಂಟೆಗೆ.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) **https://.eproc.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **https://.eproc.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ,
ಬೆಂಗಳೂರು.

ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು–572 103,
ದೂರವಾಣಿ : 0816–2254546

ಸಂಖ್ಯೆ:ತುವಿ/ತಾವಿ/ಟೆಂ.ಪ್ರ//2022–23/9 ದಿನಾಂಕ: 18.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ತುಮಕೂರು ವಿಶ್ವವಿದ್ಯಾನಿಲಯದ Construction of Hostel for Tumkur University OBC Girls Students in the premises of Girls Hostel Complex, Railway Station Road, Tumkur. ಕಾಮಗಾರಿಯನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ರೂ.205.92 ಲಕ್ಷಗಳಿಗೆ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ದಿನಾಂಕ: **02.11.2022** ಕೊನೆಯ ದಿನಾಂಕವಾಗಿದ್ದು ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–7,
ಶಿಕ್ಷಣ, ಅನೆಕ್ಸ್–2 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.

ಸಂಖ್ಯೆ:ಕಾಪಾಅ/ಯೋಕೇ–7/ಟೆಂಡರ್/06/2022–23/2ನೇ ಕರೆ ದಿನಾಂಕ: 19.10.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) 2ನೇ ಕರೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು ಯೋಜನೆ ಕೇಂದ್ರ–7 ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಬೆಂಗಳೂರಿನ ಮಾಗಡಿ ರಸ್ತೆ, ಕೋದಂಡರಾಮ–ಪುರ ಮತ್ತು ವೀರಪ್ಪನಪಾಳ್ಯದಲ್ಲಿ ಬೃ.ಬೆಂ.ಮ.ಪಾ ಶಾಲೆಗಳು ಮತ್ತು ಪಿ ಯು ಕಾಲೇಜುಗಳ ಹೊಸ ಕಟ್ಟಡಗಳ ನಿರ್ಮಾಣ ಮತ್ತು ಹೆಚ್ಚುವರಿ ಮಹಡಿಗಳನ್ನು ನಿರ್ಮಾಣ ಮಾಡುವುದು.	851.93	12.78 ಲಕ್ಷಗಳು (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **31.10.2022**ರ ಸಂಜೆ **5:30** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ **25.10.2022**ರ ಸಂಜೆ **5:30** ಗಂಟೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಯೋಜನೆ–ಕೇಂದ್ರ, ಅನೆಕ್ಸ್–3 ಕಟ್ಟಡ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ಬೆಂಗಳೂರು–02 ಇಲ್ಲಿ ದಿನಾಂಕ **27.10.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–7, ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ **02.11.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–7

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ,

ಎಸ್.ಎಸ್.ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ,
ಎನ್.ಸಿ.ಸಿ ಕಛೇರಿ ಪಕ್ಕ ದಾವಣಗೆರೆ–577005 ದೂರವಾಣಿ : 08192 237833
ಫ್ಯಾಕ್ಸ್ : 08192 230919 e mail : dhodavangere@ gmail.com

ಸಂಖ್ಯೆ:ಜಿಆದಾ/ಟೆಂಡರ್/ವೈ.ಉ/01/2022–23 ದಿನಾಂಕ:19/10/2022

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ, ಕಛೇರಿ ದಾವಣಗೆರೆ ಅಧೀನ ಸಾರ್ವಜನಿಕ ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅತೀ ಅವಶ್ಯಕವಾಗಿ ತುರ್ತಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ ಪ್ರಕಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ **ಟೆಂಡರ್** ಕರೆಯಲಾಗಿದೆ. **Tender Reference No: DHODVG/TENDER/MED EQUIP/01/2022-23Dated: 19.10.2022.** (1) DATE AND TIME OF ACCESSING TENDER DOCUMENT From : 19.10.2022 (2) LAST DATE AND TIME FOR UP LOADING OF FILLED TENDERS 17.11.2022 upto 5.00 P.M (3) **EMD** amount Rs.6,00,000.00 (Six Lakhs Only) (4) Pre-Bid Meeting to be held on **OFFICE OF THE District Health and Family Welfare Office DAVANAGERE-577005.** 27.10.2022 AT 11.30 AM (5) LAST DATE FOR QUERIES THROUGH ON-LINE 29.10.2022 up to 5.00 PM (6) TIME AND DATE OF OPENING OF TENDER (Online) TECHNICAL BID (1ST COVER) : 19.11.2022 at 11.30 a.m. (7) DEMONSTRATION OF EQUIPMENTS SHALL BE INTIMATED (8) TIME AND DATE OF OPENING OF FINANCIAL BID 21.11.2022 AT 11.30 AM (9) ADDRESS FOR COMMUNICATION **OFFICE OF THE District Health and Family Welfare Office Davanagere-577005.** (10) APPROXIMATE COST OF THE TENDER Rs. 240.00 Lakhs (11) TENDER DOCUMENT FEES As per E-Procurement

ವಾಸಾಇ/ಡಿವಿಜಿ/555/ಎಂಸಿಎ/2022–23

ಸಹಿ/– ಜಿಲ್ಲಾ ಆರೋಗ್ಯ ಮತ್ತು
ಕು.ಕ.ಅಧಿಕಾರಿಗಳು, ದಾವಣಗೆರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಸಂಖ್ಯೆ: ಮಾನಿಮಂ/70/ಹೆಚ್‌ಪಿಐ/17ನೇ ಪ್ರವರ್ಗ/2022/4916 ದಿನಾಂಕ:19/10/2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ॥ ದಿ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇವರು, ಸರ್ವೇ ನಂ.22, 25, 27, 1/l, ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ ಇಲ್ಲಿ ಹಾಲಿ ಇರುವ ಸಕ್ಕರೆ ಘಟಕದ ಜೊತೆಗೆ ಒಟ್ಟು 31.13 ಎಕರೆ ಪ್ರದೇಶದಲ್ಲಿ ಕಬ್ಬಿನ ರಸ/ಬಿ–ಹೆವಿ ಮೊಲ್ಯಾಸಸ್/ಸಿ–ಮೊಲ್ಯಾಸಸ್ ಆಧಾರಿತ 120 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 1.12.2009) ಪ್ರಕಾರ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನವದೆಹಲಿ, ಇವರ Terms of Reference ಪತ್ರ ಸಂಖ್ಯೆ: IA-J-11011/309/2022-IA-II(I) ದಿನಾಂಕ: 16.08.2022 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 26.09.2022, ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿದೆ:

1. ಕಂಪನಿಯ ಹೆಸರು ಮತ್ತು ವಿಳಾಸ : ಮೆ॥ ದಿ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ.	
2 ಉದ್ದೇಶಿತ ಯೋಜನೆಯ ಸ್ಥಳ : ಸರ್ವೇ ನಂ.22, 25, 27, 1/l, ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 31.13 ಎಕರೆ ಪ್ರದೇಶ.	
3 ಉದ್ದೇಶಿತ ಕಾರ್ಖಾನೆಯ ಯೋಜನೆ : ಕಬ್ಬಿನ ರಸ/ಬಿ–ಹೆವಿ ಮೊಲ್ಯಾಸಸ್/ಸಿ–ಮೊಲ್ಯಾಸಸ್ ಆಧಾರಿತ 120 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಸ್ಥಾಪಿಸುವುದು.	
4 ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ ದಿನಾಂಕ: 28.11.2022 (ಸೋಮವಾರ), ಸಮಯ: ಬೆಳಗ್ಗೆ 11.00 ಗಂಟೆ ಸ್ಥಳ: ಮೆ॥ ದಿ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಆವರಣ, ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ.	

5 ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ : ಅ) ಜಿಲ್ಲಾಧಿಕಾರಿಗಳ ಕಛೇರಿ, ಬೀದರ್ ಜಿಲ್ಲೆ, ಬೀದರ್ ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೀದರ್ ಜಿಲ್ಲೆ, ಬೀದರ್. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್. ಈ) ಗ್ರಾಮ ಪಂಚಾಯತ್ ಕಾರ್ಯಾಲಯ, ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ. ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೀದರ್. ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. ಋ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗೂ ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ :kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಹಾಸನಾಂಬ ದರ್ಶನದ ಅವಧಿ ವಿಸ್ತರಣೆ

ಹಾಸನ: ಹಾಸನಾಂಬ ದೇವಸ್ಥಾನಕ್ಕೆ ಬರುತ್ತಿರುವ ಭಕ್ತರ ಸಂಖ್ಯೆ ಹೆಚ್ಚುತ್ತಿದ್ದು, ದರ್ಶನದ ಅವಧಿಯನ್ನು ಮಧ್ಯರಾತ್ರಿ 12 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಮಧ್ಯಾಹ್ನದ ಪೂಜೆ, ನೈವೇದ್ಯದ ಅವಧಿಯನ್ನು 1 ಗಂಟೆ ಕಡಿತಗೊಳಿಸಲಾಗಿದೆ. ಈವರೆಗೆ ಬೆಳಿಗ್ಗೆ 6ರಿಂದ ಮಧ್ಯಾಹ್ನ 1.30ರವರೆಗೆ ದರ್ಶನವಿದ್ದು, ಮಧ್ಯಾಹ್ನ 3.30ರವರೆಗೆ ದರ್ಶನ ಬಂದ್ ಮಾಡಲಾಗುತ್ತಿತ್ತು. ಇದೀಗ ಬೆಳಿಗ್ಗೆ 6ರಿಂದ ಮಧ್ಯಾಹ್ನ 1.30 ಹಾಗೂ ಮಧ್ಯಾಹ್ನ 2.30ರಿಂದ ಮಧ್ಯರಾತ್ರಿ 12 ರವರೆಗೆ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಜಿಲ್ಲಾ ಪಂಚಾಯತ್, ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ–ಮಧುಗಿರಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:15/2022–23
ದಿನಾಂಕ: 18.10.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಅನ್ನು ಕರೆಯಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್‌ಗಳಿಗೆ ದಿ: 18.10.2022 ರಿಂದ ದಿ: 31.10.2022 ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ:080–25501216, 080–25501227ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ

DIPR/TUM/610/MCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ

ಫೋನ್: 08182-254832 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

1) No.EE/UTPDN/SMG/KNNL/PB-3/T.N.NO.17/2022-23/ Call-2 Dated: 18.10.2022. 2) No.EE/UTPDN/SMG/KNNL/PB-3/T.N.NO.30/ 2022-23 Dated: 18.10.2022

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ ತುಂಗಾ ಮೇಲ್ದಂಡೆ ಯೋಜನೆಯಡಿ ಬರುವ **02** ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ **ಮೊತ್ತ ರೂ. 84.62 ಲಕ್ಷಗಳ, ಮತ್ತು 338.83 ಲಕ್ಷಗಳು. (ಜಿ.ಎಸ್.ಟಿ ಹೊರತುಪಡಿಸಿ).** (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ : **27.10.2022 ಸಾಯಂಕಾಲ 5.30 ಮತ್ತು ದಿನಾಂಕ : 29.10.2022 ಸಂಜೆ 5.30 ಘಂಟೆಯವರೆಗೆ.** (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ: 18.10.2022** ರಿಂದ **02.11.2022 ಸಾಯಂಕಾಲ 5.30 ಘಂಟೆಯವರೆಗೆ ಮತ್ತು ದಿನಾಂಕ : 18.10.2022** ರಿಂದ **05.11.2022 ಸಾಯಂಕಾಲ 5.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)** ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ **https://eproc.karnataka.gov.in/** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ತುಂ.ಮೇ.ಯೋ. ವಿಭಾಗ,
ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.105-10 ಝೇಂಕಾರ್/2022-23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–6/.ಟೆಂಡರ್.ಅಧಿಸೂಚನೆ/2022–23/5200 ದಿನಾಂಕ: 19.10.2022

ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ (03) ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: 157298, 157300 & 157301 ಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. 53.11 ಲಕ್ಷಗಳು ಗರಿಷ್ಠ ರೂ. 59.04 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, "ಕ್ಲಾಸ್–I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು"ಕ್ಲಾಸ್–II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ"ಕ್ಲಾಸ್–III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ"ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 1,07,000.00 ಗರಿಷ್ಠ ರೂ. 1,18,000.00 5) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 07/11/2022 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 08/11/2022 (16.00 ಗಂಟೆ), 7) ತಾಂತ್ರಿಕ ಬಿಡ್ ತೆರವುಗೊಳಿಸುವ ದಿನಾಂಕ : 09/11/2022 (16.30 ಗಂಟೆ), 8) ಆರ್ಥಿಕ ಬಿಡ್ ತೆರವುಗೋಳಿಸುವ ದಿನಾಂಕ : 10/11/2022 (16.30 ಗಂಟೆ) 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/746/ಎಂ.ಸಿ.&ಎ/2022–23

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗೆ ಷೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ, ತೋರಣಹಳ್ಳಿ ಅಗ್ರಹಾರ ಗ್ರಾಮ, ಕಸಬಾ ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಜಮೀನುಗಳ ಭೋಗ್ಯದಾರಿಕೆ ಹಕ್ಕುಗಳನ್ನು ಅವುಗಳ ಮಾಲೀಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಗೆ / ಗಳಿಗೆ ಮಾರಾಟ, ವಿನಿಮಯ, ಬಾಡಿಗೆ, ಭೋಗ್ಯ, ಪರವಾನಿಗೆ, ಅಸೈನ್‌ಮೆಂಟ್, ಅಡಮಾನ, ಲೀನ್, ಚಾರ್ಜ್ ನಿರ್ವಹಣೆ, ಟ್ರಸ್ಟ್, ಸ್ವಾಧೀನತೆ, ಟೆನೆನ್ಸಿ, ಒಪ್ಪಂದ, ಲೈಸನ್ಸ್, ವಂಶಪಾರಂಪರಿಕ, ವರ್ಗಾವಣೆ, ಉಡುಗೊರೆ ರೂಪದಲ್ಲಿ ಯಾವುದೇ ಕ್ಲೇಮ್, ಡಿಮಾಂಡ್, ಎಸ್ಟೇಟ್, ಷೇರ್, ಹಕ್ಕು, ಬಾಧ್ಯತೆ ಅಥವಾ ಯಾವುದೇ ಸ್ವರೂಪದ ಹಿತಾಸಕ್ತಿ ಹೊಂದಿದ್ದಲ್ಲಿ, ಅಥವಾ ಈಸ್‌ಮೆಂಟ್, ಫಲಾನುಭವಿ ಹಿತಾಸಕ್ತಿ ಅಥವಾ ಪ್ರಿಯಾಂಪ್ಷನ್ ಅಥವಾ ಯಾವುದೇ ಒಪ್ಪಂದ ಅಡಿಯಲ್ಲಿದ್ದರೆ ಅಥವಾ ಯಾವುದೇ ಪ್ರಾಧಿಕಾರ, ಆರ್ಬಿಟ್ರೇಟರ್, ಲಿಸ್ಪೆಂಡೆನ್ಸ್, ಹೊರಡಿಸಿದ ಆದೇಶವಿದ್ದಲ್ಲಿ, ಪವರ್ ಆಫ್ ಅಟಾರ್ನಿ, ಬಿಕ್ವೆಸ್ಟ್, ಇನ್ಹೆರಿಟನ್ಸ್, ಸಕ್ಸೆಶನ್, ಉಡುಗೊರೆ, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕುಗಳು, ಪಾಲುದಾರಿಕೆ, ಫ್ಯಾಮಿಲಿ ಅರೇಂಜ್‌ಮೆಂಟ್ ಅಥವಾ ಸೆಟ್ಲ್‌ಮೆಂಟ್ ಅಥವಾ ಇನ್ನಾವುದೇ ರೀತಿಯಲ್ಲಿನ ಋಣಭಾರವಿದ್ದಲ್ಲಿ (**"ಕ್ಲೇಮ್"**), ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ಪೂರಕ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ತಿಳಿಸಬೇಕೆಂದು ಕೋರಲಾಗಿದೆ ಮತ್ತು ಇದಕ್ಕೆ ತಪ್ಪಿದಲ್ಲಿ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮ್‌ಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ಒಂದು ವೇಳೆ ನಿಗದಿತ ಅವಧಿಯ ನಂತರ ಕ್ಲೇಮ್ ಸಂದಾಯವಾದಲ್ಲಿ, ಅಂತಹವುಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ಕೈಬಿಡಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ


ಸರ್ವೆ ನಂಬರ್	ಮಟ್ಟಿಗೆ ಖರಾಬ್ ಸೇರಿದಂತೆ		ಭೂಮಾಲೀಕರ ಹೆಸರುಗಳು	ಗಡಿಗಳು			
	ಎಕರೆ	ಗುಂಟಾ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
20	5	37	ಶ್ರೀ ಅಪ್ಪಾಜಪ್ಪ ಮತ್ತು ಶ್ರೀ ರಾಮೇಗೌಡ ಇಬ್ಬರೂ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರರು	ಸರ್ವೆ ನಂ. 19ರಲ್ಲಿರುವ ಜಮೀನು	ಸರ್ವೆ ನಂ. 67ರಲ್ಲಿರುವ ಜಮೀನು	ಸರ್ವೆ ನಂ. 68ರಲ್ಲಿರುವ ಜಮೀನು	ಸರ್ವೆ ನಂ. 74ರಲ್ಲಿರುವ ಜಮೀನು
67	7	25	ಶ್ರೀ ಅಪ್ಪಾಜಪ್ಪ ಮತ್ತು ಶ್ರೀ ರಾಮೇಗೌಡ ಇಬ್ಬರೂ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರರು	ಸರ್ವೆ ನಂ. 20ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 68ರಲ್ಲಿರುವ ಜಮೀನು	ಸರ್ವೆ ನಂ. 74ರಲ್ಲಿರುವ ಜಮೀನು
68	10	39	ಶ್ರೀ ವೆಂಕಟರಾಯಪ್ಪ ಮತ್ತು ಶ್ರೀ ರಾಮೇಗೌಡ ಇಬ್ಬರೂ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರರು	ಸರ್ವೆ ನಂ. 21ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 69ರಲ್ಲಿರುವ ಜಮೀನು	ಸರ್ವೆ ನಂ. 67 ಮತ್ತು 20 ರಲ್ಲಿರುವ ಜಮೀನು
69	7	14	ಶ್ರೀ ವೆಂಕಟರಾಯಪ್ಪ ಇವರು ಲೇಟ್ ಶ್ರೀ ನಾರಾಯಣಪ್ಪನವರ ಪುತ್ರ	ಸರ್ವೆ ನಂ. 21ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 21ರಲ್ಲಿರುವ ಜಮೀನು	ಸರ್ವೆ ನಂ. 68ರಲ್ಲಿರುವ ಜಮೀನು
70	7	22	ಶ್ರೀ ನಾಗರಾಜ ಮತ್ತು ಶ್ರೀ ರಾಮೇಗೌಡ ಇಬ್ಬರೂ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರರು	ಸರ್ವೆ ನಂ. 21ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 71ರಲ್ಲಿರುವ ಜಮೀನು	ಸರ್ವೆ ನಂ. 21ರಲ್ಲಿರುವ ಜಮೀನು
71	6	27	ಶ್ರೀ ನಾಗರಾಜ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರ	ಸರ್ವೆ ನಂ. 21ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 72ರಲ್ಲಿರುವ ಜಮೀನು	ಸರ್ವೆ ನಂ. 70ರಲ್ಲಿರುವ ಜಮೀನು
72	3	32	ಶ್ರೀ ನಾಗರಾಜ ಲೇಟ್ ಶ್ರೀ ನಾರಾಯಣಪ್ಪನವರ ಪುತ್ರ	ಸರ್ವೆ ನಂ. 21ರಲ್ಲಿರುವ ಜಮೀನು	ರಸ್ತೆ	ಸರ್ವೆ ನಂ. 77ರಲ್ಲಿರುವ ಜಮೀನು	ಸರ್ವೆ ನಂ. 71ರಲ್ಲಿರುವ ಜಮೀನು
ಒಟ್ಟು	49 ಎಕರೆ	36 ಗುಂಟಾ					

ದಿನಾಂಕ: 21–10–2022

ಸುಧೀರ್ ಹೆಚ್ ಮದಮಯ್ಯ,
ಖೇತಾನ್ ಅಂಡ್ ಕೋ
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ವ್ಯಾಗ್ರಾತ್ ರೋಡ್, ಬೆಂಗಳೂರು – 560 025
ಫೋನ್: +91 80 43397000 ಮೊಬೈಲ್:98455 25612

ಕೆಎಲ್‌ಇ: ಯುವಕನಿಗೆ ಯಕೃತ್ ಕಸಿ ಯಶಸ್ವಿ

ಪ್ರಜಾವಾಣಿ ವಾರ್ತೆ


ಪ್ರಭಾಕರ ಕೋರೆ

ಬೆಳಗಾವಿ: 'ಇಲ್ಲಿನ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ 19 ವರ್ಷದ ಯುವಕನಿಗೆ ಯಶಸ್ವಿಯಾಗಿ ಯಕೃತ್ ಕಸಿ ಮಾಡಲಾಗಿದೆ' ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

'ಹಾವೇರಿಯ ದರ್ಶನ್ ಎಂಬ ಯುವಕ ಯಕೃತ್ ಸಮಸ್ಯೆಯಿಂದ ಬಳಲುತ್ತಿದ್ದರು. ಯಕೃತ್ ಕಸಿಗಾಗಿ ಅವರು ಕೆಎಲ್‌ಇಎಸ್ ಆಸ್ಪತ್ರೆಗೆ ನೋಂದಣಿ ಮಾಡಿಸಿದ್ದರು. ಇತ್ತೀಚೆಗೆ ಅಥಣಿಯ 30 ವರ್ಷದ ಯುವಕನ ಮಿದುಳು ನಿಷ್ಕ್ರಿಯಗೊಂಡಿತ್ತು. ಅವರ ಪಾಲಕರು ಅಂಗಾಂಗ ದಾನ ಮಾಡಿದ್ದರು. ಅವರ ಯಕೃತ್ತನ್ನೇ ದರ್ಶನ್ ಅವರಿಗೆ ಕಸಿ ಮಾಡಲಾಗಿದೆ' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬೆಂಗಳೂರು, ಮುಂಬೈ, ಹೈದರಾಬಾದ್‌ನಂಥ ನಗರಗಳ ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚದಲ್ಲಿ ಯಕೃತ್ ಕಸಿ ಮಾಡಲಾಗುತ್ತದೆ. ಅಲ್ಲಿಗಿಂತ ಅರ್ಧದಷ್ಟು ವೆಚ್ಚದಲ್ಲಿ ಕೆಎಲ್‌ಇಎಸ್ ಆಸ್ಪತ್ರೆಯಲ್ಲಿ ಕಸಿ ಮಾಡಲಾಗಿದೆ' ಎಂದರು.

> **ನನಗೆ ಯಕೃತ್ ದಾನ ಮಾಡಿದ ಮತ್ತು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿದ ತಂಡಕ್ಕೆ ಸದಾ ಕೃತಜ್ಞ. ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗ ದಾನಕ್ಕೆ ಕುಟುಂಬಸ್ಥರು ಮುಂದೆ ಬರಬೇಕು**
> **ದರ್ಶನ್,** ಶಸ್ತ್ರಚಿಕಿತ್ಸೆಗೆ ಒಳಗಾದ ಯುವಕ

'ಆಸ್ಪತ್ರೆಯ ಗ್ಯಾಸ್ಟ್ರೊಎಂಟರಾಲಜಿ ವಿಭಾಗದ ಡಾ.ಸಂತೋಷ ಹಜಾರೆ, ಡಾ.ಸುದರ್ಶನ ಚೌಗುಲೆ ಮತ್ತು ಬೆಂಗಳೂರಿನ ಅಸ್ಟರ್ ಆಸ್ಪತ್ರೆಯ ಡಾ.ಸೋನಲ್ ಆಸ್ಥಾನಾ ಅವರ ತಂಡ ಈ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದೆ. ಅರಿವಳಿಕೆ ತಜ್ಞರಾದ ಡಾ.ಅರುಣ, ಡಾ.ರಾಜೇಶ ಮಾನೆ, ಡಾ.ಮಂಜುನಾಥ, ಜೀವ ಸಾರ್ಥಕತೆ, ಮೋಹನ ಫೌಂಡೇಷನ್ ಮತ್ತು ಕಸಿ ಸಂಯೋಜಕರ ತಂಡ ಇದಕ್ಕೆ ಕೈ ಜೋಡಿಸಿದೆ' ಎಂದರು.

ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ವಿ.ಜಾಲಿ, ಬಹುವಿಧ ಅಂಗಾಂಗ ಘಟಕದ ಅಧ್ಯಕ್ಷ ಡಾ.ಆರ್.ಬಿ.ನೇರ್ಲಿ ಇದ್ದರು.

ಸೌರಶಕ್ತಿ: 'ಲೋಕಾ' ತನಿಖೆ?

ಒಂದನೇ ಪುಟದಿಂದ

ಟಿಪ್ಪಣಿಯಲ್ಲಿ ಏನಿದೆ?: 'ಒಟ್ಟು ₹ 2,100 ಕೋಟಿ ಮೊತ್ತದ ಸೌರಶಕ್ತಿ ಘಟಕಗಳನ್ನು ಸ್ಥಾಪಿಸಲು ಎಂಟೇ ನಿಮಿಷಗಳಲ್ಲಿ ಅರ್ಜಿ ಸ್ವೀಕೃತಿ ಪ್ರಕ್ರಿಯೆ ಮುಗಿಸಿ ಮಂಜೂರಾತಿ ನೀಡಿರುವುದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಅನುಸಾರ ಸರಿ ಇದೆಯೇ ಎಂಬುದನ್ನು ವಿಚಾರಣೆಗೆ ಒಳಪಡಿಸಬೇಕಿದೆ. 1 ಮೆಗಾ ವ್ಯಾಟ್ ಸೌರ ಶಕ್ತಿ ಘಟಕಕ್ಕೆ ₹ 7 ಕೋಟಿಯಿಂದ ₹ 8 ಕೋಟಿ ಹೂಡಿಕೆ ಎಂಬ ಲೆಕ್ಕದಲ್ಲಿ 330 ಮೆಗಾ ವ್ಯಾಟ್ ಉತ್ಪಾದನೆಗೆ ಎಂಟೇ ನಿಮಿಷದಲ್ಲಿ ಅವಕಾಶ ಕೊಟ್ಟು ಮುಗಿಸುವುದು ಸಾರ್ವಜನಿಕ ಹೊಣೆಗಾರಿಕೆಯ ನೀತಿಯ ಉಲ್ಲಂಘನೆಯಾಗಿದೆ.

ಅರ್ಜಿ ಸ್ವೀಕೃತಿಯ ಮೊದಲ 120 ಸೆಕೆಂಡುಗಳಲ್ಲಿ 10 ಹಂತಗಳಲ್ಲಿ ಭರ್ತಿ ಮಾಡಬೇಕಾದ ಆನ್‌ಲೈನ್ ಅರ್ಜಿಯನ್ನು ಭೂ ಒಡೆತನ ಹೊಂದಿದ 136 ರೈತರು ತುಂಬಿದ್ದಾರೆ ಎಂಬುವುದು ತರ್ಕಕ್ಕೆ ಮತ್ತು ವಾಸ್ತವಕ್ಕೆ ನಿಲುಕದ ವಿಚಾರ. 120 ಸೆಕೆಂಡುಗಳಲ್ಲಿ ಈ ಅರ್ಜಿಗಳನ್ನು ತುಂಬುವುದು ಅಸಾಧ್ಯ. ಎಂಟೇ ನಿಮಿಷಗಳಲ್ಲಿ 295 ಅರ್ಜಿಗಳು ಬಂದಿವೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಇ– ಆಡಳಿತ ಕೇಂದ್ರ ವರದಿ ನೀಡಿದೆ. ಆದರೆ, 10 ಸಾವಿರ ಅರ್ಜಿಗಳು ಬಂದಿದ್ದವು ಎಂದು ಆಗಿನ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದ್ದರು. ಇದು ತನಿಖೆಗೆ ಅರ್ಹ ವಿಚಾರ.

ಇನ್ನೊಂದೆಡೆ, 26 ಸಾವಿರ ಅರ್ಜಿಗಳು ಬಂದಿದ್ದವು. ಅವುಗಳಲ್ಲಿ 295ನ್ನು ಆಯ್ಕೆ ಮಾಡಲಾಗಿದೆ ಎಂದೂ ಡಿ.ಕೆ. ಶಿವಕುಮಾರ್ ತಿಳಿಸಿದ್ದರು. ಹಾಗಾದರೆ ಇ–ಆಡಳಿತ ಕೇಂದ್ರ ಮಾಹಿತಿ ತಪ್ಪು ಆಗುತ್ತದೆ. ಆದ್ದರಿಂದ, ಈ ಸತ್ಯಾಸತ್ಯತೆ ಅರಿಯಲು ತನಿಖೆಯ ಅಗತ್ಯವಿದೆ. ಮೊದಲ ನಾಲ್ಕೇ ನಿಮಿಷಗಳಲ್ಲಿ 251 ಅರ್ಜಿಗಳು ಸೂಕ್ತವಾಗಿ ಸಲ್ಲಿಕೆ ಆಗಿವೆ ಎಂದರೆ ಮಾಹಿತಿ ಸೋರಿಕೆ ಮಾಡಿರುವ ಶಂಕೆಯನ್ನೂ ಹುಟ್ಟಿಸುತ್ತದೆ.

ಅರ್ಜಿ ಸಲ್ಲಿಸಿ ಆಯ್ಕೆಯಾದ ಫಲಾನುಭವಿಗಳಿಗೆ ಮೊದಲು ತಿಳಿಸಿದ ಕೃಷಿ ಭೂಮಿಯ ಬದಲಾಗಿ ಬೇರೆ ಕೃಷಿ ಭೂಮಿಯನ್ನು ನಿಗದಿ ಮಾಡಲು ಸಮ್ಮತಿಸಿರುವುದು, ಕೆಲವರಿಗೆ ಜಮೀನಿನ ಸಂಖ್ಯೆಯನ್ನು ಸರಿಪಡಿಸಲು ಅವಕಾಶ ನೀಡಿರುವುದೂ ಅನುಮಾನಾಸ್ಪದವಾಗಿದೆ. ಯಾಕೆಂದರೆ, ಕೃಷಿ ಭೂಮಿಯನ್ನೇ ಸೌರ ವಿದ್ಯುತ್ ಘಟಕಗಳಿಗೆ ನೀಡಬೇಕು ಎಂದು ಮೊದಲೇ ಸೂಚಿಸಲಾಗಿತ್ತು. ಈ ಎಲ್ಲ ಅನುಮಾನಗಳಿಂದಾಗಿ ಈ ಪ್ರಕ್ರಿಯೆ ಬಗ್ಗೆ ಕೂಲಂಕಷ ತನಿಖೆಯ ಅವಶ್ಯಕತೆ ಇದೆ ಎಂದು ಟಿಪ್ಪಣಿಯಲ್ಲಿದೆ.

ಸಂಕ್ಷಿಪ್ತ ಸುದ್ದಿ

ಕೆಪಿಟಿಸಿಎಲ್: ಮತ್ತೆ ಆರು ಮಂದಿ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದ ಮೇಲೆ ಮತ್ತೆ ಆರು ಜನ ಆರೋಪಿಗಳನ್ನು ಗುರುವಾರ ಬಂಧಿಸಲಾಗಿದೆ. ಇದರೊಂದಿಗೆ ಆರೋಪಿಗಳ ಸಂಖ್ಯೆ 29ಕ್ಕೆ ಏರಿಕೆಯಾಗಿದೆ.

ಗೋಕಾಕ ತಾಲ್ಲೂಕಿನ ಬಗರನಾಳದ ಈರಣ್ಣ ಮಲ್ಲಪ್ಪ ಬಂಕಾಪುರ (26), ಶಿವಾನಂದ ರಾಮಪ್ಪ ಕುಮೋಜಿ (22), ರಾಮದುರ್ಗ ತಾಲ್ಲೂಕಿನ ಬಟಕುರ್ಕಿಯ ಆದಿಲ್‌ಶಾ ಸಿಖಂದರ್ ತಾಸೇವಾಲೆ (23), ಮೂಡಲಗಿ ತಾಲ್ಲೂಕಿನ ಖಾನಟ್ಟಿಯ ಮಹಾಂತೇಶ ಹಣಮಂತ ಹೊಸಉಪ್ಪಾರ (22) ನಾಗನೂರು ಗ್ರಾಮದ ಮಹಾಲಿಂಗ ಭೀಮಪ್ಪ ಕುರಿ (30), ಸವದತ್ತಿ ತಾಲ್ಲೂಕಿನ ಮೆಳ್ಳಿಕೇರಿಯ ಸುಂದರ ಶಿವಾನಂದ ಬಾಳಿಕಾಯಿ (23) ಬಂಧಿತರು.

ಇವರೆಲ್ಲರೂ ಸ್ಮಾರ್ಟ್‌ವಾಚ್, ಮೈಕ್ರೊ ಚಿಪ್ ಸೇರಿದಂತೆ ಇತರ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷೆ ಕೇಂದ್ರದೊಳಗೆ ತೆಗೆದುಕೊಂಡು ಹೋಗಿ ಪರೀಕ್ಷೆ ಬರೆದಿದ್ದಾರೆ. ಅಕ್ರಮಕ್ಕೆ ಬಳಸಿದ ಉಪಕರಣಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ಚಾಮುಲ್: ಖರೀದಿ ದರ ₹2 ಹೆಚ್ಚಳ

ಚಾಮರಾಜನಗರ: ರೈತರಿಂದ ಖರೀದಿಸುವ ಪ್ರತಿ ಲೀಟರ್ ಹಾಲಿನ ದರವನ್ನು ₹ 2 ಹೆಚ್ಚಿಸಲು ಜಿಲ್ಲಾ ಹಾಲು ಒಕ್ಕೂಟವು ನಿರ್ಧರಿಸಿದ್ದು, ಪರಿಷ್ಕೃತ ದರ ಶುಕ್ರವಾರದಿಂದಲೇ ಜಾರಿಗೆ ಬರಲಿದೆ. ಸದ್ಯ ಪ್ರತಿ ಲೀಟರ್‌ಗೆ ₹26.85 ನೀಡುತ್ತಿದ್ದು, ಇನ್ನು ಮುಂದೆ ₹28.85 ಸಿಗಲಿದೆ.

'ಅ.15ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಹಾಲು ಉತ್ಪಾದನೆ ವೆಚ್ಚ ಹೆಚ್ಚಾಗಿದ್ದು, ರಾಸುಗಳಲ್ಲಿ ಕಾಣಿಸಿಕೊಂಡಿರುವ ಚರ್ಮಗಂಟು ರೋಗದಿಂದಾಗಿ ಉತ್ಪಾದನೆಯೂ ಕುಸಿದಿದೆ. ಉತ್ಪಾದಕರನ್ನು ಪ್ರೋತ್ಸಾಹಿಸುವುದಕ್ಕಾಗಿ ಖರೀದಿ ದರವನ್ನು ಹೆಚ್ಚಿಸಲಾಗಿದೆ' ಎಂದು ಚಾಮುಲ್ ಹೇಳಿದೆ.

ಧರ್ಮಸ್ಥಳ: 25ಕ್ಕೆ ದೇವರ ದರ್ಶನದಲ್ಲಿ ವ್ಯತ್ಯಯ

ಉಜಿರೆ (ದಕ್ಷಿಣ ಕನ್ನಡ): ಸೂರ್ಯಗ್ರಹಣ ಇರುವುದರಿಂದ ಅ.25ರಂದು ಮಧ್ಯಾಹ್ನ 2.30ರಿಂದ ರಾತ್ರಿ 7.30ರವರೆಗೆ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನದಲ್ಲಿ, ದೇವರ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ದೇವಳದ ಪ್ರಕಟಣೆ ತಿಳಿಸಿದೆ.

‘ಕರ್ನಾಟಕ– ಭಾರತ್ ಗೌರವ್ ಕಾಶಿ ದರ್ಶನ ಯಾತ್ರೆ ರೈಲು ಶೀಘ್ರ’

ಬೆಂಗಳೂರು: ‘ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ‘ಕರ್ನಾಟಕ– ಭಾರತ್ ಗೌರವ್ ಕಾಶಿ ದರ್ಶನ’ ರೈಲು ಯಾತ್ರೆಗೆ ರಾಜ್ಯ ಪ್ರವಾಸೋದ್ಯಮ ನಿಗಮ (ಕೆಎಸ್‌ಟಿಡಿಸಿ) ಮತ್ತು ಭಾರತೀಯ ರೈಲ್ವೆ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮದ (ಐಆರ್‌ಸಿಟಿಸಿ) ಮೂಲಕ ಟಿಕೆಟ್ ಕಾದಿರಿಸುವಿಕೆ ಶೀಘ್ರ ಆರಂಭಿಸಲಾಗುವುದು’ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಕೆಎಸ್‌ಟಿಡಿಸಿ, ಐಆರ್‌ಸಿಟಿಸಿ, ರೈಲ್ವೆ ಅಧಿಕಾರಿಗಳು ಮತ್ತು ಇಲಾಖೆಯ ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಅವರು, ‘ರೈಲಿನ ಸಿದ್ಧತೆಗಳನ್ನು ಇದೇ 30ರ ಒಳಗೆ ಪೂರ್ಣಗೊಳಿಸಬೇಕು. ಟಿಕೆಟ್ ಕಾದಿರಿಸಲು ವೆಬ್‌ಸೈಟ್ ಹಾಗೂ ಇತರ ಅಗತ್ಯ ವಿಷಯಗಳನ್ನು ಕೆಲವೇ ದಿನಗಳಲ್ಲಿ ಪ್ರಕಟಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

‘ಮಾಣಿಪ್ಪಾಡಿ ವರದಿ ಕುರಿತು ಯಾವುದೇ ತೀರ್ಮಾನ ಕೈಗೊಂಡಿಲ್ಲ’

ಬೆಂಗಳೂರು: ‘ವಕ್ಫ್ ಸ್ಥಿರಾಸ್ತಿ ಕಬಳಿಕೆಗೆ ಸಂಬಂಧಿಸಿದ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ 2022ರ ಸೆಪ್ಟೆಂಬರ್ 21ರಂದೇ ಮಂಡಿಸಲಾಗಿದೆ. ಆದರೆ, ಈ ಕುರಿತು ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಮಾಜಿ ಸಚಿವ ಎಸ್.ಕೆ. ಕಾಂತಾ ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿತು. ಸರ್ಕಾರದ ಪರ ವಕೀಲೆ ಪ್ರತಿಮಾ ಹೊನ್ನಾಪುರ, ‘ವರದಿಯನ್ನು ಉಭಯ ಸದನಗಳಲ್ಲಿ ಈಗಾಗಲೇ ಮಂಡಿಸಲಾಗಿದೆ. ಸರ್ಕಾರ ತೀರ್ಮಾನ ಕೈಗೊಂಡ ನಂತರ ಆ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗುವುದು. ಅದಕ್ಕಾಗಿ ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ಪೀಠ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಕರಡು ನೀತಿ– ಮಾರ್ಗಸೂಚಿಗೆ ಸಂಪುಟ ಒಪ್ಪಿಗೆ

ಏತ ನೀರಾವರಿ ನಿರ್ವಹಣೆಗೆ ಹೊರಗುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಗೆ ಒಳಪಡುವ ಪ್ರಮುಖ ಏತ ನೀರಾವರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಹೊರಗುತ್ತಿಗೆಗೆ ನೀಡುವ ಸಂಬಂಧ ರೂಪಿಸಿರುವ ಕರಡು ನೀತಿ ಮತ್ತು ಮಾರ್ಗಸೂಚಿಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಏತ ನೀರಾವರಿ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಸಮಸ್ಯೆಗಳನ್ನು ಎದುರಿಸಲಾಗುತ್ತಿದೆ. ಅವುಗಳೆಂದರೆ, ಸ್ಥಳೀಯ ಕಾರ್ಯಾಚರಣೆ ಮತ್ತು ನಿರ್ವಹಣಾ ಏಜೆನ್ಸಿಗಳಲ್ಲಿ ವೃತ್ತಿಪರತೆಯ ಕೊರತೆ, ಅನನುಭವಿ ಕಾರ್ಯಾಚರಣೆ ಸಿಬ್ಬಂದಿ, ಪ್ರಮುಖ ಸ್ಥಾವರ ಹಾಗೂ ಯಂತ್ರೋಪಕರಣಗಳ ನೈಜ ಸಮಯದ ಕಾರ್ಯಕ್ಷಮತೆಯ ಮಾಹಿತಿ ಕೊರತೆ ಇದೆ ಎಂದರು.

ಇದರಿಂದಾಗಿ, ಸಾಕಷ್ಟು ಏತ ನೀರಾವರಿಯಲ್ಲಿ ತಾಂತ್ರಿಕ ನಿರ್ವಹಣೆ ಸಾಧ್ಯವಾಗದೇ ಮೋಟಾರ್‌ಗಳು, ಪಂಪ್‌ಸೆಟ್‌ಗಳು ಹಾಳಾಗಿವೆ. ಇವುಗಳ ರಿಪೇರಿಯೂ ಆಗುತ್ತಿಲ್ಲ. ಇದರಿಂದಾಗಿ ನಾಲೆಯ ಕಟ್ಟ ಕಡೆಯ ರೈತರಿಗೆ ನೀರು ತಲುಪುತ್ತಿಲ್ಲ. ವಿದ್ಯುತ್ ಸಂಪರ್ಕವೂ ಹಾಳಾಗಿರುವ ಸಾಧ್ಯತೆ ಇದೆ. ಆದ್ದರಿಂದ ಇವುಗಳ ಸಂಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ಹೊರಗುತ್ತಿಗೆ ನೀಡುವ ಅಂಶವನ್ನು ಒಳಗೊಂಡಿದೆ. ಇನ್ನು ಮುಂದೆ ಇವುಗಳ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಲಾಗುವುದು ಎಂದು ಮಾಧುಸ್ವಾಮಿ ಹೇಳಿದರು.

ಪ್ರಮುಖ ತೀರ್ಮಾನಗಳು:

- ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ ಅಡಿ 290 ಸಂಚಾರಿ ಪಶು ಚಿಕಿತ್ಸಾ ಘಟಕದ ವಾಹನಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸೇವಾ ಪೂರೈಕೆದಾರರ ಮೂಲಕ ಸೇವೆಯನ್ನು ಪಡೆಯಲು ಮತ್ತು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ.

ವಿದ್ಯಾರ್ಹತೆ, ಪದನಾಮ ಬದಲಾವಣೆ: ಕೃಷಿ ಇಲಾಖೆಯಲ್ಲಿ ನೇರ ನೇಮಕಾತಿ ಮತ್ತು ಬಡ್ತಿಗಾಗಿ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ನಿರ್ದೇಶಕರ ವೃಂದದ ಹುದ್ದೆಗಳಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಗೆ ಪದನಾಮದ ಬದಲಾವಣೆಯ ಜೊತೆಗೆ, ಹಿಂದಿನ ಪದವಿಗಳೊಂದಿಗೆ ಹೊಸ ಪದವಿ ಪದನಾಮಗಳಾದ ಬಿಎಸ್ಸಿ(ಅಗ್ರಿಕಲ್ಚರ್ ಮಾರ್ಕೆಟಿಂಗ್ ಮತ್ತು ಕೋ ಆಪರೇಷನ್)/ ಬಿಎಸ್ಸಿ(ಆನರ್ಸ್) ಬಿಜಿನೆಸ್ ಮ್ಯಾನೇಜ್‌ಮೆಂಟ್/ಬಿಎಸ್ಸಿ (ಆನರ್ಸ್) ಅಗ್ರಿ ಮಾರ್ಕೆಟಿಂಗ್ ಮತ್ತು ಕೋಆಪರೇಷನ್ ಸೇರಿಸಲು ಒಪ್ಪಿಗೆ.

ಮೀಸಲಾತಿ ಹೆಚ್ಚಳಕ್ಕೆ ಸುಗ್ರೀವಾಜ್ಞೆ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣ ಶೇ 6 ರಷ್ಟು ಹೆಚ್ಚಿಸುವ ನಿರ್ಧಾರವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಂಪುಟದ ನಿರ್ಧಾರವನ್ನು ರಾಜ್ಯಪಾಲರ ಅಂಕಿತಕ್ಕಾಗಿ ಶುಕ್ರವಾರ ಕಳುಹಿಸಲಾಗುವುದು. ಅವರ ಒಪ್ಪಿಗೆ ಸಿಕ್ಕಿದ ಬಳಿಕ ಕಾನೂನು ಜಾರಿ ಆಗಲಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

‘ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಟ್ಟಿಗೆ ಹೆಚ್ಚಿನ ಜಾತಿಗಳು ಸೇರಿವೆ. ಮೊದಲಿಗೆ ಪರಿಶಿಷ್ಟ ಜಾತಿಯಲ್ಲಿ 6 ಜಾತಿಗಳು ಇದ್ದವು. ಈಗ ಅದು 103 ಕ್ಕೆ ಹೆಚ್ಚಿದೆ. ಪರಿಶಿಷ್ಟ ಪಂಗಡದಲ್ಲಿ 2 ರಿಂದ 3 ಜಾತಿಗಳು ಇದ್ದವು, ಈಗ 56 ಜಾತಿಗಳಿವೆ. ಮೀಸಲಾತಿ ಹೆಚ್ಚಳಕ್ಕೆ ಇದನ್ನೇ ಸಮರ್ಥನೆಯನ್ನಾಗಿ ಬಳಸಿಕೊಳ್ಳಲಾಗುವುದು. ಎಲ್ಲರಿಗೂ ಸೂಕ್ತ ಪ್ರಾತಿನಿಧ್ಯ ನೀಡಬೇಕಾಗುತ್ತದೆ. ಇದಕ್ಕಾಗಿ ಮೀಸಲಾತಿ ಹೆಚ್ಚಿಸುವುದು ಅನಿವಾರ್ಯ ಎಂಬುದನ್ನು ಹೇಳಬೇಕಾಗುತ್ತದೆ’ ಎಂದು ಅವರು ಹೇಳಿದರು.

‘ಸಂವಿಧಾನದ ಒಂಬತ್ತನೇ ಪರಿಚ್ಛೇದದ ಅಡಿ ಮೀಸಲಾತಿ ಪ್ರಮಾಣ ಹೆಚ್ಚಿಸುವುದನ್ನು ಕೇಳುವುದಕ್ಕೂ ಮೊದಲು ಇತರ ಸಮುದಾಯಗಳ ಮೀಸಲಾತಿ ಬೇಡಿಕೆಗಳನ್ನು ಪರಿಗಣಿಸಬೇಕಾಗುತ್ತದೆ. ಮೊದಲಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಿ, ಉಳಿದದ್ದು ಬಳಿಕ ನೋಡೋಣ ಎಂಬ ತೀರ್ಮಾನಕ್ಕೆ ಬರಲಾಯಿತು’ ಎಂದು ಹೇಳಿದರು.

‘ತಮಿಳುನಾಡು ಒಂಬತ್ತನೇ ಪರಿಚ್ಛೇದದ ಅಡಿ ಶೇ 69 ರಷ್ಟು ಮೀಸಲಾತಿ ನೀಡಿದೆ. ಇದರ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದೆ. ಆದರೆ, ಸುಪ್ರೀಂಕೋರ್ಟ್ ಮೀಸಲಾತಿಗೆ ತಡೆ ನೀಡಿಲ್ಲ. ಇದೇ ರೀತಿ ಹಲವು ರಾಜ್ಯಗಳು ಶೇ 50 ಕ್ಕೂ ಹೆಚ್ಚು ಮೀಸಲಾತಿ ನೀಡಿದ್ದು, ಇವುಗಳ ಪ್ರಕರಣಗಳೂ ಇತ್ಯರ್ಥವಾಗಿಲ್ಲ’ ಎಂದರು.

ಯಾವ ವರ್ಗಕ್ಕೆ ಕತ್ತರಿ?

‘ಯಾವ ವರ್ಗಕ್ಕೆ ಕತ್ತರಿ ಹಾಕಿ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗುತ್ತದೆ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವ ಮಾಧುಸ್ವಾಮಿ, ‘ಸ್ವಾಭಾವಿಕವಾಗಿ ಎಲ್ಲಿಂದ ಆಗುತ್ತದೆ ಎಂಬುದು ನಿಮಗೂ ಗೊತ್ತು, ನನಗೂ ಗೊತ್ತು. ನನ್ನ ಬಾಯಿಂದ ಏಕೆ ಹೇಳಿಸುತ್ತೀರಿ. ಮೀಸಲಾತಿ ಹೊಂದಿರುವ ಯಾವುದೇ ವರ್ಗದಿಂದ ಕಡಿತ ಮಾಡುವ ಪ್ರಶ್ನೆಯೇ ಇಲ್ಲ’ ಎಂದರು.



‘ಕಬ್ಬಿಗೆ ಎಫ್‌ಆರ್‌ಪಿ: ವಾರದೊಳಗೆ ಸಿಎಂ ಭೇಟಿ’

ಬೆಂಗಳೂರು: ‘ಒಂದು ವಾರದಲ್ಲಿ ಕಬ್ಬು ನಿಯಂತ್ರಣ ಮಂಡಳಿ ಸದಸ್ಯರು ಮುಖ್ಯಮಂತ್ರಿಯವರನ್ನು ಭೇಟಿ ಮಾಡುತ್ತೇವೆ’ ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತಿಳಿಸಿದರು.

ಕಬ್ಬು ನಿಯಂತ್ರಣ ಮಂಡಳಿಯ ಸಭೆ ಬಳಿಕ ಮಾತನಾಡಿ, ‘ಕೇಂದ್ರ ಸರ್ಕಾರ ಎಫ್‌ಆರ್‌ಪಿಯನ್ನು ಪ್ರತಿ ಟನ್‌ಗೆ ₹ 150 ಹೆಚ್ಚಿಸಿದೆ. ರಾಜ್ಯ ಸರ್ಕಾರ ಕೂಡಾ ಹೆಚ್ಚಿಸಬೇಕೆಂದು ರೈತರು ಮನವಿ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡುತ್ತೇವೆ’ ಎಂದರು.

‘ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಪ್ರಧಾನಿ ಚಾಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ. 2ರಿಂದ 4ರವರೆಗೆ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ವಿಡಿಯೊ ಸಂವಾದದ ಮೂಲಕ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ’ ಎಂದು ಕೈಗಾರಿಕೆ ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ನಿರಾಣಿ, ‘ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವರಾದ ಸ್ಮೃತಿ ಇರಾನಿ, ಭಗವಂತ ಖೂಬಾ, ನಿತಿನ್ ಗಡ್ಕರಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ’ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

A REPUTED Manufacturing Company is looking for Sales Manager with minimum 5yrs of FMCG experience. Willing to travel across Karnataka. WhatsApp resume to 9632661212

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಆರ್ಟಿಕಲ್ 370 ಪೋಸ್ಟರ್ ಬಿಡುಗಡೆ

ಲೈರಾ ಎಂಟರ್‌ಟೈನರ್ ಬ್ಯಾನರ್ ಮೂಲಕ ಭರತ್ ಗೌಡ, ಸಿ.ರಮೇಶ್ ಅವರು ನಿರ್ಮಿಸಿರುವ ಚಿತ್ರ ‘ಆರ್ಟಿಕಲ್ 370’. ಕೆ.ಶಂಕರ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಹಿಂದೆ ಕಾಶ್ಮೀರದಲ್ಲಿ ಪಂಡಿತರ ಮೇಲೆ ನಡೆದ ಘೋರ ಹಲ್ಲೆ, ದೌರ್ಜನ್ಯದ ಕಥೆ ಇಟ್ಟುಕೊಂಡು ಹಿಂದಿಯಲ್ಲಿ ‘ಕಾಶ್ಮೀರ್ ಫೈಲ್ಸ್’ ಚಿತ್ರ ಬಂದಿತ್ತು. ಈಗ ಅಲ್ಲಿ 370ನೇ ವಿಧಿ ತೆಗೆದು ಹಾಕಿದ ನಂತರ ಏನೆಲ್ಲಾ ಬದಲಾವಣೆಗಳಾಗಿವೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಹಾಗಾಗಿ ಸೈನಿಕರಿಗೆ, ಕಾಶ್ಮೀರಿ ಪಂಡಿತರಿಗೆ ಈ ಸಿನಿಮಾ ಅರ್ಪಣೆ ಎಂದು ಚಿತ್ರತಂಡ ಹೇಳಿದೆ.

‘ಒಂದಿಷ್ಟು ವಿಷಯ ಕಲೆ ಹಾಕಿ ಈ ಚಿತ್ರವನ್ನು ಮಾಡಿದ್ದೇವೆ. 60 ದಿನ ಮಡಿಕೇರಿ, ಚಿಕ್ಕಮಗಳೂರು ಸೇರಿದಂತೆ ಕಾಶ್ಮೀರದಲ್ಲಿ ಹೆಚ್ಚಿನ ಭಾಗದ ಶೂಟಿಂಗ್ ಮಾಡಿದ್ದೇವೆ. ಶಶಿಕುಮಾರ್, ಶೃತಿ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕಳೆದ ತಿಂಗಳು ಸೆನ್ಸಾರ್ ಆಗಿದ್ದು, ಬರುವ ನವೆಂಬರ್‌ನಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡುತ್ತೇವೆ’ ಎನ್ನುವುದು ನಿರ್ದೇಶಕ ಶಂಕರ್ ಮಾತು.

‘ನಿರ್ದೇಶಕಿಯಾಗಿ ಧುಮ್ಮಿಕ್ಕುವ ಅಭಿಲಾಷೆ’



ಹೆಡ್‌ಬುಷ್
ಶ್ರುತಿ ಹರಿಹರನ್

‘ಹೆಡ್‌ಬುಷ್’ ಸಿನಿಮಾದಲ್ಲಿ ಭೂಗತ ದೊರೆ ಎಂ.ಪಿ.ಜಯರಾಜ್ ಪಾತ್ರಕ್ಕೆ ‘ಡಾಲಿ’ ಧನಂಜಯ ಬಣ್ಣಹಚ್ಚಿದ್ರೆ, ‘ರತ್ನಪ್ರಭಾ’ ಎಂಬ ಪಾತ್ರದಲ್ಲಿ ನಟಿ ಶ್ರುತಿ ಹರಿಹರನ್ ನಟಿಸಿದ್ದಾರೆ. ತೆರೆಯಿಂದ ಕೊಂಚ ಬಿಡುವು ಪಡೆದು, ಮರಳಿರುವ ಶ್ರುತಿ ಅವರೊಂದಿಗೆ ಮಾತುಕತೆ ಇಲ್ಲಿದೆ

ನಟ ಧನಂಜಯ ಸಂದರ್ಶನ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಭಿಲಾಷ್ ಪಿ.ಎಸ್.

• ತೆರೆಯಿಂದ ಕೊಂಚ ದೂರವಿದ್ದಿರಿ. ಈ ಅವಧಿಯ ಬಗ್ಗೆ...

ಮಗುವಿನ ಜನ್ಮದ ಬಳಿಕ, ಆರೈಕೆ ದೃಷ್ಟಿಯಿಂದ ತೆರೆಯಿಂದ ಸುಮಾರು ಒಂದು ವರ್ಷ ನಾನೇ ದೂರವಿದ್ದೆ. ನಂತರದ ಎರಡು ವರ್ಷವನ್ನು ಕೋವಿಡ್ ಪಿಡುಗು ಆವರಿಸಿತು. ನಾನಷ್ಟೇ ಅಲ್ಲ, ಇಡೀ ಚಿತ್ರರಂಗವೇ ಆಗ ಸ್ತಬ್ಧವಾಗಿತ್ತು. ಆದರೂ, ಕೋವಿಡ್ ಪಿಡುಗಿನ ನಡುವೆ ಲಾಕ್‌ಡೌನ್ ತೆರವಾದ ಸಂದರ್ಭದಲ್ಲಿ ಬಹಳಷ್ಟು ಎಚ್ಚರಿಕೆ, ಮುಂಜಾಗ್ರತಾ ಕ್ರಮ ಕೈಗೊಂಡು ಕೆಲಸ ಮಾಡಿದ್ದೆವು. ಇದರ ಪರಿಣಾಮವೇ ಇಂದು ‘ಹೆಡ್‌ಬುಷ್’ ಪ್ರೇಕ್ಷಕರೆದುರಿಗಿದೆ. ಮಗಳಿಗೆ ಎಂಟು ತಿಂಗಳಷ್ಟೇ ಆಗಿದ್ದಾಗ, ನಾನು ಮತ್ತೆ ಬಣ್ಣಹಚ್ಚಿದ್ದೆ. ಸೂರ್ಯ ವಸಿಷ್ಠ ನಿರ್ದೇಶನದ ‘ಸಾರಾಂಶ’ ಎಂಬ ಸಿನಿಮಾ ಅದು. ಇದೂ ರಿಲೀಸ್‌ಗೆ ಸಿದ್ಧವಾಗಿದೆ. ಕಳೆದ ಮೂರು ವರ್ಷದಲ್ಲಿ ನನ್ನ ಸಿನಿಮಾ ರಿಲೀಸ್ ಆಗಿರದೇ ಇರಬಹುದು. ಅದರರ್ಥ ನಾನು ಬಣ್ಣಹಚ್ಚುವುದನ್ನು ನಿಲ್ಲಿಸಿದ್ದೇನೆ ಎಂದಲ್ಲ. 2023ರಲ್ಲಿ ನನ್ನ ಹಲವು ಸಿನಿಮಾಗಳು ತೆರೆಕಾಣಲಿವೆ. ನನಗೆಂದೂ ಈ ಅವಧಿ ದೊಡ್ಡ ಗ್ಯಾಪ್ ಎಂದೆನಿಸಲಿಲ್ಲ.

• ಬದಲಾದ ದೈಹಿಕ, ಮಾನಸಿಕ ಸ್ಥಿತಿಗೆ ಹೊಂದಿಕೊಂಡಿದ್ದು ಹೇಗೆ?

ನಾನೀಗ ದೈಹಿಕವಾಗಿ ಮೊದಲಿನಂತಿಲ್ಲ. ತೂಕ ಹೆಚ್ಚಾಗಿದೆ. ಮತ್ತೆ ಮೊದಲಿನಂತೆ ಕಾಣುವುದೂ ಕಷ್ಟಸಾಧ್ಯವಾಗಿದೆ. ಈ ವಿಷಯವನ್ನು ಪಕ್ಕಕ್ಕಿಡುತ್ತೇನೆ. ಮನಃಸ್ಥಿತಿ ವಿಚಾರಕ್ಕೆ ಬಂದರೆ, ಒಂದು ಅಪರಾಧಿ ಪ್ರಜ್ಞೆ ಕಾಡುತ್ತಿದೆ. ಮಗಳನ್ನು ಬಿಟ್ಟು ಕೆಲಸಕ್ಕೆ ಹೋದಾಗ, ‘ಅಯ್ಯೋ ಪಾಪ’ ಎಂದೆನಿಸುತ್ತದೆ. ನಾಯಕಿಯರಿಗಷ್ಟೇ ಅಲ್ಲ, ಪ್ರತಿ ಹೆಣ್ಣಿಗೂ ಕಾಡುವ ವಿಷಯ ಇದು. ಮದುವೆಯ ಬಳಿಕ ಆದ್ಯತೆಗಳೂ ಬದಲಾಗುತ್ತಾ ಹೋಗುತ್ತವೆ. ಕುಟುಂಬದ ಜವಾಬ್ದಾರಿ ಇದೆ. ಕೆಲವೊಮ್ಮೆ ಇದು ಒತ್ತಡಕ್ಕೂ ಕಾರಣವಾಗುತ್ತದೆ. ಆದರೆ, ನನ್ನ ಪತಿ ನನ್ನ ಬೆನ್ನಿಗೆ ನಿಂತಿದ್ದಾರೆ. ಮಗುವಿನ ಆರೈಕೆಗೆ ಕುಟುಂಬ ಜೊತೆಯಾಗಿದೆ. ಹೀಗಾಗಿ ನಾನು ಚಿತ್ರರಂಗದಲ್ಲಿ ಮತ್ತೆ ಸಕ್ರಿಯಳಾಗುತ್ತಿದ್ದೇನೆ.

• ಸಿನಿಪಯಣದಲ್ಲಿ ಮುಂದಿನ ಹೆಜ್ಜೆ...

ಪರಂವಃ ಸ್ಪಾಟ್‌ಲೈಟ್‌ನಡಿ ನಿರ್ಮಾಣವಾಗಿರುವ, ಅರ್ಜುನ್ ಲೂವಿಸ್ ಅವರ ‘ಸ್ಟ್ರಾಬರಿ’ ಸಿನಿಮಾ ಹಾಗೂ ಎನ್.ಎಸ್. ಶಂಕರ್ ಅವರ ‘ಈಗ’ ಬಿಡುಗಡೆಗೆ ಸಜ್ಜಾಗಿದೆ. ಎರಡು ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಈ ಬಗ್ಗೆ ಮುಂದೆ ಮಾಹಿತಿ ನೀಡುತ್ತೇನೆ.

ನಟಿಯಾಗಿ ಕೆಲಸ ನಿಲ್ಲಿಸಲು ಇಷ್ಟಪಡುವುದಿಲ್ಲ. ಅವಕಾಶಗಳು ಬಂದರೆ ಖಂಡಿತವಾಗಿಯೂ ಬಿಡುವುದಿಲ್ಲ. ನಿರ್ದೇಶಕಿಯಾಗಿ ಧುಮ್ಮಿಕ್ಕುವ ಅಭಿಲಾಷೆ ಇದೆ. ಇಲ್ಲಿಯವರೆಗೂ ಈ ಬಗ್ಗೆ ಒಂದು ಹಿಂಜರಿಕೆ ಇತ್ತು. ಆರಂಭಿಕ ಹೆಜ್ಜೆಯಾಗಿ ಒಂದು ಮ್ಯೂಸಿಕ್ ವಿಡಿಯೊ ನಿರ್ದೇಶಿಸಿ, ನಿರ್ಮಾಣ ಮಾಡಿದ್ದೇನೆ. ಶೀಘ್ರದಲ್ಲೇ ಇದು ಬಿಡುಗಡೆಯಾಗಲಿದೆ. ಬರವಣಿಗೆ ಆರಂಭಿಸಿದ್ದೇನೆ. ನಟನೆ, ನಿರ್ದೇಶನ ಹಾಗೂ ನಿರ್ಮಾಣ ಜೊತೆಜೊತೆಯಾಗಿ ಸಾಗಲಿದೆ.

• ಕೋವಿಡ್ ಬಳಿಕ, ಸಿನಿಮಾದಲ್ಲಿ ಹೆಣ್ಣಿನ ಪಾತ್ರ ಪೋಷಣೆಗೆ ಹೆಚ್ಚಿನ ಆದ್ಯತೆ ಸಿಗುತ್ತಿದೆ. ಈ ಬದಲಾವಣೆ ಕುರಿತು...

ಇದರ ಸಂಪೂರ್ಣ ಕ್ರೆಡಿಟ್ ಆನ್‌ಲೈನ್ ವೇದಿಕೆಗಳಿಗೆ, ಒಟಿಟಿ ಪ್ಲ್ಯಾಟ್‌ಫಾರಂಗಳಿಗೆ ಸಲ್ಲಬೇಕು. ಚಿತ್ರಮಂದಿರಗಳನ್ನೇ ನೋಡದ ಹಲವು ಮಹಿಳೆಯರ ಕೈಗೇ ಇಂದು ಸಿನಿಮಾ ತಲುಪುತ್ತಿದೆ. ಒಂದು ಕಾಲವಿತ್ತು, ಏಕಪರದೆ ಚಿತ್ರಮಂದಿರಗಳಲ್ಲಿ ಮಹಿಳೆಯರಿಗೆ ಶೌಚಾಲಯವೂ ಇರಲಿಲ್ಲ. ಸಿನಿಮಾಗಳು ಪುರುಷರಿಗಷ್ಟೇ ಸೀಮಿತ ಎನ್ನುವಂತಿತ್ತು. ಆ ಕಾಲದಿಂದ, ನಾವೀಗ ಮಲ್ಟಿಪ್ಲೆಕ್ಸ್, ಒಟಿಟಿ ಯುಗಕ್ಕೆ ಬಂದಿದ್ದೇವೆ. ಒಳ್ಳೆಯ ಕಥೆಗೆ ಖಂಡಿತಾ ಪ್ರೇಕ್ಷಕರಿದ್ದಾರೆ. ಸಿನಿಮಾ ಕಂಟೆಂಟ್‌ಗೆ ಆದ್ಯತೆ ದೊರೆಯುತ್ತಿದೆ. ಪ್ರಸ್ತುತ ಸನ್ನಿವೇಶದಲ್ಲಿ, ಒಬ್ಬ ನಟಿಯ ವಯಸ್ಸು, ಮದುವೆ, ದೈಹಿಕ ಆಕಾರ ಯಾವುದೂ ಪರಿಗಣನೆ ಆಗುತ್ತಿಲ್ಲ. ಮಹಿಳೆಯನ್ನು ಆಧಾರವಾಗಿಟ್ಟುಕೊಂಡು ಕಥೆ ಹೆಣೆಯಲಾಗುತ್ತಿದೆ. ‘ಈ ರೀತಿ ಕಂಟೆಂಟ್‌ಗೆ ಪ್ರೇಕ್ಷಕರಿದ್ದಾರೆ’ ಎನ್ನುವ ಧೈರ್ಯವೂ ಸಿನಿಮಾ ಬರಹಗಾರರಿಗೆ ಬಂದಿದೆ. ಹೆಣ್ಣಾಗಿ ಈ ಬದಲಾವಣೆ ಬಗ್ಗೆ ಖುಷಿ ಇದೆ.

• ನೈಜ ಘಟನೆ ಆಧಾರಿತ ಸಿನಿಮಾ ‘ಹೆಡ್‌ಬುಷ್’ನಲ್ಲಿ ಪಾತ್ರಕ್ಕಿದ್ದ ಸವಾಲುಗಳನ್ನು ಎದುರಿಸಿದ ಬಗೆ...

ಈ ಸಿನಿಮಾದ ಮೂಲ ಕೃತಿಯನ್ನು ನಾನು ಓದಿಲ್ಲ. ‘ರತ್ನಪ್ರಭಾ’ ಎನ್ನುವ ಪಾತ್ರವನ್ನು ನಿಭಾಯಿಸಲು ಸಂಪೂರ್ಣವಾದ ಮಾರ್ಗದರ್ಶನ ದೊರಕಿದ್ದು ಅಗ್ನಿ ಶ್ರೀಧರ್ ಅವರಿಂದ. ಅವರು ಕಣ್ಣಾರೆ ನೋಡಿದ್ದನ್ನು, ಅನುಭವಿಸಿದ್ದನ್ನು ನಮಗೆ ತಿಳಿಸಿದರು. ಹೀಗಾಗಿ ಪಾತ್ರದ ವಿಚಾರದಲ್ಲಿ ಅವರ ಮೇಲೆಯೇ ನಮ್ಮ ನಂಬಿಕೆ ಇತ್ತು. ‘ರತ್ನಪ್ರಭಾ’ is a opinionated women. ಪುರುಷ ಪ್ರಧಾನವಾಗಿದ್ದ ಆಗಿನ ಕಾಲದಲ್ಲೂ, ರತ್ನಪ್ರಭಾ ಯಾವತ್ತೂ ಹೆದರಲಿಲ್ಲ. ಆಕೆಯ ಮಾತಿನಲ್ಲೇ ಒಂದು ಶಕ್ತಿ ಇತ್ತು. ಎಲ್ಲಾ ಕಲಾವಿದರಿಗೂ ಮಾರ್ಗದರ್ಶನ ನೀಡಿ, ಪಾತ್ರಗಳು ಸಹಜವಾಗಿ ಮೂಡುವಂತೆ ಮಾಡಿರುವ ಅಗ್ನಿ ಶ್ರೀಧರ್ ಅವರಿಗೇ ಎಲ್ಲ ಕ್ರೆಡಿಟ್ ಸಲ್ಲಬೇಕು. ‘ರತ್ನಪ್ರಭಾ’ ಪಾತ್ರ ಮಾಡಿರುವುದಕ್ಕೆ ನನಗೆ ಹೆಮ್ಮೆ ಇದೆ, ಅದಕ್ಕೆ ನ್ಯಾಯ ಒದಗಿಸಿದ್ದೇನೆ ಎನಿಸುತ್ತಿದೆ.

• ಕನ್ನಡ ಚಿತ್ರರಂಗದಲ್ಲಿ ಎದ್ದಿರುವ ಹೊಸ ಅಲೆಯ ಬಗ್ಗೆ ನಿರ್ಮಾಪಕಿಯಾಗಿ ನಿಮ್ಮ ಮಾತು...

ಈಗಿನ ಸಿನಿಮಾ ಬರಹಗಾರರಿಗೆ ಯಾವುದೇ ಅಡೆತಡೆ ಇಲ್ಲ. ಅವಕಾಶಗಳು ಹೇರಳವಾಗಿವೆ. ಒಂದು ಕಂಟೆಂಟ್ ಯಶಸ್ಸು ಕಾಣುತ್ತದೆಯೋ ಇಲ್ಲವೋ ಎನ್ನುವ ಭಯ ಯಾರಿಗೂ ಇಲ್ಲ. ಅದ್ಭುತ ಕಂಟೆಂಟ್‌ಗಳನ್ನು ತೆರೆಯ ಮೇಲೆ ತರುವಲ್ಲಿ ಧನಂಜಯ, ರಕ್ಷಿತ್ ಶೆಟ್ಟಿ ಅವರಂಥ ಹಲವರು ಹೊಸಬರಿಗೆ ಅವಕಾಶ ನೀಡುತ್ತಿದ್ದಾರೆ.

• ಧನಂಜಯ ಅವರನ್ನು ಜಯರಾಜ್ ಆಗಿ ಕಂಡ ರೀತಿ...

ನನ್ನ ಹಾಗೂ ಧನಂಜಯ ಅವರ ಸ್ನೇಹ ದಶಕದ್ದು. ‘ರಾಟೆ’ ಸಿನಿಮಾ ಮೂಲಕ ನಮ್ಮ ಈ ಸಿನಿವೃತ್ತಿಯನ್ನು ಜೊತೆಗೇ ಆರಂಭಿಸಿದ್ದೆವು. ‘ಅಲ್ಲಿಂದೀಚೆಗೆ ಧನಂಜಯ ಬದಲಾಗಿದ್ದಾರಾ?’ ಎಂದು ಕೇಳಿದರೆ ಖಂಡಿತಾ ಅವರ ಜೀವನ ಬದಲಾಗಿದೆ. ಅವರು, ಕಂಡ ಕನಸುಗಳನ್ನು ನನಸಾಗಿಸುತ್ತಾ ಬಂದಿದ್ದಾರೆ. ಆದರೆ ಅವರ ವ್ಯಕ್ತಿತ್ವ ಬದಲಾಗಿಲ್ಲ. ಬಂದ ದಾರಿಯನ್ನು ಅವರು ಯಾವತ್ತೂ ಮರೆತಿಲ್ಲ. ಎಷ್ಟೇ ಎತ್ತರಕ್ಕೆ ಬೆಳೆದರೂ ಜೊತೆಗೊಂದಿಷ್ಟು ಜನರನ್ನೂ ಕರೆದೊಯ್ಯುತ್ತಾರೆ. ಹೊಸಬರಿಗೆ ಡಾಲಿ ಪಿಕ್ಚರ್ಸ್ ಮೂಲಕ ಅವಕಾಶ ನೀಡುತ್ತಿದ್ದಾರೆ. ಈ ಸಿನಿಮಾದಲ್ಲಿ ಅವರು ಡಾನ್ ಜಯರಾಜ್ ಆಗಿದ್ದರೂ, ಅವರ ವ್ಯಕ್ತಿತ್ವ ಇನ್ನೂ ‘ಜಯನಗರ 4th Block’ನಲ್ಲಿರುವ ಧನಂಜಯನಂತೆಯೇ ಇದೆ.

‘ಜನರು ಶುದ್ಧ ಗಾಳಿ ಉಸಿರಾಡಲು ಬಿಡಿ’


ನವದೆಹಲಿ: ದೆಹಲಿ ಮತ್ತು ಇತರೆಡೆಗಳಲ್ಲಿ ಪಟಾಕಿ ನಿಷೇಧ ತೆರವುಗೊಳಿಸಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ತುರ್ತು ವಿಚಾರಣೆಗೆ ಗುರುವಾರ ನಿರಾಕರಿಸಿರುವ ಸುಪ್ರೀಂ ಕೋರ್ಟ್, ‘ದಯವಿಟ್ಟು ಜನರು ಶುದ್ಧ ಗಾಳಿ ಉಸಿರಾಡಲು ಬಿಡಿ. ಹಬ್ಬ ಆಚರಣೆಗೆ ಹಲವಾರು ದಾರಿಗಳಿವೆ. ನೀವು ಸಿಹಿತಿಂಡಿ ಖರೀದಿಸಲು ಹಣ ಖರ್ಚು ಮಾಡಿ’ ಎಂದು ಹೇಳಿದೆ.

ಪಟಾಕಿ ನಿಷೇಧದ ವಿರುದ್ಧ ಬಿಜೆಪಿ ಸಂಸದ ಮನೋಜ್ ತಿವಾರಿ ಪರ ಅರ್ಜಿ ಸಲ್ಲಿಸಿದ್ದ ವಕೀಲ ಶಶಾಂಕ್ ಶೇಖರ್ ಝಾ ಅವರು, ಬೆಳೆಯ ಅವಶೇಷ ಸುಡುವುದರಿಂದ ದೆಹಲಿಯಲ್ಲಿ ವಾಯು ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ವಾದಿಸಿದರು. ಈ ವೇಳೆ ನ್ಯಾಯಮೂರ್ತಿ ಎಂ.ಆರ್.ಶಾ ನೇತೃತ್ವದ ಪೀಠವು ಹೀಗೆ ಅಭಿಪ್ರಾಯಪಟ್ಟಿದೆ.

‘ಮಿಷನ್ ಲೈಫ್’ ಯೋಜನೆಗೆ ಚಾಲನೆ

ಕೇವಡಿಯಾ, ಗುಜರಾತ್ (ಪಿಟಿಐ): ಹವಾಮಾನ ಬದಲಾವಣೆಯಿಂದಾಗಿ ಆಗುವ ವಿಪತ್ತುಗಳಿಂದ ಭೂಮಿಯನ್ನು ರಕ್ಷಿಸುವ ಗುರಿಯನ್ನು ಹೊಂದಿರುವ ಮಹತ್ವಾಕಾಂಕ್ಷೆಯ ‘ಮಿಷನ್ ಲೈಫ್’ ಯೋಜನೆಗೆ ಗುರುವಾರ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಚಾಲನೆ ನೀಡಿದರು.

‘ಹವಾಮಾನ ಬದಲಾವಣೆಯಿಂದಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಸರ್ಕಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂಬ ಮನೋಭಾವ ಬದಲಾಗಬೇಕು. ಪ್ರತಿಯೊಬ್ಬರೂ ಹವಾಮಾನ ಸ್ನೇಹಿ ಜೀವನ ಶೈಲಿ ಅಳವಡಿಸಿಕೊಳ್ಳಬೇಕು’ ಎಂದು ಪ್ರಧಾನಿ ಹೇಳಿದರು. ‘ಮಿಷನ್ ಲೈಫ್’ ಎಂಬುದು ‘ಮಿಷನ್–ಲೈಫ್‌ಸ್ಟೈಲ್ ಫಾರ್ ಎನ್‌ವಿರಾನ್‌ಮೆಂಟ್’ (ಪರಿಸರಕ್ಕಾಗಿ ಜೀವನಶೈಲಿ) ಎಂಬುದರ ಸಂಕ್ಷಿಪ್ತರೂಪ. ಈ ಕ್ರಿಯಾಯೋಜನೆಯನ್ನು ಎಲ್ಲ ರಾಷ್ಟ್ರಗಳು ಜಾರಿಗೊಳಿಸಲಿವೆ.



ಆ್ಯಂಟೊನಿಯೊ ಗುಟೆರಸ್ ಮತ್ತು ನರೇಂದ್ರ ಮೋದಿ

ಪ್ರತಿಯೊಬ್ಬರೂ ಸುಸ್ಥಿರ ಜೀವನ ವಿಧಾನ ಅಳವಡಿಸಿಕೊಳ್ಳಬೇಕು. ಹವಾಮಾನ ಬದಲಾವಣೆಗಿಂತಲೂ ದೊಡ್ಡ ಸವಾಲು ಮತ್ತೊಂದಿಲ್ಲ. ಇದನ್ನು ಮೆಟ್ಟಿನಿಲ್ಲಲು ಎಲ್ಲರ ಸಹಕಾರ ಅಗತ್ಯ ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು ಹೇಳಿದರು.

ಉದ್ಯೋಗ ಮೇಳ: ಪ್ರಧಾನಿ ಮೋದಿ ಅವರು ಇದೇ 22ರಂದು ಬೃಹತ್ ಉದ್ಯೋಗ ಮೇಳಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ. ಒಟ್ಟು 10 ಲಕ್ಷ ಮಂದಿಗೆ ಉದ್ಯೋಗವಕಾಶ ಕಲ್ಪಿಸುವುದು ಮೇಳದ ಉದ್ದೇಶ. ಕಾರ್ಯಕ್ರಮದ ವೇಳೆ 75 ಸಾವಿರ ಮಂದಿಗೆ ನೇಮಕಾತಿ ಪತ್ರ ವಿತರಿಸಲಾಗುವುದು ಎಂದು ಪ್ರಧಾನಿ ಕಾರ್ಯಾಲಯ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸಂಸದರ ಚಿಕಿತ್ಸೆ: ಏಮ್ಸ್‌ನಿಂದ ಎಸ್‌ಒಪಿ

ನವದೆಹಲಿ (ಪಿಟಿಐ): ಲೋಕಸಭೆ, ರಾಜ್ಯಸಭೆ ಸದಸ್ಯರಿಗೆ ಚಿಕಿತ್ಸಾ ಸೌಲಭ್ಯವನ್ನು ಸುವ್ಯವಸ್ಥಿತಗೊಳಿಸುವುದಕ್ಕಾಗಿ ದೆಹಲಿಯ ಏಮ್ಸ್ ಆಸ್ಪತ್ರೆಯು ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಸಿದ್ಧಪಡಿಸಿದೆ. ಇದಕ್ಕೆ ಕೆಲ ವೈದ್ಯರಿಂದ ವಿರೋಧ ವ್ಯಕ್ತವಾಗಿದೆ.

ಸಂಸದರ ಜತೆ ಸಮನ್ವಯ ಸಾಧಿಸಲು ನೋಡೆಲ್ ಅಧಿಕಾರಿಯನ್ನು ನೇಮಿಸಲಾಗುವುದು. ಆಸ್ಪತ್ರೆಯ ಆಡಳಿತ ವಿಭಾಗದ ವೈದ್ಯರು ಆಸ್ಪತ್ರೆಯ ನಿಯಂತ್ರಣ ಕೊಠಡಿಯಲ್ಲಿ ಪಾಳಿಯ ಆಧಾರದಲ್ಲಿ ಕೆಲಸ ಮಾಡಲಿದ್ದಾರೆ. ಸಂಸದರ ಕಚೇರಿ ಸಿಬ್ಬಂದಿಯು ಕರೆ ಮಾಡಿ ವಿಷಯ ತಿಳಿಸಿದರೆ ಅವರು ತಜ್ಞ ವೈದ್ಯರ ಜೊತೆ ಮಾತನಾಡಿ ಭೇಟಿಯ ವ್ಯವಸ್ಥೆ ಮಾಡಲಿದ್ದಾರೆ ಎಂದು ಏಮ್ಸ್ ನಿರ್ದೇಶಕರು ತಿಳಿಸಿದ್ದಾರೆ.

‘10 ಕೋಟಿ ಡೋಸ್ ಅವಧಿ ಮೀರಿದೆ’

ಪುಣೆ (ಪಿಟಿಐ): ‘ಹೋದ ವರ್ಷದ ಡಿಸೆಂಬರ್‌ನಲ್ಲೇ ಕೋವಿಶೀಲ್ಡ್ ಲಸಿಕೆಯ ಉತ್ಪಾದನೆ ಸ್ಥಗಿತಗೊಳಿಸಿದ್ದೆವು. ಆಗ ದಾಸ್ತಾನು ಇದ್ದ ಡೋಸ್‌ಗಳ ಪೈಕಿ 10 ಕೋಟಿ ಡೋಸ್‌ಗಳ ಅವಧಿ ಮೀರಿದೆ’ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆದಾರ್ ಪೂನಾವಾಲಾ ಹೇಳಿದ್ದಾರೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಬಿಡುಗಡೆ

ನವದೆಹಲಿ: ಆರಂಭಿಕ ಕಲಿಕಾ ಕೋರ್ಸ್‌ಗಳಿಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಬಿಡುಗಡೆ ಮಾಡಿದರು. 3 ರಿಂದ 8 ವರ್ಷದೊಳಗಿನ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಮಾನದಂಡಗಳನ್ನು ಬಿಡುಗಡೆ ಮಾಡಲಾಗಿದೆ

2023ರಲ್ಲಿ ಸೂರ್ಯನಲ್ಲಿಗೆ ಇಸ್ರೊ ಉಪಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) 2023ರಲ್ಲಿ ಸೂರ್ಯನ ಬಳಿಗೆ ಒಂದು ಉಪಗ್ರಹ ಮತ್ತು ಚಂದ್ರನಲ್ಲಿಗೆ ಒಂದು ನೌಕೆಯನ್ನು ಕಳುಹಿಸಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಸ್.ಸೋಮನಾಥ್ ಅವರು ಹೇಳಿದ್ದಾರೆ. 2024ರ ಗಗನಯಾನ ಯೋಜನೆ ಸಂಬಂಧ, 2023ರಲ್ಲಿ ಆರು ಕಾರ್ಯಾಚರಣೆಗಳನ್ನು ನಡೆಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

2023ರ ಫೆಬ್ರುವರಿಯಲ್ಲಿ ಚಂದ್ರನಲ್ಲಿಗೆ ‘ಆದಿತ್ಯ–ಎಲ್1’ ಉಪಗ್ರಹವನ್ನು ಕಳುಹಿಸಲು ಯೋಜನೆ ರೂಪಿಸಲಾಗಿದೆ. 400 ಕೆ.ಜಿ. ತೂಕದ ಆದಿತ್ಯ–ಎಲ್1 ಸೂರ್ಯನನ್ನು ಸುತ್ತು ಹಾಕುತ್ತಾ, ಅಧ್ಯಯನ ನಡೆಸಲಿದೆ. ಜೂನ್ ವೇಳೆಗೆ ಚಂದ್ರನ ಬಳಿಗೆ ಚಂದ್ರಯಾನ–3 ನೌಕೆಯನ್ನು ಕಳುಹಿಸಲಾಗುತ್ತದೆ. ಚಂದ್ರಯಾನ–2 ಯೋಜನೆಯನ್ನೇ ಚಂದ್ರಯಾನ–3 ಅನುಸರಿಸಲಿದೆ. ಆದರೆ ನೌಕೆಯು ಹೆಚ್ಚು ಕರಾರುವಾಕ್ಕಾಗಿ ಕಾರ್ಯನಿರ್ವಹಿಸುವಂತೆ ಅಭಿವೃದ್ಧಿಪಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಇಸ್ರೊವಿನ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯಾದ ಗಗನಯಾನವೂ ನಿಗದಿಯಂತೆ ನಡೆಯುತ್ತಿದೆ. 2024ರಲ್ಲಿ ಮಾನವರನ್ನು ಚಂದ್ರನಲ್ಲಿಗೆ ಕಳುಹಿಸುವುದಕ್ಕೂ ಮುನ್ನ, ಆರು ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಾಗತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಬ್ರಿಟನ್ ಮುಂದಿನ ಪ್ರಧಾನಿ ಯಾರು?

ಲಂಡನ್ (ರಾಯಿಟರ್ಸ್/ಎಎಫ್‌ಪಿ): ಲಿಜ್ ಟ್ರಸ್ ಅವರ ರಾಜೀನಾಮೆಯ ಬೆನ್ನಲ್ಲೇ ಬ್ರಿಟನ್‌ನ ಮುಂದಿನ ಪ್ರಧಾನಿ ಯಾರಾಗಬಹುದು ಎನ್ನುವ ಪ್ರಶ್ನೆ ಮತ್ತು ಕುತೂಹಲ ಮೂಡಿದೆ.

ಲಿಜ್ ಟ್ರಸ್ ಅವರು ಸರ್ಕಾರದ ವೆಚ್ಚಗಳನ್ನು ತಗ್ಗಿಸದ ನಿಬಂಧನೆ ಪಾಲಿಸುವ ಮತ್ತು ತೆರಿಗೆ ಕಡಿತಗೊಳಿಸುವ ಭರವಸೆಗಳನ್ನು ನೀಡಿ, ಟೋರಿ ನಾಯಕತ್ವದ ಚುನಾವಣೆಯಲ್ಲಿ ಎದುರಾಳಿ, ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಅವರ ವಿರುದ್ಧ ಸುಲಭ ಗೆಲುವು ಸಾಧಿಸಿದ್ದರು. ಹೆಚ್ಚುವರಿ ಸಾಲ ತರುವ ಮೂಲಕ ತಮ್ಮ ಪ್ರಸ್ತಾವಗಳಿಗೆ ಹಣಕಾಸು ನೆರವು ನೀಡುವ ಟ್ರಸ್ ಅವರ ಯೋಜನೆಗಳು ಅಜಾಗರೂಕವಾಗಿವೆ. ಇವು ದಶಕಗಳಲ್ಲೇ ಅತ್ಯಂತ ಹೆಚ್ಚಿನ ಹಣ ದುಬ್ಬರಕ್ಕೆ ಮತ್ತು ಬ್ರಿಟನ್ ಮಾರುಕಟ್ಟೆ ಮೇಲಿನ ವಿಶ್ವಾಸವನ್ನೂ ಹದಗೆಡಿಸಲು ಕಾರಣವಾಗಬಹುದು ಎಂದು ರಿಷಿ ಸುನಕ್ ಎಚ್ಚರಿಸಿದ್ದರು. ಸುನಕ್ ಅವರ ಎಚ್ಚರಿಕೆಯ ಮಾತು ಈಗ ನಿಜವಾಗಿದೆ.

ಕಡಿಮೆ ಅವಧಿಗೆ ಅಧಿಕಾರದಲ್ಲಿದ್ದ ಬ್ರಿಟನ್ ಪ್ರಧಾನಿಗಳು		
ಹೆಸರು	ದಿನಗಳು	ವರ್ಷ
ಲಿಜ್ ಟ್ರಸ್	45	2022
ಜಾರ್ಜ್ ಕನ್ನಿಂಗ್	121	1827
ಫೆಡ್ರಿಕ್ ಜಾನ್ ರಾಬಿನ್‌ಸನ್, ವಿಸ್ಕೌಂಟ್ ಗಾಡ್ರಿಚ್	144	1827
ಬೋನರ್ ಲಾ	210	1922
ವಿಲಿಯಂ ಕ್ಯಾವೆಂಡಿಸ್	236	1756
ವಿಲಿಯಂ ಪೆಟ್ಟಿ	267	1782

ಟ್ರಸ್ ಅವರಿಗೆ ಪರ್ಯಾಯ ನಾಯಕನಾಗಿ ಈಗ ಸುನಕ್ ಕಾಣಿಸುತ್ತಿದ್ದಾರೆ. ರಿಷಿ ಸುನಕ್ ಅವರಿಗೆ ಹೊಸ ಯೂಗೊವ್ ಸಮೀಕ್ಷೆಯಲ್ಲಿ ಮಂಗಳವಾರ ಉತ್ತಮ ರೇಟಿಂಗ್ ಸಿಕ್ಕಿದೆ. ಸ್ವಪಕ್ಷೀಯರಲ್ಲಿ ಅನೇಕರು ಬೋರಿಸ್ ಜಾನ್ಸನ್ ಅವರನ್ನು ಪದಚ್ಯುತಿಗೊಳಿಸುವಲ್ಲಿ ವಹಿಸಿದ ನಿರ್ಣಾಯ ಪಾತ್ರಕ್ಕಾಗಿ ಸುನಕ್ ಅವರನ್ನು ಕ್ಷಮಿಸಲು ಸಿದ್ಧರಿಲ್ಲ.

ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಪುನರಾಗಮನಕ್ಕೆ ಪ್ರಯತ್ನಿಸುವ ಬಲವಾದ ಸುಳಿವು ನೀಡಿದ್ದಾರೆ. ಇದು ತ್ವರಿತವಾಗಿ ಕಾರ್ಯಸಾಧ್ಯವಾಗಬಹುದೆಂದೂ ಕೆಲವರು ಭಾವಿಸಿಯೂ ಇದ್ದಾರೆ. ಟ್ರಸ್ ಅವರ ಸ್ಥಾನ ತುಂಬಲು ಬೋರಿಸ್ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಸ್ಥಾನಕ್ಕೆ ಮತ್ತೆ ಸ್ಪರ್ಧಿಸುವ ಸಾಧ್ಯತೆಗಳು ಇವೆ ಎಂದು ‘ಟೈಮ್ಸ್’ ಪತ್ರಿಕೆ ವರದಿ ಮಾಡಿದೆ.

ರಷ್ಯಾ ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿದಾಗ ಬ್ರಿಟನ್ ರಕ್ಷಣಾ ಸಚಿವರಾಗಿ ಬೆನ್ ವ್ಯಾಲೇಸ್ ಅವರು ಇತ್ತೀಚಿನ ಸಮೀಕ್ಷೆ ಪ್ರಕಾರ ಜನಪ್ರಿಯತೆಯಲ್ಲಿ 85.8 ರೇಟಿಂಗ್ಸ್ ಪಡೆದಿದ್ದಾರೆ. ಲಿಜ್ ಟ್ರಸ್ ಅವರು ಹೌಸ್ ಆಫ್ ಕಾಮನ್ಸ್‌ಗೆ ಗೈರಾದಾಗ ಅವರ ಪರವಾಗಿ ಉತ್ತರ ಕೊಡುತ್ತಿದ್ದ ಪೆನ್ನಿ ಮೊರ್ಡಾಂಟ್ ಅವರ ಹೆಸರೂ ಈಗ ಮುಂಚೂಣಿಯಲ್ಲಿದೆ. ಸಂಭಾವ್ಯರ ಪಟ್ಟಿಯಲ್ಲಿರುವ ಮತ್ತಿಬ್ಬರು ಹಣಕಾಸು ಸಚಿವ ಜೆರೆಮಿ ಹಂಟ್ ಮತ್ತು ಮಾಜಿ ಸಚಿವ ಮೈಕೆಲ್ ಗೋವ್ ಅವರು ಪ್ರಧಾನಿ ಹುದ್ದೆಗೆ ಸ್ಪರ್ಧಿಸಲು ನಿರಾಕರಿಸಿದ್ದಾರೆ ಎನ್ನಲಾಗುತ್ತಿದೆ.

ಅತೀ ಕಡಿಮೆ ಅವಧಿಯ ಪ್ರಧಾನಿ: ಬ್ರಿಟನ್ ಪ್ರಧಾನಿ ಹುದ್ದೆಗೆ ಲಿಜ್ ಟ್ರಸ್ ಅವರ ಆಯ್ಕೆ ಮಾಡಲು ಬ್ರಿಟನ್ ಜನತೆ ತೆಗೆದುಕೊಂಡಿರುವ ದಿನಗಳಿಗಿಂತಲೂ ಅತೀ ಕಡಿಮೆ ಅವಧಿಗೆ ಆಡಳಿತ ನಡೆಸಿ, ಹುದ್ದೆ ತೊರೆದ ದೇಶದ ಮೊದಲ ಪ್ರಧಾನಿ ಎನಿಸಿಕೊಂಡಿದ್ದಾರೆ. ಆದರೆ, ಮುಂದಿನ ನಾಯಕನ ಆಯ್ಕೆ ಆಗುವವರೆಗೂ ಪ್ರಧಾನಿ ಸ್ಥಾನದಲ್ಲಿ ಟ್ರಸ್ ಮುಂದುವರಿಯಲಿದ್ದಾರೆ.

ಲಂಕಾ, ನೆದರ್ಲೆಂಡ್ಸ್ ಅರ್ಹತೆ

ಟಿ20 ವಿಶ್ವಕಪ್ ಟೂರ್ನಿ: ನಮೀಬಿಯ ತಂಡದ ಕನಸು ಪುಡಿಗಟ್ಟಿದ ಯುಎಇ

ಜಿಲಾಂಗ್ (ಆಸ್ಟ್ರೇಲಿಯಾ): ಶ್ರೀಲಂಕಾ ಮತ್ತು ನೆದರ್ಲೆಂಡ್ಸ್ ತಂಡಗಳು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಸೂಪರ್ 12' ಹಂತ ಪ್ರವೇಶಿಸಿದವು. ನಮೀಬಿಯ ತಂಡದ ಅರ್ಹತೆಯ ಹಾದಿಗೆ ಯುಎಇ ಅಡ್ಡಿಯಾಗಿ ಪರಿಣಮಿಸಿತು.

ಗುರುವಾರ ನಡೆದ ಅರ್ಹತಾ ಸುತ್ತಿನ 'ಎ' ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ, 16 ರನ್‌ಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು. ದಸುನ್ ಶನಕ ಬಳಗ ಒಟ್ಟು ನಾಲ್ಕು ಪಾಯಿಂಟ್ಸ್ ಗಳಿಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಪ್ರಧಾನ ಹಂತಕ್ಕೆ ಮುನ್ನಡೆಯಿತು. ಸೋಲು ಅನುಭವಿಸಿದರೂ ನೆದರ್ಲೆಂಡ್ಸ್, ಎರಡನೇ ಸ್ಥಾನ (4 ಪಾಯಿಂಟ್ಸ್) ಪಡೆದು ಅರ್ಹತೆ ಗಳಿಸಿತು.

ದಿನದ ಇನ್ನೊಂದು ಪಂದ್ಯದಲ್ಲಿ ಯುಎಇ ತಂಡ ನಮೀಬಿಯವನ್ನು ಮಣಿಸಿದ್ದು, ನೆದರ್ಲೆಂಡ್ಸ್ ಹಾದಿ ಸುಗಮಗೊಳಿಸಿತು. ನಮೀಬಿಯ ಗೆದ್ದಿದ್ದರೆ ಉತ್ತಮ ರನ್‌ರೇಟ್ ಆಧಾರದಲ್ಲಿ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು, ನೆದರ್ಲೆಂಡ್ಸ್ ತಂಡವನ್ನು ಹಿಂದಿಕ್ಕಿ ಅರ್ಹತೆ ಪಡೆಯುತ್ತಿತ್ತು. ತಲಾ ಒಂದು ಗೆಲುವಿನೊಂದಿಗೆ ಎರಡು ಪಾಯಿಂಟ್ಸ್ ಗಳಿಸಿದ ಯುಎಇ ಮತ್ತು ನಮೀಬಿಯ ಟೂರ್ನಿಯಿಂದ ಹೊರಬಿದ್ದವು.

ಮಿಂಚಿದ ಕುಸಾಲ್ ಮೆಂಡಿಸ್: ಜಿಲಾಂಗ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ, ಕುಸಾಲ್ ಮೆಂಡಿಸ್ (79 ರನ್, 44 ಎ., 4X5, 6X5) ಅವರ ಅರ್ಧಶತಕದ ನೆರವಿನಿಂದ ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 162 ರನ್ ಪೇರಿಸಿತು.

ನೆದರ್ಲೆಂಡ್ಸ್ ತಂಡದ ಹೋರಾಟ 9 ವಿಕೆಟ್‌ಗೆ 146 ರನ್‌ಗಳಿಗೆ ಸೀಮಿತಗೊಂಡಿತು. ಮ್ಯಾಕ್ಸ್ ಒಡೌಡ್ (ಅಜೇಯ 71) ನಡೆಸಿದ ಪ್ರಯತ್ನ ವ್ಯರ್ಥವಾಯಿತು. ವಣಿಂದು ಹಸರಂಗ (28ಕ್ಕೆ 3) ಮತ್ತು ಮಹೀಶ್ ತೀಕ್ಷಣ (32ಕ್ಕೆ 2) ಅವರು ಎದುರಾಳಿ ತಂಡವನ್ನು ಕಾಡಿದರು.

ಏಷ್ಯಾ ಕಪ್ ಗೆದ್ದಿದ್ದ ಶ್ರೀಲಂಕಾ, ಮೊದಲ ಪಂದ್ಯದಲ್ಲಿ ನಮೀಬಿಯ ಕೈಯಲ್ಲಿ ಆಘಾತ ಅನುಭವಿಸಿತ್ತು. ಆ ಬಳಿಕ ಪುಟಿದೆದ್ದು ಎರಡೂ ಪಂದ್ಯಗಳಲ್ಲಿ ಗೆದ್ದು ಅರ್ಹತೆ ಗಳಿಸಿದೆ.

ಯುಎಇ ಐತಿಹಾಸಿಕ ಸಾಧನೆ: ದಿನದ ಎರಡನೇ ಪಂದ್ಯದಲ್ಲಿ ಯುಎಇ 7 ರನ್‌ಗಳಿಂದ ನಮೀಬಿಯ ವಿರುದ್ಧ ಗೆದ್ದಿತು. ವಿಶ್ವಕಪ್‌ನಲ್ಲಿ ಯುಎಇಗೆ ದೊರೆತ ಮೊದಲ ಗೆಲುವು ಇದು.

ಮೊದಲು ಬ್ಯಾಟ್ ಮಾಡಿದ ಯುಎಇ ನಿಗದಿತ ಓವರ್‌ಗಳಲ್ಲಿ 3 ವಿಕೆಟ್‌ಗೆ 148 ರನ್ ಗಳಿಸಿತು. ಮಹಮ್ಮದ್ ವಸೀಂ (50 ರನ್, 41 ಎ.) ಅವರು ತಂಡಕ್ಕೆ ಆಸರೆಯಾದರು. ವೀರೋಚಿತ ಹೋರಾಟ ನಡೆಸಿದ ನಮೀಬಿಯ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 141 ರನ್ ಗಳಿಸಿತು. ಕೊನೆಯ ಓವರ್‌ಗಳಲ್ಲಿ ಡೇವಿಡ್ ವೈಸ್ (55 ರನ್, 36 ಎ.) ಬಿರುಸಿನ ಆಟವಾಡಿದರೂ ತಂಡಕ್ಕೆ ಗೆಲುವು ದಕ್ಕಲಿಲ್ಲ.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 162 (ಕುಸಾಲ್ ಮೆಂಡಿಸ್ 79, ಚರಿತ್ ಅಸಲಂಕಾ 31, ಭಾನುಕ ರಾಜಪಕ್ಷ 19, ಪೌಲ್ ವಾನ್ ಮೀಕೆರೆನ್ 25ಕ್ಕೆ 2, ಬಾಸ್ ಡಿ ಲೀಡ್ 31ಕ್ಕೆ 2) ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 146 (ಮ್ಯಾಕ್ಸ್ ಒಡೌಡ್ ಔಟಾಗದೆ 71, ಸ್ಕಾಟ್ ಎಡ್ವರ್ಡ್ಸ್ 21, ವಣಿಂದು ಹಸರಂಗ ಡಿಸಿಲ್ವ 28ಕ್ಕೆ 3, ಮಹೀಶ್ ತೀಕ್ಷಣ 32ಕ್ಕೆ 2) ಫಲಿತಾಂಶ: ಶ್ರೀಲಂಕಾಕ್ಕೆ 16 ರನ್ ಗೆಲುವು

ಎರಡನೇ ಪಂದ್ಯ: ಯುಎಇ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 148 (ಮಹಮ್ಮದ್ ವಸೀಂ 50, ರಿಜ್ವಾನ್ ಔಟಾಗದೆ 43, ಡೇವಿಡ್ ವೈಸ್ 27ಕ್ಕೆ 1) ನಮೀಬಿಯ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 141 (ಡೇವಿಡ್ ವೈಸ್ 55, ರೂಬೆನ್ ಟ್ರಂಪಲ್‌ಮನ್ ಔಟಾಗದೆ 25, ಬಸಿಲ್ ಹಮೀದ್ 17ಕ್ಕೆ 2, ಜಹೂರ್ ಖಾನ್ 20ಕ್ಕೆ 2) ಫಲಿತಾಂಶ: ಯುಎಇಗೆ 7 ರನ್ ಗೆಲುವು


ಶ್ರೀಲಂಕಾ ತಂಡದ ಕುಸಾಲ್ ಮೆಂಡಿಸ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- ನೆದರ್ಲೆಂಡ್ಸ್ ವಿರುದ್ಧ ಲಂಕಾಕ್ಕೆ 16 ರನ್ ಜಯ
- ಮಿಂಚಿದ ಕುಸಾಲ್ ಮೆಂಡಿಸ್
- ವಿಶ್ವಕಪ್‌ನಲ್ಲಿ ಮೊದಲ ಗೆಲುವು ಪಡೆದ ಯುಎಇ

ಬಿಸಿಸಿಐ ನೂತನ ಅಧ್ಯಕ್ಷ ರೋಜರ್ ಬಿನ್ನಿ ಆಶಯ

ಉನ್ನತ ದರ್ಜೆಗೆ ರಣಜಿ ಟ್ರೋಫಿ ಕ್ರಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶಿ ಕ್ರಿಕೆಟ್‌ನಲ್ಲಿಯೇ ಪ್ರತಿಷ್ಠಿತವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಗುಣಮಟ್ಟವನ್ನು ಇನ್ನಷ್ಟು ಉನ್ನತ ದರ್ಜೆಗೇರಿಸುವ ಅಗತ್ಯವಿದೆ. ಹೆಚ್ಚು ಆಟಗಾರರು ಇದರಲ್ಲಿ ಆಡುವಂತೆ ಆಕರ್ಷಣೀಯಗೊಳಿಸಬೇಕಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನೂತನ ಅಧ್ಯಕ್ಷ ರೋಜರ್ ಬಿನ್ನಿ ಅಭಿಪ್ರಾಯಪಟ್ಟರು.

ಮಂಡಳಿಯ ಅಧ್ಯಕ್ಷರಾದ ನಂತರ ಇದೇ ಮೊದಲ ಬಾರಿಗೆ ತಮ್ಮ ತವರು ಬೆಂಗಳೂರಿಗೆ ಆಗಮಿಸಿರುವ ಅವರು ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರಸ್ತುತ ದೇಶಿ ಕ್ರಿಕೆಟ್ ಆಟಗಾರರಿಗೆ ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಟೂರ್ನಿಗಳ ಸಂದರ್ಭದಲ್ಲಿ ಉತ್ತಮ ಸಾರಿಗೆ ಹಾಗೂ ವಸತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಈ ಕಾರ್ಯ ಚೆನ್ನಾಗಿಯೇ ನಡೆಯುತ್ತಿದೆ. ಕರ್ನಾಟಕವಂತೂ ಈ ವಿಷಯದಲ್ಲಿ ಮುಂಚೂಣಿಯಲ್ಲಿದೆ. ತನ್ನ ಆಟಗಾರರಿಗೆ ಹಿಂದಿನಿಂದಲೂ ಸೌಲಭ್ಯ ಸಿಗುವಂತೆ ಮಾಡಲು ರಣಜಿ ಟೂರ್ನಿಯಲ್ಲಿ ಆಡುವಂತಹ ಅವಕಾಶಗಳನ್ನು ಕಲ್ಪಿಸುತ್ತಿದೆ' ಎಂದರು.

'ದ್ವಿತೀಯ ದರ್ಜೆ ನಗರಗಳಲ್ಲೂ ಅಂತರರಾಷ್ಟ್ರೀಯ ದರ್ಜೆಯ ಕ್ರೀಡಾಂಗಣಗಳು ಇವೆ. ಈಗಾಗಲೇ ರಾಂಚಿ, ರಾಯಪುರದಂತಹ ನಗರಗಳಲ್ಲಿ ಐಪಿಎಲ್ ಪಂದ್ಯಗಳು ನಡೆದಿವೆ. ನಮ್ಮ ರಾಜ್ಯದಲ್ಲಿಯೂ ಹುಬ್ಬಳ್ಳಿ, ಮೈಸೂರು ಅಥವಾ ಶಿವಮೊಗ್ಗದ ಕ್ರೀಡಾಂಗಣಗಳು ಉತ್ತಮವಾಗಿವೆ. ಭವಿಷ್ಯದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸಿದರೆ ಅಚ್ಚರಿಯೇನಿಲ್ಲ' ಎಂದೂ ಹೇಳಿದರು.

'ದೇಶದ ಕ್ರೀಡಾಂಗಣಗಳಲ್ಲಿ ಪಂದ್ಯ ವೀಕ್ಷಣೆಗೆ ಬರುವ ಜನರಿಗೆ ಅತ್ಯಾಧುನಿಕ ಸೌಲಭ್ಯಗಳನ್ನು ನೀಡುವುದು ನಮ್ಮ ಕರ್ತವ್ಯ. ನಮ್ಮಲ್ಲಿರುವ ಕ್ರೀಡಾಂಗಣಗಳಲ್ಲಿ 30–40 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಸೇರುತ್ತಾರೆ. ಅವರಿಗೆ ಸುರಕ್ಷಿತವಾದ ವಾತಾವರಣ ನೆಲೆಗೊಳಿಸುವುದು ಮುಖ್ಯ' ಎಂದು 67 ವರ್ಷದ ಬಿನ್ನಿ ಹೇಳಿದರು.

'ನಮ್ಮ ದೇಶದ ಅಂತರರಾಷ್ಟ್ರೀಯ ಕ್ರೀಡಾಂಗಣಗಳಲ್ಲಿರುವ ಪಿಚ್‌ಗಳನ್ನು ಇನ್ನಷ್ಟು ಸುಧಾರಣೆ ಮಾಡಬೇಕಿದೆ. ಸ್ವಿಂಗ್ ಹಾಗೂ ಬೌನ್ಸ್‌ಸ್ನೇಹಿ ಪಿಚ್‌ಗಳನ್ನು ಸಿದ್ಧಗೊಳಿಸಲು ಆದ್ಯತೆ ನೀಡಬೇಕು. ಇದರಿಂದ ಭಾರತ ತಂಡವು ಇಂಗ್ಲೆಂಡ್, ಆಸ್ಟ್ರೇಲಿಯಾ ದೇಶಗಳಿಗೆ ಹೋದಾಗ ಆಡಲು ಸುಲಭವಾಗುತ್ತದೆ' ಎಂದು ಹೇಳಿದರು.

'ಮಹಿಳೆಯರ ಕ್ರಿಕೆಟ್‌ಗೆ ಹೆಚ್ಚು ಪ್ರೋತ್ಸಾಹ ನೀಡಲಾಗುವುದು. ಮುಂದಿನ ವರ್ಷ ಮಹಿಳಾ ಐಪಿಎಲ್ ಆಯೋಜನೆಯಾಗುತ್ತಿದೆ' ಎಂದರು.

ಬಾಲ್ಯವನ್ನು ನೆನಪಿಸಿಕೊಂಡ ಬಿನ್ನಿ: 'ನಾನು ಈ ಹುದ್ದೆಗೇರುತ್ತೇನೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಆದಾಗಿಯೂ ಒಲಿದುಬಂದಿದೆ. ಈ ಅವಕಾಶವನ್ನು ಕ್ರಿಕೆಟ್‌ಗೆ ಒಳ್ಳೆಯದನ್ನು ಮಾಡಲು ಬಳಸುತ್ತೇನೆ' ಎಂದು ಹೇಳಿದರು. 'ಬೆಂಗಳೂರಿನಲ್ಲಿ ಜೂನಿಯರ್ ಹಂತದಿಂದ ಕ್ರಿಕೆಟ್ ಆಡಲಾರಂಭಿಸಿದೆ. ಆಗೆಲ್ಲ ನನ್ನೊಂದಿಗೆ ಮುರಳಿ, ಶಾವೀರ್ ತಾರಾಪುರ ಮತ್ತಿತರು ಇದ್ದರು. ಅವರೆಲ್ಲ ಈ ಸ್ಥಿತಿಯಲ್ಲಿದ್ದಾರೆ. ಬ್ರಿಜೇಶ್ ಪಟೇಲ್ ನನ್ನ ಮೊದಲ ನಾಯಕ. ನನ್ನ ಕುಟುಂಬ ಹಾಗೂ ಮಿತ್ರರೆಲ್ಲ ಬೆಂಬಲದಿಂದಾಗಿ ಕ್ರಿಕೆಟ್‌ನಲ್ಲಿ ಎಲ್ಲವನ್ನೂ ಪಡೆದ ತೃಪ್ತಿ ನನ್ನದು' ಎಂದರು.


ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಗುರುವಾರ ಆಗಮಿಸಿದ ಬಿಸಿಸಿಐ ನೂತನ ಅಧ್ಯಕ್ಷ ರೋಜರ್ ಬಿನ್ನಿ ಅವರನ್ನು ಕೆಎಸ್‌ಸಿಎ ಉಪಾಧ್ಯಕ್ಷ ಜೆ. ಅಭಿರಾಮ್ ಸ್ವಾಗತಿಸಿದರು. ಖಜಾಂಚಿ ವಿನಯ್ ಮೃತ್ಯುಂಜಯ ಇದ್ದಾರೆ –ಪ್ರಜಾವಾಣಿ ಚಿತ್ರ

ಪಾಕ್ ಪ್ರವಾಸ: ಸರ್ಕಾರದ ನಿರ್ಧಾರ ಅಂತಿಮ

ಮುಂದಿನ ವರ್ಷ ಏಷ್ಯಾಕಪ್ ಕ್ರಿಕೆಟ್ ಟೂರ್ನಿ ಆಡಲು ಭಾರತ ತಂಡವು ಪಾಕಿಸ್ತಾನಕ್ಕೆ ತೆರಳುವು ಕುರಿತು ಬಿಸಿಸಿಐ ನಿರ್ಧಾರ ಕೈಗೊಳ್ಳುವುದಿಲ್ಲ. ಭಾರತ ಸರ್ಕಾರದ ನಿರ್ಧಾರವೇ ಅಂತಿಮ ಎಂದು ರೋಜರ್ ಬಿನ್ನಿ ಹೇಳಿದರು.

ಏಷ್ಯಾಕಪ್ ಟೂರ್ನಿ ಆಡಲು ಭಾರತವು ಪಾಕ್‌ಗೆ ಹೋಗುವುದಿಲ್ಲವೆಂದು ಈಚೆಗೆ ಕಾರ್ಯದರ್ಶಿ ಜಯ್ ಶಾ ಹೇಳಿದ್ದರು.

ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿನ್ನಿ, 'ಯಾವುದೇ ದೇಶಕ್ಕೆ ಸರಣಿ ಅಥವಾ ಟೂರ್ನಿ ಆಡಲು ತಂಡವು ತೆರಳಬೇಕಾದರೆ ಬಿಸಿಸಿಐ ಸರ್ಕಾರಕ್ಕೆ ಪ್ರಸ್ತಾವ ಸಲಿಸುತ್ತದೆ. ಅದನ್ನು ಪರಿಶೀಲಿಸುವ ಕೇಂದ್ರ ಸರ್ಕಾರವು ಅನುಮತಿ ನೀಡುತ್ತದೆ. ಸರ್ಕಾರದ ಸಂಬಂಧಿತ ಇಲಾಖೆಗಳಿಂದ ಅನುಮತಿ ದೊರೆತರೆ ಮಾತ್ರ ತಂಡಗಳನ್ನು ಕಳಿಸಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಮೈಸೂರು ರೇಸ್

ಪೇಯೊ ಗೆಲ್ಲುವ ನಿರೀಕ್ಷೆ

ಗಾಯತ್ರಿ ದೇವಿ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೇಯೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಕ್ಟಿವೇಟೆಡ್ 7, ಇಕೋ ಫ್ರೆಂಡ್ಲಿ 1, ರೀಗಲ್ ಫೋರ್ಸ್ 9
2ನೇ ರೇಸ್: ಸದರ್ನ್ ಫೋರ್ಸ್ 7, ಕ್ಯಾಲಿಫೋರ್ನಿಯಾ ಗೋಲ್ಡ್ 9, ಮೈ ವಿಷನ್ 14
3ನೇ ರೇಸ್: ರೈಟ್ಲಿ ನೋಬಲ್ 2, ಲೀಡ್ ಸಿಂಗರ್ 1, ಸರ್ಪ್ರೈಸ್ ಪ್ಯಾಕೇಜ್ 5
4ನೇ ರೇಸ್: ಕೊಯೊಟೆ ಗರ್ಲ್ 10, ಆಲ್ಯೈರ್ 9, ಲಕ್ಕಿ ಒನ್ 7
5ನೇ ರೇಸ್: ಇಂಡಿಯನ್ ಪ್ಯಾಟ್ರಿಯೇಟ್ 5, ಮ್ಯುಟಾಂಟ್ 4, ಕ್ರಿಮ್ಸನ್ ಫೈರ್ 7
6ನೇ ರೇಸ್: ಪೇಯೊ 8, ಸೀಝ್ ಪೆರಿಲಸ್ 5, ಆಟೋಮ್ಯಾಟಿಕ್ 2
7ನೇ ರೇಸ್: ಡಿ ವಿಲಿಯರ್ಸ್ 6, ಓ ಹನ್ಸಿನಿ 9, ಎಡ್ಡಿ ದಿ ಈಗಲ್ 3
8ನೇ ರೇಸ್: ಸ್ಮಾರ್ಟ್ ಕ್ಯಾಡಿಲಾಕ್ 3, ಪರ್ಫೆಕ್ಟ್ ಜಸ್ಟೀಸ್ 5, ಡಿ ಜಾನಿ (6)

ಉತ್ತಮ ಬೆಟ್: ಇಂಡಿಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್: ಶ್ರೀಕಾಂತ್‌ಗೆ ನಿರಾಸೆ

ಲಕ್ಷ್ಯ ಸೇನ್‌ಗೆ ಮಣಿದ ಪ್ರಣಯ್

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಇಲ್ಲಿ ನಡೆಯುತ್ತಿರುವ ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೇನ್, 21–9, 21–18 ರಲ್ಲಿ ಎಚ್.ಎಸ್.ಪ್ರಣಯ್ ಅವರನ್ನು ಮಣಿಸಿದರು.

ಶ್ರೀಕಾಂತ್‌ಗೆ ನಿರಾಸೆ: ಕಿದಂಬಿ ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು. ಏಳನೇ ಶ್ರೇಯಾಂಕದ ಆಟಗಾರ ಸಿಂಗಪುರದ ಲೊ ಕೀನ್ ಯೆವ್ 21–13, 21–15 ರಲ್ಲಿ ಭಾರತದ ಆಟಗಾರನನ್ನು ಮಣಿಸಿದರು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಗುರುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21–14, 21–16 ರಲ್ಲಿ ಇಂಡೊನೇಷ್ಯಾದ ಮಹಮ್ಮದ್ ಶೊಹೀಬುಲ್ ಫಿಕ್ರಿ– ಬಗಾಸ್ ಮೌಲಾನಾ ಅವರನ್ನು ಪರಾಭವಗೊಳಿಸಿತು.

ಮಹಿಳೆಯರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿತು.

ಮಹಿಳೆಯರ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ 21–23, 13–21 ರಲ್ಲಿ ಥಾಯ್ಲೆಂಡ್‌ನ ಕಿತಿತಾ ರಕುಲ್– ರವಿಂದಾ ಪ್ರಜೊಂಜಯ್ ಎದುರು ಸೋತಿತು. ತ್ರಿಶಾ– ಗಾಯತ್ರಿ ಮೊದಲ ಗೇಮ್‌ನಲ್ಲಿ ಎದುರಾಳಿಗೆ ತಕ್ಕ ಪೈಪೋಟಿ ನೀಡಿತು.

ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ ಜೋಡಿ 16–21, 10–21 ರಲ್ಲಿ ಜಪಾನ್‌ನ ಯುತಾ ವತನಬೆ– ಅರಿಸಾ ಹಿಗಶಿನೊ ಎದುರು ಪರಾಭವಗೊಂಡಿತು.

ಫಿಫಾ ವಿಶ್ವಕಪ್: ಕೇರಳದಿಂದ ಕತಾರ್‌ಗೆ ಕಾರಿನಲ್ಲಿ ಪಯಣ!

ಕಣ್ಣೂರು (ಪಿಟಿಐ): ಕತಾರ್‌ನ ದೋಹಾದಲ್ಲಿ ಮುಂದಿನ ತಿಂಗಳು ಆರಂಭವಾಗಲಿರುವ ಫಿಫಾ ವಿಶ್ವಕಪ್ ಟೂರ್ನಿಯ ಪಂದ್ಯ ವೀಕ್ಷಿಸಲು ಕೇರಳದ ಮಹಿಳೆಯೊಬ್ಬರು ಕಾರಿನಲ್ಲಿ ಪ್ರಯಾಣ ಆರಂಭಿಸಿದ್ದಾರೆ.

ಮಾಹಿಯ ನಿವಾಸಿ ನಾಜಿ ನೌಶಿ ಎಂಬವರೇ ಏಕಾಂಗಿಯಾಗಿ ಪ್ರಯಾಣ ಆರಂಭಿಸಿರುವ ಮಹಿಳೆ. ಕೇರಳ ಸಾರಿಗೆ ಸಚಿವ ಆ್ಯಂಟನಿ ರಾಜು ಈ ಯಾತ್ರೆಗೆ ಬುಧವಾರ ಚಾಲನೆ ನೀಡಿದ್ದಾರೆ.

ಮಹೀಂದ್ರಾ ಥಾರ್ ವಾಹನದಲ್ಲಿ ಪ್ರಯಾಣಿಸಲಿರುವ ನೌಶಿ, ಮೊದಲು ಮುಂಬೈಗೆ ತೆರಳಲಿದ್ದಾರೆ. ಅಲ್ಲಿಂದ ತಮ್ಮ ವಾಹನವನ್ನು ಹಡಗಿನಲ್ಲಿ ಒಮಾನ್ ದೇಶಕ್ಕೆ ಸಾಗಿಸಲಿದ್ದಾರೆ.

ಒಮಾನ್‌ನಿಂದ ರಸ್ತೆ ಮಾರ್ಗದಲ್ಲಿ ಪ್ರಯಾಣ ಮುಂದುವರಿಸಲಿದ್ದು ಯುಎಇ, ಬಹರೇನ್, ಕುವೈತ್ ಮತ್ತು ಸೌದಿ ಅರೇಬಿಯಾ ದೇಶಗಳ ಮೂಲಕ ಹಾದು ಕತಾರ್ ತಲುಪಲಿದ್ದಾರೆ.


'ಡಿ.10ಕ್ಕೆ ಕತಾರ್ ತಲುಪುವ ಯೋಜನೆ ಹಾಕಿಕೊಂಡಿದ್ದೇನೆ. ಟೂರ್ನಿಯ ಫೈನಲ್ ವೀಕ್ಷಿಸುವುದು ಗುರಿ. ನಾನು ಮೆಸ್ಸಿಯ ಅಭಿಮಾನಿಯಾಗಿದ್ದು, ಅರ್ಜೆಂಟೀನಾ ಕಪ್ ಗೆಲ್ಲುವುದನ್ನು ಎದುರು ನೋಡುತ್ತಿದ್ದೇನೆ' ಎಂದು ನೌಶಿ ಹೇಳಿದ್ದಾರೆ. ಫಿಫಾ ವಿಶ್ವಕಪ್ ನ.20 ರಂದು ಆರಂಭವಾಗಲಿದ್ದು, ಫೈನಲ್ ಡಿ.18 ರಂದು ನಡೆಯಲಿದೆ.

ಐಎಸ್‌ಎಲ್: ಈಸ್ಟ್ ಬೆಂಗಾಲ್‌ಗೆ ಒಲಿದ ಗೆಲುವು

ಗುವಾಹಟಿ: ಅಮೋಘ ಆಟವಾಡಿದ ಈಸ್ಟ್ ಬೆಂಗಾಲ್ ತಂಡದವರು ಇಂಡಿಯನ್ ಗುರುವಾರ ನಡೆದ ಸೂಪರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ನಾರ್ಥ್ ಈಸ್ಟ್ ಯುನೈಟೆಡ್ ವಿರುದ್ಧ ಜಯಿಸಿದರು.

ಕ್ಲೆಟನ್ ಸಿಲ್ವಾ (11ನೇ ನಿ), ಚಾರ್ಲಾಂಬೋಸ್ ಕೈರಿಯಾಕೊವ್ (52ನೇ ನಿ) ಹಾಗೂ ಜೋರ್ಡಾನ್ ಒ ಡೊಹರ್ಟಿ (84 ನಿ) ಅವರ ಉತ್ತಮ ಆಟದಿಂದಾಗಿ ಬೆಂಗಾಲ್ 3–1ರಿಂದ ನಾರ್ಥ್ ಈಸ್ಟ್ ಯುನೈಟೆಡ್‌ಗೆ ಸೋಲುಣಿಸಿತು. ಯುನೈಟೆಡ್ ತಂಡದ ಮ್ಯಾಟ್ ಡರ್ಬಿಶೈರ್ (90 + 2) ಗೋಲು ಗಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,512
ಇಂದಿನ ಅಂತ್ಯ	17,512
▲	52
ದಿನದ ಗರಿಷ್ಠ	17,584

ವಿನಿಮಯ ದರ

$ ಡಾಲರ್	82.79
£ ಪೌಂಡ್	92.74
€ ಯುರೊ	80.94
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹458

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹1340 (1315)
ಸೂರ್ಯಕಾಂತಿ (ರಿಫೈನ್ಡ್)	₹1530 (1530)
ಪಾಮೋಲಿನ್	₹980 (977)

ಐಟಿಸಿ ಲಾಭ ಶೇ 24ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ/ರಾಯಿಟರ್ಸ್): ಐಟಿಸಿ ಲಿಮಿಟೆಡ್ ಕಂಪನಿಯ ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭವು ಶೇಕಡ 24.08ರಷ್ಟು ಹೆಚ್ಚಾಗಿದ್ದು, ₹ 4,670 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ಒಟ್ಟು ₹ 3,763 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಕಂಪನಿಯ ಕಾರ್ಯಾಚರಣೆ ವರಮಾನವು ಶೇ 25.35ರಷ್ಟು ಹೆಚ್ಚಾಗಿದ್ದು ₹ 18,608 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ₹14,844 ಕೋಟಿ ಆಗಿತ್ತು.

'ಸಿಗರೇಟ್ ಮೇಲಿನ ತೆರಿಗೆಯಲ್ಲಿ ಸ್ಥಿರತೆ ಬಂದಿರುವುದು, ಕಾನೂನು ಜಾರಿ ಸಂಸ್ಥೆಗಳು ಸಿಗರೇಟಿನ ಅಕ್ರಮ ಮಾರಾಟದ ವಿರುದ್ಧ ಕ್ರಮ ಜರುಗಿಸಿರುವುದು ಸಿಗರೇಟು ವಹಿವಾಟು ಚೆನ್ನಾಗಿ ಆಗಲು ನೆರವಾಗಿವೆ' ಎಂದು ಕಂಪನಿಯು ಹೇಳಿದೆ.

ಐಟಿಸಿ ಕಂಪನಿಯ ಹೋಟೆಲ್ ವಹಿವಾಟಿನ ಆದಾಯವು ಈ ತ್ರೈಮಾಸಿಕದಲ್ಲಿ ಶೇ 81.8ರಷ್ಟು ಹೆಚ್ಚಾಗಿದೆ.

ನಿಫ್ಟಿ–50 ಸೂಚ್ಯಂಕದಲ್ಲಿ ಈ ವರ್ಷದಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿರುವ ಷೇರುಗಳ ಪೈಕಿ ಐಟಿಸಿ ಕೂಡ ಒಂದು. ಇದು ಈ ವರ್ಷ ಶೇ 60ರಷ್ಟು ಮೌಲ್ಯವರ್ಧನೆ ಮಾಡಿಕೊಂಡಿದೆ.

ಶಿವ ನಾಡಾರ್ 2021–22ರ ಮಹಾದಾನಿ: ಹುರೂನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುರೂನ್ ಇಂಡಿಯಾ ಸಂಸ್ಥೆಯು ದೇಶದ ಮಹಾದಾನಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ಗೌರವಾಧ್ಯಕ್ಷ ಶಿವ ನಾಡಾರ್ ಮತ್ತು ಅವರ ಕುಟುಂಬವು ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಅವರು 2021–22ರಲ್ಲಿ ಒಟ್ಟು ₹ 1,161 ಕೋಟಿಯನ್ನು ದಾನವಾಗಿ ನೀಡಿದ್ದಾರೆ.

2021ರ ಏಪ್ರಿಲ್ 1ರಿಂದ 2022ರ ಮಾರ್ಚ್ 31ರವರೆಗಿನ ದಾನ ಕಾರ್ಯದ ವಿವರ ಆಧರಿಸಿ ಈ ಪಟ್ಟಿ ಸಿದ್ಧಪಡಿಸಲಾಗಿದೆ. ಹುರೂನ್ ಇಂಡಿಯಾ ಸಂಸ್ಥೆಯು ಎಡೆಲ್‌ಗಿವ್ ಸಂಸ್ಥೆಯ ಜೊತೆ ಸೇರಿ ಈ ಪಟ್ಟಿ ಸಿದ್ಧಪಡಿಸಿದೆ. ವಿಪ್ರೊ ಕಂಪನಿಯ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಅವರು ₹ 484 ಕೋಟಿ ದಾನ ಮಾಡಿ, ಎರಡನೆಯ ಸ್ಥಾನದಲ್ಲಿ ಇದ್ದಾರೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಮತ್ತು ಅವರ ಕುಟುಂಬವು ₹ 411 ಕೋಟಿಯನ್ನು ದಾನವಾಗಿ ನೀಡಿ ಮೂರನೆಯ ಸ್ಥಾನದಲ್ಲಿದೆ.


ಶಿವ ನಾಡಾರ್

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಪಟ್ಟಿ ಬಿಡುಗಡೆ ಮಾಡಿದ ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಅನಸ್ ರಹಮಾನ್ ಜುನೈದ್, 'ದೇಶದಲ್ಲಿ ಸಂಪತ್ತು ಹೆಚ್ಚಾಗುತ್ತಿರುವ ಜೊತೆಯಲ್ಲಿಯೇ, ದಾನವಾಗಿ ನೀಡುವ ಮೊತ್ತ ಕೂಡ ಹೆಚ್ಚುತ್ತಿದೆ' ಎಂದು ಹೇಳಿದರು.

ರೋಹಿಣಿ ನಿಲೇಕಣಿ ಅವರು ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಗೆ ಒಟ್ಟು ₹ 120 ಕೋಟಿ ದಾನವಾಗಿ ನೀಡಿದ್ದಾರೆ. ಅವರು 2021–22ನೆಯ ಸಾಲಿನ ಮಹಾದಾನಿ ಮಹಿಳೆಯರ ಪೈಕಿ ಮೊದಲ ಸ್ಥಾನದಲ್ಲಿದ್ದಾರೆ.

ಶತಮಾನದ ಮಹಾದಾನಿ ಟಾಟಾ

ತಮ್ಮ ಜೀವಿತಾವಧಿಯಲ್ಲಿ ಒಟ್ಟು ₹ 8.47 ಲಕ್ಷ ಕೋಟಿ (102.4 ಬಿಲಿಯನ್ ಅಮೆರಿಕನ್ ಡಾಲರ್) ಮೊತ್ತವನ್ನು ದಾನವಾಗಿ ನೀಡಿದ್ದ ಉದ್ಯಮಿ ಜೆಮ್‌ಶೆಡ್‌ಜಿ ಟಾಟಾ ಅವರು ಹಿಂದಿನ ಶತಮಾನದಲ್ಲಿ ಜಗತ್ತು ಕಂಡ ಮಹಾದಾನಿ ಎಂದು ವರದಿಯಲ್ಲಿ ಹೇಳಲಾಗಿದೆ. ಜೆಮ್‌ಶೆಡ್‌ಜಿ ಟಾಟಾ ಅವರು ಟಾಟಾ ಉದ್ಯಮ ಸಮೂಹವನ್ನು ಸ್ಥಾಪಿಸಿದವರು.

ಭಾರತೀಯ ಸ್ಪರ್ಧಾ ಆಯೋಗದ ಕ್ರಮ

ಗೂಗಲ್‌ಗೆ ₹ 1,337 ಕೋಟಿ ದಂಡ

ನವದೆಹಲಿ (ಪಿಟಿಐ): ಆ್ಯಂಡ್ರಾಯ್ಡ್ ಮೊಬೈಲ್ ಕಾರ್ಯಾಚರಣೆ ವ್ಯವಸ್ಥೆ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಗೂಗಲ್ ಕಂಪನಿಗೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ₹ 1,337.76 ಕೋಟಿ ದಂಡ ವಿಧಿಸಿದೆ.

ನ್ಯಾಯಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಳ್ಳುವುದರಿಂದ ದೂರವಿರಬೇಕು ಎಂದು ಸಿಸಿಐ ತಾಕೀತು ಮಾಡಿದೆ. ಗೂಗಲ್ ಕಂಪನಿಯು ನಿರ್ದಿಷ್ಟ ಅವಧಿಯೊಳಗೆ ತನ್ನ ವರ್ತನೆಯನ್ನು ತಿದ್ದಿಕೊಳ್ಳಬೇಕು ಎಂದು ಕೂಡ ಸಿಸಿಐ ಸೂಚಿಸಿದೆ.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್ ಬಳಕೆದಾರರಿಂದ ಬಂದ ದೂರುಗಳನ್ನು ಆಧರಿಸಿ ಸಿಸಿಐ 2019ರ ಏಪ್ರಿಲ್‌ನಲ್ಲಿ ತನಿಖೆಗೆ ಆದೇಶಿಸಿತ್ತು.

ಗೂಗಲ್ ಮಾಲೀಕತ್ವದ ಮೊಬೈಲ್ ಆ್ಯಪ್‌ಗಳು ಹಾಗೂ ಎಪಿಐ (ಆ್ಯಪ್‌ಗಳು ಕಾರ್ಯಾಚರಣೆ ವ್ಯವಸ್ಥೆ ಜೊತೆ ಹಾಗೂ ಇನ್ನೊಂದು ಆ್ಯಪ್ ಜೊತೆ ಸಂವಹನ ನಡೆಸಲು ಅಗತ್ಯವಿರುವ ವ್ಯವಸ್ಥೆ) ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಮೊದಲೇ ಕಡ್ಡಾಯವಾಗಿ ಇನ್‌ಸ್ಟಾಲ್ ಆಗಿರುತ್ತವೆ. ಇವುಗಳನ್ನು ಅನ್‌ಇನ್‌ಸ್ಟಾಲ್ ಮಾಡಲು ಅವಕಾಶವೇ ಇಲ್ಲ. ಈ ಆ್ಯಪ್‌ಗಳನ್ನು ಪ್ರಧಾನವಾಗಿ ನಿಯೋಜಿಸಲಾಗುತ್ತಿದೆ. ಹೀಗೆ ಮಾಡುವುದು ಸ್ಪರ್ಧಾ ಕಾನೂನಿನ ಉಲ್ಲಂಘನೆ ಎಂದು ಸಿಸಿಐ ಹೇಳಿದೆ.

ಆನ್‌ಲೈನ್ ಹುಡುಕಾಟದ ಮಾರುಕಟ್ಟೆಯಲ್ಲಿನ ತನ್ನ ಪ್ರಬಲ ಸ್ಥಾನವನ್ನು ಶಾಶ್ವತಗೊಳಿಸಿಕೊಂಡಿರುವ ಗೂಗಲ್ ಕಂಪನಿಯು, ಇತರ ಶೋಧ ಆ್ಯಪ್‌ಗಳಿಗೆ ಮಾರುಕಟ್ಟೆ ಲಭ್ಯತೆಯನ್ನು ನಿರಾಕರಿಸುತ್ತಿದೆ ಎಂದು ಸಿಸಿಐ ಹೇಳಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹295-630
ದ್ವಿತಳಿ (ಬಿ.ವಿ)	₹200-855

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಡಿ.3 ರಿಂದ ಮೈಸೂರಿನಲ್ಲಿ 'ಅನ್‌ಲೀಶ್' ಹ್ಯಾಕಥಾನ್

ಪ್ರಜಾವಾಣಿ ವಾರ್ತೆ

ಮೈಸೂರು: ವಿಶ್ವಸಂಸ್ಥೆಯ 'ಸುಸ್ಥಿರ ಅಭಿವೃದ್ಧಿ ಗುರಿ' ಸಾಧನೆಗೆ ಡೆನ್ಮಾರ್ಕ್‌ನ 'ಅನ್‌ಲೀಶ್' ಸಂಸ್ಥೆಯು ಆಯೋಜಿಸುವ ಜಾಗತಿಕ ಮಟ್ಟದ 'ಹ್ಯಾಕಥಾನ್' ಇಲ್ಲಿನ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಡಿಸೆಂಬರ್ 3ರಿಂದ 10ರ ವರೆಗೆ ನಡೆಯಲಿದೆ.

2017ರಿಂದ ಸಂಸ್ಥೆಯು ಹ್ಯಾಕಥಾನ್ ಆಯೋಜಿಸುತ್ತಿದ್ದು, ಪ್ರತಿ ವರ್ಷ ವಿಶ್ವದ ವಿವಿಧೆಡೆಯ, 18ರಿಂದ 35ರ ವಯೋಮಾನದ 1 ಸಾವಿರ ಯುವ ಪ್ರತಿಭೆಗಳನ್ನು ಆಯ್ಕೆ ಮಾಡುತ್ತದೆ. ಇದುವರೆಗಿನ ಪ್ರತಿ ಹ್ಯಾಕಥಾನ್‌ನಲ್ಲೂ ಭಾರತದ 500 ಪ್ರತಿಭೆಗಳು ಆಯ್ಕೆಯಾಗಿರುವುದು ವಿಶೇಷ.

ಡಿಜಿಟಲ್ ಚಟುವಟಿಕೆಗಳ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಹುಡುಕಾಟ 'ಅನ್‌ಲೀಶ್'ನಲ್ಲಿ ನಡೆಯಲಿದೆ.

'ಅನ್‌ಲೀಶ್ ವಿಶ್ವದ ಅತಿ ದೊಡ್ಡ ಹ್ಯಾಕಥಾನ್. ಮೈಸೂರಿನಲ್ಲಿ ನಡೆಯುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಗರವು ಪ್ರಕಾಶಿಸಲಿದೆ. ವಿಶ್ವದ ಸಾವಿರ ಯುವ ತಂತ್ರಜ್ಞರಲ್ಲಿ ಭಾರತದ 300 ಮಂದಿ ಇರಲಿದ್ದು, ಅವರಲ್ಲಿ ಕರ್ನಾಟಕದ 100 ಮಂದಿ ಭಾಗವಹಿಸಲಿದ್ದಾರೆ' ಎಂದು ಐ.ಟಿ, ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ತಿಳಿಸಿದರು.

ಕೆನರಾ ಬ್ಯಾಂಕ್ ಲಾಭ ಶೇ 89 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 2,525 ಕೋಟಿ ನಿವ್ವಳ ಲಾಭ ಗಳಿಸಿದೆ.

'ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 1,333 ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 89.42ರಷ್ಟು ಹೆಚ್ಚಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಲ್.ವಿ. ಪ್ರಭಾಕರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ಯಾಂಕ್‌ನ ಒಟ್ಟು ವರಮಾನ ₹ 21,331 ಕೋಟಿಯಿಂದ ₹ 24,932 ಕೋಟಿಗೆ ಏರಿಕೆ ಆಗಿದೆ. 'ಬ್ಯಾಂಕ್‌ನ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 6.37ರಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಸರಾಸರಿ ಎನ್‌ಪಿಎ ಶೇ 8.42ರಷ್ಟು ಇತ್ತು' ಎಂದು ಅವರು ತಿಳಿಸಿದರು.

'ನಿವ್ವಳ ಎನ್‌ಪಿಎ ಶೇ 3.22ರಿಂದ ಶೇ 2.19ಕ್ಕೆ ಇಳಿಕೆ ಆಗಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವು ಶೇ 84.51ರಷ್ಟು ಇದ್ದಿದ್ದು ಶೇ 85.36ಕ್ಕೆ ಏರಿಕೆ ಆಗಿದೆ' ಎಂದು ಹೇಳಿದರು.

ರಿಟೇಲ್ ಸಾಲ ನೀಡಿಕೆ ಶೇ 12.5ರಷ್ಟು ಮತ್ತು ಗೃಹ ಸಾಲ ನೀಡಿಕೆಯು ಶೇ 17.01ರಷ್ಟು ಬೆಳವಣಿಗೆ ಕಂಡಿದೆ.

ಬ್ಯಾಂಕ್‌ನ ಒಟ್ಟು ಶಾಖೆಗಳ ಸಂಖ್ಯೆ 9,722ಕ್ಕೆ ತಲುಪಿದ್ದು, ಒಟ್ಟು 10,759 ಎಟಿಎಂಗಳು ಇವೆ.

ಮುಂಬೈ ಧಾರಣೆ

ಶೇಂಗಾ

20-10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	1260 (1225)
ಪಾಮ್ ವಾರದ ಡೆಲಿವರಿ	978 (975)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,975 (50,000)
ಬೆಳ್ಳಿ ಕೆ.ಜಿ 56,200 (55,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಕುಮಟ	
ಚಿಪ್ಪು	25109-33001
ಕೋಕ	11500-30689
ಹೊಸಚಾಲಿ	37299-41809
ಹಳೆಚಾಲಿ	44099-44099
ಪುತ್ತೂರು	
ಕೋಕ	11000-26000
ಹೊಸತು	35500-48500
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-47500
ಶಿವಮೊಗ್ಗ	
ಬೆಟ್ಟೆ	48100-54130
ಗೊರಬಲು	17109-37169
ಹೊಸತು	48529-48029
ರಾಶಿ	44099-50309
ಸರಕು	59100-80696
ಸಿದ್ದಾಪುರ	
ಬಿಳಿಗೋಟು	26999-33499
ಚಾಲಿ	37269-41639
ಕೋಕ	26299-33466
ಕೆಂಪುಗೋಟು	30299-33499
ರಾಶಿ	46099-49399
ತಟ್ಟಿಬೆಟ್ಟೆ	38149-45599
ಶಿರಸಿ	
ಬೆಟ್ಟೆ	26009-46899
ಬಿಳಿಗೋಟು	17069-36649
ಚಾಲಿ	37298-42611
ಕೆಂಪುಗೋಟು	17899-38001
ರಾಶಿ	42899-48879
ಯಲ್ಲಾಪುರ	
ಬಿಳಿಗೋಟು	27299-32899
ಚಾಲಿ	37499-41711
ಕೋಕ	18715-30300
ಕೆಂಪುಗೋಟು	32469-35506
ರಾಶಿ	47969-52399
ತಟ್ಟಿಬೆಟ್ಟೆ	41090-46177

ಕರ್ನಾಟಕ ಗೆಲುವಿನ ಓಟ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20ಕ್ರಿಕೆಟ್ ಟೂರ್ನಿ

ಮುಖ್ಯಾಂಶಗಳು

- ಚೇತನ್, ವೈಶಾಖ್ ವಿಜಯಕುಮಾರ್ ಮಿಂಚು
- ಮಯಂಕ್ ಬಳಗಕ್ಕೆ ಸತತ ನಾಲ್ಕನೇ ಗೆಲುವು
- 'ಸಿ' ಗುಂಪಿನಲ್ಲಿ ಅಗ್ರಸ್ಥಾನ

ಮೊಹಾಲಿ: ಎಲ್.ಆರ್.ಚೇತನ್ ಗಳಿಸಿದ ಅರ್ಧಶತಕ (ಅಜೇಯ 61) ಮತ್ತು ವೈಶಾಖ್ ವಿಜಯಕುಮಾರ್ ಅವರ ಮೊನಚಾದ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದೆ.

ಮೊಹಾಲಿಯ ಮುಲ್ಲಾಂಪುರ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗ ಸರ್ವಿಸಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತು.

ಕೇರಳದ ಎದುರು ಸೋತ ಬಳಿಕ ಕರ್ನಾಟಕಕ್ಕೆ ದೊರೆತ ಸತತ ನಾಲ್ಕನೇ ಗೆಲುವು ಇದು. ಆರು ಪಂದ್ಯಗಳಲ್ಲಿ ಐದು ಜಯ ಸಾಧಿಸಿರುವ ತಂಡ 20 ಪಾಯಿಂಟ್ಸ್‌ಗಳೊಂದಿಗೆ 'ಸಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಕರ್ನಾಟಕ ಕೊನೆಯ ಲೀಗ್ ಪಂದ್ಯದಲ್ಲಿ ಹರಿಯಾಣ ತಂಡವನ್ನು ಎದುರಿಸಲಿದ್ದು, ಗೆದ್ದರೆ ನಾಕೌಟ್ ಹಂತ ಪ್ರವೇಶಿಸಲಿದೆ.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಸರ್ವಿಸಸ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 129 ರನ್ ಗಳಿಸಿತು. ಅಮಿತ್ ಪಚಾರ (35) ಮತ್ತು ರಾಹುಲ್ ಸಿಂಗ್ (22) ಹೊರತುಪಡಿಸಿ, ಉಳಿದ ಬ್ಯಾಟರ್‌ಗಳಿಗೆ ಕರ್ನಾಟಕದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಲು ಆಗಲಿಲ್ಲ.



ಎಲ್‌.ಆರ್‌.ಚೇತನ್ –ಸಂಗ್ರಹ ಚಿತ್ರ

ಬಿಗುವಾದ ದಾಳಿ ನಡೆಸಿದ ವೈಶಾಖ್ 24 ರನ್‌ಗಳಿಗೆ 3 ವಿಕೆಟ್ ಪಡೆದರೆ, ಅವರಿಗೆ ಕೆ.ಗೌತಮ್ (13ಕ್ಕೆ 2) ತಕ್ಕ ಸಾಥ್ ನೀಡಿದರು. ವಿದ್ವತ್ ಕಾವೇರಪ್ಪ, ಜೆ.ಸುಚಿತ್ ಮತ್ತು ಮನೋಜ್ ಭಾಂಡಗೆ ತಲಾ ಒಂದು ವಿಕೆಟ್ ಪಡೆದರು.

ಸುಲಭ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ ಮಯಂಕ್ ಮತ್ತು ಲವನೀತ್ ಸಿಸೋಡಿಯಾ ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಚೇತನ್ ಮತ್ತು ಮನೀಷ್ ಪಾಂಡೆ (ಔಟಾಗದೆ 37, 38 ಎ.) ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡು ತಂಡವನ್ನು ಗೆಲುವಿನ ಗಡಿ ದಾಟಿಸಿದರು. 52 ಎಸೆತಗಳನ್ನು ಎದುರಿಸಿದ ಚೇತನ್ 6 ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರ್: ಸರ್ವಿಸಸ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 129 (ಅಮಿತ್ ಪಚಾರ 35, ರಾಹುಲ್ ಸಿಂಗ್ 22, ವೈಶಾಖ್ ವಿಜಯಕುಮಾರ್ 24ಕ್ಕೆ 3, ಕೆ.ಗೌತಮ್ 13ಕ್ಕೆ 2, ವಿದ್ವತ್ ಕಾವೇರಪ್ಪ 21ಕ್ಕೆ 1, ಜೆ.ಸುಚಿತ್ 30ಕ್ಕೆ 1, ಮನೋಜ್ ಭಾಂಡಗೆ 14ಕ್ಕೆ 1) ಕರ್ನಾಟಕ 18.1 ಓವರ್‌ಗಳಲ್ಲಿ 2 ವಿಕೆಟ್‌ಗೆ 130 (ಎಲ್.ಆರ್.ಚೇತನ್ ಔಟಾಗದೆ 61, ಮಯಂಕ್ ಅಗರವಾಲ್ 16, ಲವನೀತ್ ಸಿಸೋಡಿಯ 7, ಮನೀಷ್ ಪಾಂಡೆ ಔಟಾಗದೆ 37)

ಫಲಿತಾಂಶ: ಕರ್ನಾಟಕಕ್ಕೆ 8 ವಿಕೆಟ್ ಗೆಲುವು



ಬ್ರಾಡ್ ಹಡಿನ್

ಪಂಜಾಬ್‌ಗೆ ಹಡಿನ್ ಸಹಾಯಕ ಕೋಚ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ವಿಕೆಟ್ ಕೀಪರ್ ಬ್ಯಾಟರ್ ಬ್ರಾಡ್ ಹಡಿನ್ ಅವರು ಐಪಿಎಲ್ ಫ್ರಾಂಚೈಸಿ ಪಂಜಾಬ್ ಕಿಂಗ್ಸ್ ತಂಡದ ಸಹಾಯಕ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಪಂಜಾಬ್ ತಂಡ ಈಚೆಗೆ ಅನಿಲ್ ಕುಂಬ್ಳೆ ಜಾಗದಲ್ಲಿ ಟ್ರೆವರ್ ಬೇಲಿಸ್ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಿತ್ತು. ಇದೀಗ ಅವರಿಗೆ ನೆರವಾಗಲು 44 ವರ್ಷದ ಹಡಿನ್ ನೇಮಕ ನಡೆದಿದೆ.

'ಹಡಿನ್ ಅವರನ್ನು ಸಹಾಯಕ ಕೋಚ್ ಅಗಿ ನೇಮಕ ಮಾಡಲಾಗಿದ್ದು, ಇತರ ಸಿಬ್ಬಂದಿಯ ನೇಮಕ ಶೀಘ್ರದಲ್ಲೇ ನಡೆಯಲಿದೆ' ಎಂದು ತಂಡದ ಮೂಲಗಳು ತಿಳಿಸಿವೆ.

ಹಡಿನ್ ಮತ್ತು ಬೇಲಿಸ್ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡದ ಪರ ಜತೆಯಾಗಿ ಕಾರ್ಯನಿರ್ವಹಿಸಿದ್ದರು. ಹಡಿನ್ ಆಸ್ಟ್ರೇಲಿಯಾ ಪರ 66 ಟೆಸ್ಟ್, 126 ಏಕದಿನ ಮತ್ತು 34 ಟಿ20 ಪಂದ್ಯಗಳನ್ನು ಆಡಿದ್ದಾರೆ.

ಭಾರತ– ಬಾಂಗ್ಲಾ ಟೆಸ್ಟ್ ಸರಣಿ

ಢಾಕಾ (ಪಿಟಿಐ): ಭಾರತ ಕ್ರಿಕೆಟ್ ತಂಡ ಡಿಸೆಂಬರ್ ತಿಂಗಳಲ್ಲಿ ಬಾಂಗ್ಲಾದೇಶ ಪ್ರವಾಸಕ್ಕೆ ತೆರಳಲಿದ್ದು, ಮೂರು ಏಕದಿನ ಮತ್ತು ಎರಡು ಟೆಸ್ಟ್ ಪಂದ್ಯಗಳ ಸರಣಿ ಆಡಲಿದೆ.

ಮೂರೂ ಏಕದಿನ ಪಂದ್ಯಗಳಿಗೆ ಢಾಕಾದ ಮೀರ್‌ಪುರ ಕ್ರೀಡಾಂಗಣ ಆತಿಥ್ಯ ವಹಿಸಲಿದ್ದು, ಡಿ.4, 7 ಮತ್ತು 10 ರಂದು ನಡೆಯಲಿದೆ ಎಂದು ಬಾಂಗ್ಲಾ ಕ್ರಿಕೆಟ್ ಮಂಡಳಿ (ಬಿಸಿಬಿ) ಅಧ್ಯಕ್ಷ ನಜ್ಮುಲ್ ಹಸನ್ ತಿಳಿಸಿದ್ದಾರೆ.

ಮೊದಲ ಟೆಸ್ಟ್ ಡಿ.14 ರಿಂದ 18ರ ವರೆಗೆ ಚಟಗಾಂವ್‌ನಲ್ಲಿ ಹಾಗೂ ಎರಡನೇ ಟೆಸ್ಟ್ ಡಿ.22 ರಿಂದ 26ರ ವರೆಗೆ ಢಾಕಾದಲ್ಲಿ ಆಯೋಜನೆಯಾಗಿದೆ.

ಭಾರತ ತಂಡ 2015 ರಲ್ಲಿ ಕೊನೆಯದಾಗಿ ಬಾಂಗ್ಲಾ ಪ್ರವಾಸ ಕೈಗೊಂಡಿತ್ತು. ಆ ಪ್ರವಾಸದಲ್ಲಿ ಏಕದಿನ ಸರಣಿಯಲ್ಲಿ 1–2 ರಲ್ಲಿ ಸೋತಿದ್ದ ಭಾರತ, ಏಕೈಕ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಂಡಿತ್ತು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಭಾಗವಾಗಿ ಟೆಸ್ಟ್ ಸರಣಿ ನಡೆಯಲಿರುವುದರಿಂದ ಭಾರತಕ್ಕೆ ತನ್ನ ಪಾಯಿಂಟ್ಸ್ ಹೆಚ್ಚಿಸಲು ಉತ್ತಮ ಅವಕಾಶ ಎನಿಸಿದೆ. ಕಳೆದ ಬಾರಿಯ ರನ್ನರ್ ಅಪ್ ಭಾರತ, ಇದೀಗ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಎಂಸಿಎ ಚುನಾವಣೆ: ಸಂದೀಪ್ ಪಾಟೀಲ್‌ಗೆ ಸೋಲು

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಸಂದೀಪ್ ಪಾಟೀಲ್ ಅವರು ಮುಂಬೈ ಕ್ರಿಕೆಟ್ ಸಂಸ್ಥೆಯ (ಎಂಸಿಎ) ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಮೋಲ್ ಕಾಳೆ ಎದುರು 25 ಮತಗಳಿಂದ ಸೋತರು.

ಗುರುವಾರ ನಡೆದ ಚುನಾವಣೆಯಲ್ಲಿ ಕಾಳೆ 183 ಮತಗಳನ್ನು ಹಾಗೂ ಪಾಟೀಲ್ 158 ಮತಗಳನ್ನು ಪಡೆದರು. ಕಾಳೆ ಅವರು ಬಿಜೆಪಿ ಶಾಸಕ ಮತ್ತು ಬಿಸಿಸಿಐ ನೂತನ ಖಜಾಂಚಿ ಆಶೀಶ್ ಶೆಲಾರ್ ಅವರ ಬೆಂಬಲದೊಂದಿಗೆ ಕಣಕ್ಕಿಳಿದಿದ್ದರು.

ಪಾಟೀಲ್ ಅವರು ಎನ್‌ಸಿಎ ನಿರ್ದೇಶಕರಾಗಿ ಮತ್ತು ಬಿಸಿಸಿಐ ಆಯ್ಕೆ ಸಮಿತಿ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದರು.

ಅಂಕುಶ್‌ಗೆ ಬೆಳ್ಳಿ

ಪೊಂತೆವೇದ್ರಾ, ಸ್ಪೇನ್ (ಪಿಟಿಐ): ಭಾರತದ ಕುಸ್ತಿಪಟು ಅಂಕುಶ್ ಅವರು ಇಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದರು.

ಗುರುವಾರ ನಡೆದ ಮಹಿಳೆಯರ ವಿಭಾಗದ ಸ್ಪರ್ಧೆಯ ಫೈನಲ್‌ನಲ್ಲಿ ಅವರು ಜಪಾನ್‌ನ ಯುಯಿ ಸುಸಕಿ ಕೈಯಲ್ಲಿ ಪರಾಭವಗೊಂಡರು.

ಪುರುಷರ ವಿಭಾಗದಲ್ಲಿ ವಿಕಾಸ್ (72 ಕೆ.ಜಿ) ಮತ್ತು ನಿತೇಶ್ (97 ಕೆ.ಜಿ.) ಅವರು ಕಂಚಿನ ಪದಕ ಜಯಿಸಿದರು.

ಶೂಟಿಂಗ್: ಅನೀಶ್ – ಸಿಮ್ರನ್‌ಗೆ ಬೆಳ್ಳಿ

ಕೈರೊ (ಪಿಟಿಐ): ಭಾರತದ ಅನೀಶ್ ಮತ್ತು ಸಿಮ್ರನ್‌ಪ್ರೀತ್ ಕೌರ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಗುರುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 14–16 ರಲ್ಲಿ ಉಕ್ರೇನ್‌ನ ಯೂಲಿಯಾ ಕೊರೊತ್ಸಿಲೊವಾ– ಮ್ಯಾಕ್ಸಿಮ್ ಹೊರೊದಿನೆತ್ಸ್ ಎದುರು ಸೋತಿತು. ಪದಕಗಳ ಸಂಖ್ಯೆಯನ್ನು 26ಕ್ಕೆ ಹೆಚ್ಚಿಸಿಕೊಂಡಿರುವ ಭಾರತ ತಂಡ, ಚೀನಾ ಬಳಿಕ ಎರಡನೇ ಸ್ಥಾನದಲ್ಲಿದೆ.